ಪ್ರಬುದ್ಧ

ಕರ್ಣಾಟಕ

ಪ್ರಜೋತ್ಪತ್ತಿ ಸಂವತ್ಸರ -೪೭- ವಿನಾಯಕನ ಸಂಚಿಕೆ

ಸಂಪುಟ ೧೩] ವಿಷಯ ಸೂಚಿಕೆ [ಸಂಚಿಕೆ ೧

೧-೩. ಕವಿತೆಗಳು—
೪. ಲಕ್ಷ್ಮೀಶನ ಕಾಲವಿಚಾರ— ಮ॥ ಡಿ. ಎಲ್. ನರಸಿಂಹಾಚಾರ್, ಎಂ. ಎ.
೫. ಕವಿಕಥೆ— ಎ. ಆರ್. ಕೃ.
೬. ಹ್ಯಾಂಲೆಟ್— ಕೈ॥ ಲಕ್ಷ್ಮೀನೃಸಿಂಹಶಾಸ್ತ್ರಿಗಳು.
೭. ಫಾಹಿಯಾನನ ಕ್ಷೇತ್ರಯಾತ್ರೆ— ಮ॥ ಜಿ. ಪಿ. ರಾಜರತ್ನಂ, ಎಂ. ಎ.
೮. ಅಜ್ಜಯ್ಯನ ಅಭ್ಯಂಜನ— ಮ॥ ಕೆ. ವಿ. ಪುಟ್ಟಪ್ಪ, ಎಂ. ಎ.
೯. ಬೈರಾಗಿ (ಸಣ್ಣ ಕಥೆ)— ಮ॥ ಎಂ. ನರಸಿಂಹ ಮೂರ್ತಿ ಬಿ. ಎ.
೧೦. ಪ್ರತಿಮಾನಾಟಕ (ವಿಮರ್ಶೆ)— ಮ॥ ಎ. ಆರ್. ಕೃಷ್ಣಶಾಸ್ತ್ರೀ, ಎಂ. ಎ.
೧೧. ಸಾದರ ಸ್ವೀಕಾರ—
೧೨. ವಸ್ತುಕೋಶ—

ಬೆಂಗಳೂರು
ಸೆಂಟ್ರಲ್ ಕಾಲೇಜಿನ ಕರ್ಣಾಟಕಸಂಘದಿಂದ ಪ್ರಕಟಿಸಲ್ಪಟ್ಟಿದೆ.
೧೯೩೧

All Rights Reserved.

ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ—ಅಂಚೆವೆಚ್ಚ ಸೇರಿ

ಆಶ್ರಯದಾತರಿಗೆ	ರೂ.	೧೦	೦	೦
ಪೋಷಕರಿಗೆ	ರೂ.	೩	೮	೦
ಸಂಸ್ಥೆಗಳಿಗೆ	ರೂ.	೨	೮	೦
ಸಾಮಾನ್ಯ ಚಂದಾದಾರರಿಗೆ	ರೂ.	೨	೦	೦

ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು.

ವಿನಿಮಯ ಪತ್ರಿಕೆಗಳು

ಬೆಂಗಳೂರು:—ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, ದೇಶೀಯ ವಿದ್ಯಾಶಾಲಾ ಪತ್ರಿಕೆ, ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ, ಸ್ಕೂಲು ಮತ್ತು ಸ್ಕೌಟ್ ಪತ್ರಿಕೆ, ಒಕ್ಕಲಿಗರ ಪತ್ರಿಕೆ, ಸುಬೋಧ, ಕುರುಬರ ಪತ್ರಿಕೆ, ಮಕ್ಕಳ ಪುಸ್ತಕ, ಕಲಾ, ಕಥಾಂಜಲಿ, ಸರಸ್ವತಿ, ಬ್ರಹ್ಮಚರ್ಯ, ವಿಶ್ವಕರ್ಣಾಟಕ, ಅರ್ಥಸಾಧಕಪತ್ರಿಕೆ, ತಾಯಿನಾಡು, ಮೈಸೂರು ಸಹಕಾರ ಪತ್ರಿಕೆ.

ಮೈಸೂರು:—ವಿಶ್ವಬಂಧು, ಮೈಸೂರು ಮಕ್ಕಳು.

ತುಮಕೂರು:—ಸ್ಕೂಲ್ ಫೋಕ್.

ನಂಜನಗೂಡು:—ಸತೀಹಿತೈಷಿಣೀ, ಕಾಣಿಕೆ.

ಚಾಮರಾಜನಗರ:—ಕಾದಂಬರೀ ಸಂಗ್ರಹ.

ಧಾರವಾಡ:—ಕರ್ಮವೀರ, ವಾಗ್ಭೂಷಣ, ಕರ್ಣಾಟಕ ವಿದ್ಯಾಶಾಲಾ ಪತ್ರಿಕೆ, ಜಯಕರ್ನಾಟಕ, ಸ್ವಧರ್ಮ, ಒಕ್ಕಲಿಗರೂ ಒಕ್ಕಲುತನವೂ, Karnataka Historical Quarterly, ಜಯಕರ್ನಾಟಕ ಗ್ರಂಥಮಾಲೆ, ಕರ್ನಾಟಕ ಟೈಮ್ಸ್.

ಹುಬ್ಬಳ್ಳಿ:—ತರುಣಕರ್ಣಾಟಕ, ಲೋಕಮತ.

ಬೆಳಗಾಂ:—ಸಂಯುಕ್ತ ಕರ್ಣಾಟಕ, ಬಂದಾಣೆಯ ಮಾಲೆ, ಸ್ಕೂಲ್ ಬೋರ್ಡ್ ಗೆಜೆಟ್, ಜಿನವಿಜಯ.

ಬಿಜಾಪುರ:—ಶಿವಾನುಭವ, ಉದ್ಯೋಗ, ಚೈತನ್ಯ.

ಬೊಂಬಾಯಿ:—ಪ್ರಬೋಧಕ. **ಗದಗ:**—ಕರ್ನಾಟಕ ಬಂಧು.

ಬಾಗಲಕೋಟೆ:—ಕನ್ನಡಿಗ. **ಅಗಡಿ:**—ಸದ್ಬೋಧಚಂದ್ರಿಕೆ.

ಮಡಿಕೇರಿ:—ಲೋಕಪಾವನ. **ತುಂಗಭದ್ರ:**—ಪ್ರೇಮ.

ಮಂಗಳೂರು:—ರಾಷ್ಟ್ರಬಂಧು, ಕನ್ನಡ ಸಹಕಾರಿ.

ಮದರಾಸು:—ಆರೋಗ್ಯಚಂದ್ರಿಕೆ, ಪ್ರಜಾಮತ.



[ಮಾ॥ ಎಂ. ವಿ. ಸೀತಾರಾಮಯ್ಯನವರಿಂದ.



ಪ್ರಾರ್ಥನೆ

ನಾನು ನೀನೊಂದುವುದೆ ಆನಂದವೆಂದೆನಲು
ಏನಾದರಾನಂದವೆನಗೆ ಬೇಡ ||

ನೀನೆ ನಾನಾದರೆ ತಾನೆಲ್ಲಿ ಆನಂದ ?
ನೀನಿಲ್ಲ ನಿನ್ನ ಸೌಂದರ್ಯವಿಲ್ಲಾ !
ನಾನೆ ನೀನಾದರೆ ನಿನ್ನದಾ ಆನಂದ,
ನಾನಿಲ್ಲ ನನ್ನ ಆನಂದವಿಲ್ಲಾ ! ||

ನಿನ್ನ ಆನಂದವನು ನಾ ನೋಡಿ ನಲಿಯುತಿರೆ
ನನ್ನ ಆನಂದವೆನಗಿಲ್ಲ ನಲಿಯೆ !
ನಿನ್ನಲ್ಲಿ ನಾನಿರಲು ನನ್ನಲ್ಲಿ ನೀನಿರಲು
ನಿನ್ನ ನನ್ನಾನಂದವೆರಡು ಇರಲಿ ||

'ಒಂದುವೆವು' ಎಂಬರಾನಂದವವರಿಗೆ ಇರಲಿ
ಹೊಂದಿರಲಿ ನನಗೆ ನಿನ್ನೊಲುಮೆಯಾನಂದ ! ||

ಗುರುರಾಜಾಚಾರ್ಯ.

ಪರಮೇಶನ ಸಾಕ್ಷಾತ್ಕಾರ

ಅಂಬರ ಚುಂಬಿತ ಶಿಖರವನೆತ್ತಿ
ಕಣ್ಣಿಗೆ ಕಾಣದ ಎತ್ತರಹತ್ತಿ
ಒಸಗೆಯ ಬೆಳಗಿಸೆ ಮುಗಿಲ ಕಿರೀಟ
ನಿಂತಿದೆ ಗರ್ವದಿ ಹಿಮಗಿರಿಕೂಟ
　　ಲೋಕಕೆ ಶಾಂತಿಯ ಕಳೆಚೆದರಿ
　　ಬೆಳಗುವ ಮುಡಿಗೆದರಿ.

೨

ಹಿಮಗಿರಿವಲಯದ ನೀರವಶಾಂತಿಯ
　　ನೀರವತರಗೈಯುವ ತೆರದಿ
ಗಿರಿಶಿರದಲಿ ತಾ ನಲಿದೊಲಿದಾಡುತ
　　ಸುಯ್ಯನೆ ಸುರಿವಳು ದೇವನದಿ.
ಬೆಳ್ನೊರೆಗಳ ತೆರತೆರಗಳ ಮಾಲೆ
ಶುಭ್ರಧವಳ ಹಿಮವಲಯದ ಮೇಲೆ
ನಿರ್ಜರನಾಟ್ಯಾನಂದದಿ ತೇಲೆ
　　ತೋರುವುದೆಮಗಾ ಸುರಲೀಲೆ!
ಶಿಖರದ ನೆತ್ತಿಯ ಎತ್ತರದಿಂದ
ಹೊಯ್ಯನೆ ಸುರಿಯುತ ಇಳಿಯುತ ಬಂದ
　　ತೆರೆಗಳ ಮುತ್ತಿನ ಸಿಂಚನದಿ
ಹಿಮಮಣಿಗಳ ಮಣಿಮಾಲೆಯನೀಯುವೆ
　　ಗಿರಿವರನಿಗೆ, ನೀನಮರನದಿ!

ಮುಂದಿನ ನಿನ್ನಯ ಮಾರ್ಗಕ್ರಮಣದಿ
　　ನಡೆಯಿತು ಯುಗಯುಗಗಳ ಲೀಲೆ!
ಪೂರ್ವಪುರಾಣಗಳೆಲ್ಲಾ ಕತೆಗೊಂ-
　　ಡುವು ನಿನ್ನಯ ದಡಗಳಮೇಲೆ!

ಶ್ರೀರಾಮಾಯಣವಾದುದೆ ನಿನ್ನಾ
ತಿಳಿಯ ಪ್ರವಾಹದ ಹಾದಿಯಲಿ!
ಶಿವಶಕ್ತಿಯರೊಂದಾದುದು ನಿನ್ನಾ
ಅನಂತಮಾರ್ಗದ ಆದಿಯಲಿ!
ಘೋ ಎನುತ ಗಭೀರಸ್ವನದಿಂದ
ಜಾಹ್ನವಿ, ಹಿಮಗಿರಿವಲಯದಲಿ
ಧಾರಾಕಾರದಿ ಸುರಿಯುತ ನೀನು
ವಿಶ್ವವನೊಲಿಸುವೆ ನಲ್ಮೆಯಲಿ!

೩

ಇಳೆಯಾಕಾಶಗಳೆಲ್ಲವು ನಿಂತಿವೆ
ತಿಮಿರಬ್ರಹ್ಮಸಮಾಧಿಯಲಿ.
ಕತ್ತಲ ಹಕ್ಕಿಯು ಪ್ರಕೃತಿಯ ಮುಚ್ಚಿ
ಹರಡಿದೆ ಕೆದರಿದ ರೆಕ್ಕೆಗಳ.
ಮೂಡಲು ಪಡುವಲು ಬಡಗಲು ತೆಂಕಲು
ಮೇಲ್ಕೆಳಗೆಲ್ಲಾ ಕವಿದಿದೆ ಕತ್ತಲು.
ಕಾಣದ ಬಾನೊಳು ಚುಕ್ಕಿಗಳಿಲ್ಲ
ಚಂದ್ರನ ಶೀತಲ ಕಿರಣಗಳಿಲ್ಲ.
ತಪ್ಪಲ ಬನಗಳ ಮರಗಳ ಮೇಲೆ
ಖಗಗಳ ಸಂಜೆಯ ಗಾನದ ಲೀಲೆ
ತಾಳಿದೆ ಆಳದ ಮೌನವನು!
ಧವಳಹಿಮದ ನವವಸನವನುಟ್ಟ
ರಜತಮಹಾದ್ರಿಯ ರಾಜಿಪ ಕೂಟ
ಅದರ ತುಷಾರಾವೃತದ ಕಿರೀಟ
ಎಲ್ಲವಗೋಚರವಾಗಿಹುವು
ಕತ್ತಲ ಮಾಟಕೆ ತಾಗಿಹುವು.
ಬಳ್ಳಿಗಳಿಂ ಬಾಡಿದ ಪುಷ್ಪಾವಳಿ
ನೆಲಕುದುರುವ ಮೆಲ್ದನಿಯಿಲ್ಲ.

ತಳಿರೆಲೆಗಳ ಮೇಲಿಂದುದುರುವ ನವ
ಹಿಮಮಣಿಗಳ ಕಿರುದನಿಯಿಲ್ಲ.
ಬೆಚ್ಚನೆ ಪೊಟ್ಟರೆ ಮನೆಗಳಲಿರುವ
ಖಗಗಳ ರೆಕ್ಕೆಯ ಸಪ್ಪಳವಿಲ್ಲ.
ರಾತ್ರಿಂಚರವಹ ಗೂಬೆಯ ಭೀಕರ
ಕಂಠಘೋಷಣದ ಬಿರುದನಿಯಿಲ್ಲ.
ಅಭಯ ಚತುರ್ಭುಜವೆತ್ತಿ ನಿಂತಿರುವ
ಶಾಂತಿದೇವತೆಯ ವಿಗ್ರಹವೊಂದೇ
ನಿಂತಿರುವುದು ಕಣ್ಮನಗಳಲಿ
ನದಿಮಲೆ ಬನಗಳಲಿ.

ಅದೊ ಏನದು ? ಮೂಡಲ ಕಡಲಿನಲಿ
ಏರುವುದೆಳೆತಿಳಿಬೆಳಕೊಂದು !
ಚಂದ್ರೋದಯವನು ಸಾರಲು ಬಂದ
ಬೆಳಕಿನ ಹರಿಕಾರನ ತೆರದಿ !
ತಿಮಿರದಿ ಶರ್ವರಿ ಪಡುತಿಹ ಕನಸೋ !
ಬೆಳಕಿಗೆ ತಮವೆತ್ತುವ ಆರತಿಯೋ !
ಬಾನ್ವೆಣ್ಣಿನ ಕುಂಕುಮದರೆಬೊಟ್ಟೋ !
ಎನುವೊಲು ಮೂಡಿತು ಬೆಳಕೊಂದು.
ಜೊನ್ನಿನ ಹೊನ್ನಿನ ಕಳೆಯನು ಬೆಳಗಿಸಿ
ಮೂಡಲ ಮಲೆಗಳ ಮುಡಿಗಳ ತೊಳಗಿಸಿ
ಏರಿತು ನಭದಲಿ ಬೆಳಕೊಂದು.
ಜಾರಿತು ಕತ್ತಲೆ ಹಿಂಜರಿದು.
ಮರಗಳ ನೆಳಲಲಿ ಹೊಂಚನು ಹಾಕುತ
ಚೋರರವೊಲು ಅಡಗಿತು ತಿಮಿರ.
ಒಂದೇ ಜ್ಯೋತಿಯ ಆಲಿಂಗನದಲಿ
ಸೇರಿತು ಪ್ರಕೃತಿಯ ವಿಸ್ತಾರ !
ಕಾಮುರ್ಗಿಲುಗಳಿಗೆ ಬೆಳಕನು ನೀಡುತ

ಬಾನಿನ ಪಥದಲಿ ಅಡಿಯಿಡುತ
ಪ್ರಕೃತಿಯ ನಾಟ್ಯವ ಮೇಲಿಂ ನೋಡುತ
ಹೃದಯದಲೇ ಸಂತಸಪಡುತ
ಸಕಲದಿಗಂತಗಳಾಲಿಂಗನದಿಂ
ಬೆಳ್ಮುಗಿಲುಗಳೊಲ್ಮೆಯ ಚುಂಬನದಿಂ
ಹಿಗ್ಗುತ ಬೀಗುತ ನಗೆಯನು ಸೂಸಿ
ಚಂದ್ರನು ಪೂರ್ವದಿ ಮೂಡಿದನು,
ಮಂದರುಚಿಯಲಿ ಮೂಡಿದನು.

ಒಡನೆಯೆ ಕಾಣಿಸಿದುವು ಚುಕ್ಕಿಗಳು,
ಹಾಡಿದುವೊಡನೆ ಇರುಳ್ವಕ್ಕಿಗಳು,
ಮಲಗಿದ ಪ್ರಕೃತಿಯ ಚಿತ್ತರವೆಲ್ಲಾ
ಗಾಢಸುಷುಪ್ತಿಯ ತೊರೆದೆದ್ದು
ನಿಂತಿತು ಚಿರಜಾಗೃತಿಯಾಂತು.
ನಲ್ಲನ ದೂರಸಮಾಗಮವೀಕ್ಷಿಸಿ
ಬಿಂಕದಿ ಬಳುಕುವ ನೀರೆಯೊಲು,
ಹಿಮಗಿರಿ ಮೆಲ್ಮೆಲ್ಲನೆ ಕಳೆಯೊಸರುತ
ಪೂರ್ಣಾನಂದದಿ ಕಾಣಿಸಿತು.
ತಿಮಿರದ ಸಂಯಮ ಫಲಿಸಿದ ತೆರದಿ
ತಿರೆ ಪಡೆಯಿತು ಕೃತಕೃತ್ಯತೆಯ,
ಸೃಷ್ಟಿಯೆ ಹರಡಿತು ದಿವ್ಯತೆಯ.
ಶೀತಲಕಿರಣಾವಳಿ ಸಂಸರ್ಗ
ಭೂತಲಕಾದುದು ಅಮರಸ್ವರ್ಗ!
ಅಂಬರಗಂಗಾವೀಚಿಗಳ
ಚುಂಬಿಪ ಶಶಿಯ ಮರೀಚಿಗಳ
ತಂಬೆಳಕನು ಬೀರುತ ಕಾಲ್ವೆಗಳಲಿ
ಬಿಂಬಿಸಿದುವು ಕಿರಣಗಳೊಲ್ಮೆಯಲಿ,
ಹೊನ್ನಿನ ತಗಡಿನ ವರ್ತುಳದಂತೆ

ತಿಂಗಳು ತುಂಬಿದ ಕಲಶದ ತೆರದೆ
ಹೊನ್ನಿನ ಸೊನ್ನೆಯು ಮೂಡಿದುದು!

೪

ಶಾಂತಿಯ ಮುದ್ರೆಯುಲಲುಗದೆ ನಿಂತಿಹ
ಇಂತಹ ಪ್ರಕೃತಿಯ ಚಿತ್ರವನು
ವೀಕ್ಷಿಸಿ ಋಷಿಗಳು ಕಬ್ಬಿಗರೆಲ್ಲಾ
ವಿಶ್ವಾನಂದವನೊಂದುವರು.
ಸೃಷ್ಟಿಯ ಹಿಂದಿನ ಪ್ರಗತಿಯ ನೆನೆಸುತ
ಅಮರತೆಗೇರ್ವನು ಬ್ರಹ್ಮರ್ಷಿ.
ವಿಶ್ವದ ಮುಂದಿನ ಮಾರ್ಗಕ್ರಮಣವ
ದೃಷ್ಟಿಸಿ ನಲಿವನು ಕಾವ್ಯರ್ಷಿ.
ಜೀವನತತ್ತ್ವವ ದಿವ್ಯಾದರ್ಶಕೆ
ಹೊಂದಿಸಿ ನೋಳ್ಪನು ದೇವರ್ಷಿ.
ಜೀವನತತ್ತ್ವದಲೇ ಆದರ್ಶವ
ಚಿತ್ರಿಸಿ ಕಾಂಬನು ಕಾವ್ಯರ್ಷಿ.
ಬ್ರಹ್ಮಾನಂದವ, ಕಾವ್ಯಾನಂದವ
ಒಂದಾಗಿಸಿ ಬಲುವಿಶ್ವಾನಂದವ
ನೀಡುವ ಶಕ್ತಿ ವಿಚಿತ್ರವಿದು
ಪ್ರಕೃತಿಯ ಚಿತ್ರವಿದು!
ಇದನೇ ಕವಿಗಳು ತವಸಿಗಳೆಲ್ಲಾ
ನೋಡುತ ಕರೆದರು ಶಂಕರನೆಂದು.
ಅದನೇ ವೇದಪುರಾಣಗಳೆಲ್ಲಾ
ಕರೆದುವು ಸಾಕ್ಷಾತ್ಕಾರವಿದೆಂದು,
ಶಿರದಲಿ ಶಶಿಯನು ಮುಡಿದಿಹನೆಂದು
ಜಟೆಯಲಿ ಜಾಹ್ನವಿ ಹರಿಯುವಳೆಂದು
ಹಣೆಗೆ ವಿಭೂತಿಯ ಬಳಿದಿಹನೆಂದು
ಕೊರಳಲಿ ನಂಜಿನ ಗುರುತಿದೆಯೆಂದು

ಇದನೇ ದೇವನ ಮನೆಯೆಂದು
ಹಿಮಗಿರಿಯೆಂದೆಂದು !

ಮೂಡಲ ಶಶಿ ಹಿಮಕೂಟದ ತಟದಲಿ
ಹಿರಿರನ್ನದವೊಲು ಮಕುಟದಲಿ
ನಿಂತಿರೆ ಜಾಹ್ನವಿ ಸುಯ್ಯನೆ ಸುರಿವಳು
ಶಿರದಿಂ ಕೆಳಗಡೆ ಹರಿಯುವಳು.
ಗಿರಿವನಗಳ ಹಿರಿಮರಗಳ ನೆಳಲೇ
ಕೊರಳಲಿ ನಿಂತಿಹ ಸಂಜಿನ ಗುರುತು
ಗಡ್ಡೆಯು ಮಂಜಿ ಜಟಾಜೂಟ,
ಶಿರವೇ ಹಿಮಕೂಟ!

ಇದೆ ತಾ ಸೃಷ್ಟಿಯ ಗಹನವಿಚಾರ!
ಇದೆ ಪರಮೇಶನ ಸಾಕ್ಷಾತ್ಕಾರ!
ನಶ್ವರ ಶಾಶ್ವತಭೇದವ ಮರೆತು
ವಿಶ್ವರಹಸ್ಯವು ತೋರುವುದಿಲ್ಲಿ
ಪಾಶದೊಳಡಗಿದ ಆತ್ಮವು ತಳಿತು
ಜೀವನ್ಮುಕ್ತಿಯ ಫಲಿಸುವುದಿಲ್ಲಿ!
ಇದೆ ಶಿವನಾತ್ಮಸ್ಪರ್ಶನವು
ಬ್ರಹ್ಮದ ದರ್ಶನವು!

—ಜಿ. ವಾಸುದೇವರಾವ್.

ಮರದೆದುರಲ್ಲಿ

ಹಗಲನ್ನು ಇರುಳುಗಳು ಹಿಂಬಾಲಿಸುತ್ತಿರಲು,
ನೀನಿನ್ನ ತನಿಗಂಪು ಸೂಸುತ್ತ ಬೆಳೆಯು.
ನೇಸರಸ ಬಿಸಿಲಲ್ಲಿ ಬಳಲುತ್ತ, ತಿಂಗಳಿನ
ತಣ್ಪೀವ ಜೊನ್ನದಾ ಸೊಂಪಿನಲಿ ತಣಿಯು.
ಕೆಲಹೊತ್ತು ಬಾಳ್ದಳಿವ ತಿರೆಯಲ್ಲಿ ನೀಯೊಮ್ಮೆ,
ಮರೆಯುತ್ತ ತಂಬೆಲರ ಸೊಗಸಿಂಗೆ ತೂಗು.
ತುಂಬಿಗಳು ಹಾಡುಗಳನುಲಿವಂದು, ನೆನೆಯುತ್ತ
ಕೊರಲನ್ನು ಒಲೆದಾಡಿ, ತಿರವಾಗಿ ನಿಲ್ಲು ॥

ಕತ್ತಲೆಯು ಕಣ್ಬಿಟ್ಟು ಚುಕ್ಕಿಗಳು ಮಿಣುಗೆ,
ಎಳಬಿಸಿಲ ಉಸಿರಲ್ಲಿ ಹಕ್ಕಿಗಳು ಉಲಿಯೆ,
ಕಿತ್ತೊಡಲ ಚಿಗುರನ್ನು—ಮೊನೆಮುಗುಳ ಹುವ್ವನ್ನು
ಕ್ರಮವಾಗಿ ನೆಗಚುತ್ತ ಸೊಗಸನ್ನು ಬೀರು ॥

ಮುಂಬರಿವ ತಂಗಾಳಿ ಬಳಿಯಲ್ಲಿ ಸುಳಿಸುಳಿಯೆ,
ತರಗೆಲೆಯನುದುರಿಸಲು ನೀ ಕಂಪಿಸೊಮ್ಮೆ.
ಅಲ್ಲೊಂದು ಇಲ್ಲೊಂದು ಹಳದೆಲೆಯು ಕೆಡಿಸುವುದು
ಮೆಲ್ತಳಿರಗೊಂಚಲಿನ ಓರಗೆಯ ಚೆಲುವು.
ಮುಂಜಾನೆ ಸಸುಗಾಳಿ ಮೆಲ್ಲಡಿಯ ನಡೆಯಲ್ಲಿ
ಉಜ್ಜುಗದ ಬೆಜ್ಜರದ ಮನದಿಂದ ಸುಳಿಯೆ,
ನೀನಿನ್ನ ಹೂತಳಿರ ಇನಿಗಂಪ ಬೀಸಣಿಗೆ
ಬೀಸುತಲಿ ಬಳಿಯೆಲರ ಅಲಸಿಕೆಯ ತೂರು ॥

ಮುಂಜಾನೆ ತಂಗಾಳಿ ತಿಳಿಗಾಳಿಯಾಗಿ,
ಅಜ್ಞಾನಮೇಘಗಳ ಬದಿಗೊತ್ತಿ, ಜನರ
ಮನಸಿನಾ ಮುಂಬಾನ ಶುಭ್ರತೆಯ ಗಳಿಸೆ
ಗಂಡಸಿನ ಬೀರವದು ಬೆಳಗುವುದು ನಿಜದೆ ॥

ಇಬ್ಬನಿಯ ಅಡಿಯಲ್ಲಿ ತನಿ ಜೇನು ಮಿರುಮಿರುಗೆ,
ಅಲೆದಲೆದು, ಉಲಿದುಲಿದು, ಬಿರಿಪುವ್ವ ಮೊಗಕೆ
ಬಂಡುಣಿಯು ಮುತ್ತಿಡಲು, ಹೂತಳಿರ ಇಬ್ಬನಿಯ,
ತುಂತುರಿನ ಹಿರಿಸಲ್ಮೆಗಂಬನಿಯ ಮಿಟುಕು;
ತೊಡಕುಗಳು ಸರಿದಂದು, ಬಂಡುಣಿಯು ಸೊದೆಜೇನ
ಸುಣುವಂದು ಎಲೆ ಮರವೆ, ನಡುಗೊಮ್ಮೆ ಯಿನಿತು:
ಆ ದುಂಬಿಯಾಗ ತುಸು ಬೆದರುತ್ತ, ಮೊಗವೆತ್ತಿ,
ನಸುನಕ್ಕು, ತಿರಿಗೊಮ್ಮೆ ಕುಡಿಯುತ್ತಲಿರಲಿ ॥

ತುಂಬಿಗಳು ಹುವ್ವುಗಳ ಜೇನನ್ನು ಹೀರೆ,
ಪರಿಮಳವು ದೆಸೆಗಳಿಗೆ ಹರಡುವುದು ಮಿಾರೆ,
ಬೆಳಗಾಗೆ, ಸವಿತಿಳಿದ ತುಂಬಿಗಳ ಒಸಗೆ
ಸವಿಹಾಡ ಸವಿವಾತ ಸವಿಯೊಂದು ತಿರೆಗೆ ॥

ಎಳದಳಿರ ಹಸುರೊಳಗೆ, ಅರೆಬಿರಿದ ನನೆಯಲ್ಲಿ,
ಕಾದಿಟ್ಟು ಯಿಬ್ಬನಿಯನಲ್ಲಿಂದ ನೀನು,
ಆರಡಿಯ ಮರಳಿಸುತ, ಎಳೆಬೆಳಗ ಕಾವನ್ನು
ತಣಿಸುತ್ತ, ಹುವ್ವುಗಳ ಕಾಪಿನಲಿ ತೊಡಗು.

ಅರೆಬಿರಿದ ಮೊಗ್ಗುಗಳ ಒಳಹೊಕ್ಕು ತುಂಬಿಗಳು,
ಎಸಳುಗಳ ಸಡಲಿಸುತ ತೋರಿಕೆಯ ನಗೆಯ,
ಮುಗುಳಿಂಗೆ ಈಯಲದು–ತುಂಬುನಗೆ ಮುಗ್ಗುವುದು;
ಮುಗ್ಗಲದು ನಲವಿಳಿದು ಸಿರಿಸೊನ್ನೆಯಹುದು ॥

ಕುಡಿಗಳೊಳು ಜೇನಿಂಗೆ ಸವಿಯಿಲ್ಲವಿನಿತು—
ಆರಡಿಯ ರಸಿಕಂಗೆ ಪುಸಿಸವಿಯು ಕಸವು.
ಪುಸಿಹೊತ್ತ ಬಾಳುವೆಯ ಕೃತ್ರಿಮದ ಸೊಗಸು
ಸೊಂಪನ್ನುಕೊಡುವುದೇ ನೈಸರ್ಗದಳಿಗೆ? ॥

ತುತ್ತತುದಿ ತಳಿರುಗಳ ತೊಟ್ಟಿಲಲಿ ಪವಡಿಸಿದ
ಬಿರಿಪುವ್ವೆ, ನೀನೆದ್ದು ಕೆಳಗದರ ಉರುಳು

ತುಂಬಿಗಳ ನಲಪಿಂದ ತೊನೆಯುತಿಹ ತೂಗುಯ್ಯ-
ಲೊಂದಲ್ಲಿ ಇರುತಿಹುದು. ತಿರಿಗೊಮ್ಮೆ ಉರುಳು.
ಇಲ್ಲೊಂದು ತೋಳುಗಳ ತಳ್ಕೆಯಲಿ ರೋಮಾಂಚ
ಸುಖವನ್ನು ತಳೆಯುತ್ತ ಮಗುದೊಮ್ಮೆ ಬೀಳು.
ತಳಿರಿಂದ ತಳಿರಿಂಗೆ ಗೆಲ್ಲಿಂದ ಗೆಲ್ಲಿಂಗೆ
ಉರುಳುತ್ತ ಮೆಲ್ಲಾಪ ನೆಲದಲ್ಲಿ ಮಲಗು ॥

ತೊಟ್ಟ ದರಿಮೇಲಿಂದ ಕೆಳಗುರುಳೆ ನೆಲಕೆ,
ಬಂಧುಗಳ ಸಾಂತ್ವನದ ಆರೈಕೆ ತಿಳಿಯೆ,
ಬೀಳುವಿಕೆ ದುಗುಡವನು ಸಂತೈಸಿ ಬಳಿಕ
ಸಾವನ್ನು ಸಾವಿನೊಳೆ ಮರೆಸುವುದು ಮರವೆ ॥

ನೇಸರನ ಬಿರುಬಿಸಿಲು ಮೆರೆಮೆರೆಯೆ, ಹಕ್ಕಿಗಳ
ಮೆಲ್ನುಡಿಗಳೋಲಾಡೆ ಗೂಡಿನೊಳಗೊಳಗೆ,
ಸನಿಹದಲಿ ಹರಿಯುತಿಹ ಹಳ್ಳಗಳ ತೊದಲುಲಿಯ
ಹಾಡುಗಳನಾಲಿಸುತ ಬಗೆಯನ್ನು ತಣಿಸು.
ಆರಿಸಲು ನಡುಪಗಲ ದಣಿವನ್ನು ಹಸು ಮೇಕೆ
ಮೆಲುಕಾಡೆ ನಿನ್ನಯಡಿ ತಣ್ಣೆಳಲ ಸೇರೆ,
ಬಾಸಿನಲಿ ಪಸರುತ್ತ ಮೋಡಗಳು ಪಡಿನೆಳಲ
ತಂಪನ್ನು ನಿಸಗಿತ್ತು ಆಸರೆಯನೀಯೆ ॥

ಚಿಗುರೆಲೆಯು ನೆರೆಮುದುಡಿ, ಮುಗ್ಗರಿಸಿ ಬರಲು,
ಕಂಬನಿಯು ಕರೆಯುತ್ತ, ಮೋಡಗಳು ಸುರಿಯೆ,
ಕಿರುಮಳೆಯ ನುಣ್ಬನಿಯು ಸೋನೆಯಲಿ ಮಿಂದು,
ಮುಂಬನಿಯು ಒಲವನ್ನು ಪೊಗಳುವರು ಜನರು ॥

ಹೂಬಿಸಿಲ ಬೈಗಿನಲಿ ಅಣುಗಿಯರು ಕೂಡುತ್ತ
ಮೆರೆಯುತ್ತ, ಪಾಡುತ್ತ, ನಿನ್ನಡಿಯ ಸೇರಿ,
ಬಗ್ಗಿರುವ ಕೊಂಬೆಗಳನೆಳೆಯುತ್ತ, ತನಿವಣ್ಣ
ಕೊಯ್ಯುತ್ತ, ಸವಿಯನ್ನು ಸವಿಯುತ್ತ, ನಿನ್ನ

ಕೊಂಬೆಗಳಿಗುಯ್ಯಾಲೆ ಇಳಿಸುತ್ತಲದರಲ್ಲಿ
ತೂಗುತ್ತ, ಬೆದರುತ್ತ, ಇನ್ನೊಮ್ಮೆ ತೂಗಿ,
ತೂಗನ್ನು ನಿಲ್ಲಿಸಲು ಅಸವಳಿಯೆ, ಕತ್ತಲೆಯ
ಒತ್ತಿನಲಿ ಅಣುಗರಿಗೆ ಮೊರೆಯನ್ನು ಇಡಲಿ ॥

ತೂಗಾಟದಾನಂದ ಕೂಗಾಟವಾಗೆ,
ಕೊಂಬೆಯಲಿ ಕುಳಿತಿದ್ದ ಅಣಗರುರೆ ಹಿಗ್ಗಿ,
ಅಣುಗಿಯರ ನಡುನಿಂತು, ಅವರನ್ನು ಇಳಿಸೆ
ಬಗೆಯುತ್ತ, ಉಯ್ಯಾಲೆ ಹಗ್ಗವನು ಹಿಡಿದು
ಇಳಿಯುತಿರೆ, ಉಯ್ಯಾಲೆ ತೂಗಿಂತು ನಿಂತು,
ಅಣುಗಿಯರು ಕೆಳಹಾರಿ, ನಸುನಕ್ಕು ಓಡೆ,
ಅಣುಗರಾ ಅಚ್ಚರಿಗೆ ಕೊನೆಯೊಂದು ಉಂಟೇ?
ಕನ್ನೆಗಳ ಗೆಲುವಿಂಗೆ ಸರಿಯುಂಟೆ ಗೆಳೆಯ? ॥

ಅಂತಾಗೆ, ಗಿಡಬಳ್ಳಿ ಮರವೊದರ ಹಸುರನ್ನು
ಬಲ್ಗತ್ತಲೆಯ ಕಪ್ಪು ಆವರಿಸಿ ಬರಲು,
ಎಲೆ ಮರವೆ ಮೂಡಿರುವ ಚುಕ್ಕೆಗಳನೆಣಿಸಲ್ಕೆ
ಬಗೆಯುತ್ತ ಲೆಕ್ಕಿಸುವ ಪಡಿನೂರನೂರ್ಗೆ
ಹೊರಸೂಸು ಹೊಸತೊಂದು ಚಿಗುರನ್ನು ಬಳಿಕೆಣಿಕೆ
ತಪ್ಪುತ್ತ, ನಿನ್ನಲ್ಲಿ ಆಸರೆಯ ಪಡೆದ
ಹಕ್ಕಿಗಳ ಗೂಡುಗಳ, ಗೂಡುಗಳ ಪಕ್ಕಿಗಳ
ನೆಣಿಸುತ್ತ ಲೆಣಿಸುತ್ತ ನಿದ್ದೆಯನು ಹೊಂದು ॥

ಕರಿಮುಗಿಲ ನಡುನಿಂತ ಬಿಳಿಮುಗಿಲ ಮರೆಗೆ
ತಿಂಗಳನು ನಡೆತಂದು, ಬೆಳದಿಂಗಳೊಸರೆ,
ಕನಸೊಂದ ನೀ ನಾಂತು, ತಿರಿಗೊಮ್ಮೆಯವನು
ಗಹಗಹಿಸಿ ನಗುವಾಗ ಎಚ್ಚೆತ್ತು ನೆನೆಯು.
ಕನಸೊಳಗೆ, ನೂರಾರು ಹಣ್ಣುಗಳ ಹೊತ್ತು
ಹಾಸಿಗೆಯ ನೆಲದೊಳಗೆ ಬಗ್ಗುತ್ತ ಮಲಗು.

ಎಳನುಕ್ಕಳೊಂದಾಗಿ ಹಿಗ್ಗುತ್ತ ಬಂದು
ನಲವೇರಿ ತನಿವಣ್ಣ ಕೊಯ್ಯುವುವು ಸಿಂದು.
ಗೂಡುಗಳ ಹಕ್ಕಿಗಳು ಮಕ್ಕಳಿಗೆ ಬೆದರೆ
ಹಲ ಕೆಲವು ಹಕ್ಕಿಗಳು ನೊರೆಯುತ್ತ ಪಾರೆ,
ಕೆಲಕೆಲವು ಪಕ್ಕದಲಿ ಮರಿಗಳನ್ನಡಗಿಸೆ,
ಚೀರುತ್ತ ಬಾನಿಂಗೆ ಕೊನೆಗಣ್ಣು ತೋರೆ,
ಕನಸಿನಾ ಗಲಿಬಿಲಿಯ ಸೀ ಕೇಳಿ ಬೆದರಿ,
ಕಂಪಿಸುತ ನಸುಗಾಳಿ ಹೊರಡಿಸುತಲೊಡನೆ ?
ನನಸಾಂತು ಕೇಳುವೆಯ ಸೊಗವಕ್ಕಿವಾತು ?
'ಇರುಳನ್ನು ಸುಖದಿಂದ ಕಳೆದಿಹೆವು'ಯೆಂದು ?

ಜಿ. ವಾಮನ ಭಟ್ಟ,
ಮಿತ್ರಮಂಡಲಿ ಮಂಗಳೂರು.

ಲಕ್ಷ್ಮೀಶನ ಕಾಲವಿಚಾರ

ಲಕ್ಷ್ಮೀಶನ ಕಾಲದೇಶಮತಗಳ ವಿಷಯವಾಗಿ ಇದುವರೆಗೆ ಅನೇಕ ಚರ್ಚಾತ್ಮಕವಾದ ಲೇಖನಗಳು ಅಚ್ಚಾಗಿ ಹೊರಬಿದ್ದಿವೆ. ಆ ಲೇಖನಗಳೆಲ್ಲವನ್ನೂ ನಮಗೆ ತಿಳಿದಮಟ್ಟಿಗೆ ಇಲ್ಲಿ ಸೂಚಿಸಬಹುದು.—

(೧) ಎಚ್.ಎಚ್.ವಿಲ್ಸನ್.— Catalogue of Mackenzie manuscripts, Page 305. 1828, Calcutta. ಕಾಲ, ೧೩ನೆಯ ಶತಮಾನದ ಆದಿ.

(೨) ಹಿರಣ್ಯಗರ್ಭಕವಿ.[1] —'ವಿಶ್ವಕೃತಿ ಪರೀಕ್ಷಣ' ೧೮೭೩

(೩) ಕಿಟ್ಟಲ್.—Indian Antiquary Vol. IV. Page 22. ಛಂದೋಂಬುಧಿಯ ಪೀಠಿಕೆ. LXXI. ೧೭೬೦

(೪) ರೈಸ್. — ಶಬ್ದಾನುಶಾಸನದ ಉಪೋದ್ಘಾತ. ಪುಟ ೪೬. ೧೭೧೫

ಭಾಷಾಭೂಷಣದ ಪೀಠಿಕೆಯಲ್ಲಿನ ಇತಿಹಾಸ. ಪುಟ ೩೨. ೧೬೯೧

(೫) ಶ್ರೀಮಾನ್ ಆರ್. ನರಸಿಂಹಾಚಾರ್ಯರು— ಕರ್ಣಾಟಕ ಕವಿಚರಿತೆ. II ಪುಟ ೫೨೩. ೧೭೦೦

(೬) ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರು — ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ. ಸಂಪುಟ V ಪುಟ ೧–೧೨. ೧೪೧೫ (?)

(೭) ಕೆ. ರಾಮಸ್ವಾಮ್ಯೈಯಂಗಾರ್ಯರು.— ಕ. ಸಾ. ಪ. ಪತ್ರಿಕೆ. VI ೨೮೭–೨೯೪. —

(೮) ಕೆ. ರಾಮಸ್ವಾಮ್ಯೈಯಂಗಾರ್ಯರು. — ಕ. ಸಾ. ಪ. ಪತ್ರಿಕೆ. VI. ೫೩–೫೬. —

---

1 ಈ ಕವಿಯು ತನ್ನ ಗ್ರಂಥದಲ್ಲಿ ಚೆನ್ನಬಸವಪುರಾಣಕ್ಕೂ ಜೈಮಿನಿಭಾರತಕ್ಕೂ ಇರುವ ಸಾಮ್ಯವನ್ನು ಪರಿಶೀಲಿಸಿ ಹೋಲಿಕೆಯುಳ್ಳ ಅಥವಾ ಸಮಭಾವೆಯುಳ್ಳ ಪದ್ಯಗಳನ್ನು ಕಂಡುಹಿಡಿದು ಅವುಗಳನ್ನು ಎದುರುಬದುರಾಗಿ ಬರೆದಿದ್ದಾನೆ.

(೯) ಶ್ರೀಮಾನ್ ಆರ್. ರಾಮರಾಯರು.—
ಜೈಮಿನಿ ಭಾರತಕಥಾಸಂಗ್ರಹ. ಪೀಠಿಕೆ. ಪುಟ XXXI
೧೫ನೆಯ ಶತಕದ ಅಂತ್ಯ, ೧೬ನೆಯ ಶತಕದ ಆದಿ.

(೧೦) ಶ್ರೀಮಾನ್ ಸಾ.ಶ್ರೀ. ರಾಜಪುರೋಹಿತರು
—ಕ. ಸಾ. ಪ. ಪತ್ರಿಕೆ, VIII. ೨೪೨–೨೫೨. ೧೫೨೦

(೧೧) ಶ್ರೀಮಾನ್ ಗೋವಿಂದ ಪೈಗಳವರು—
ಕರ್ಣಾಟಕ ಕೇಸರಿ. ಸಂ. ೨. ಸಂಚಿಕೆ ೨-೬ ೧೩೩೫–೧೩೫೩

(೧೨) — ಸುಬೋಧ[2] —

(೧೩) ದೊಡ್ಡಮನೆ ರಾಘವಯ್ಯಂಗಾರ್ಯರು.—
ಜಯಕರ್ನಾಟಕ. ಸಂಪುಟ VII. —

(೧೪) ದೇವನೂರಿನ ಸ್ಥಳಪುರಾಣ.— ೧೧೩೭

ಈ ಲೇಖನಗಳಲ್ಲದೆ ಕ. ಸಾ. ಪ. ಪತ್ರಿಕೆ (ಸಂಪುಟ ೩-ಪುಟ ೫೨-೬೫) ಯಲ್ಲಿ ಲಕ್ಷ್ಮೀಶನ ಕವಿತಾನೈಪುಣ್ಯವನ್ನು ವಿಮರ್ಶಿಸುವ ಒಂದು ಲೇಖನವೂ, ೧೯೨೦ನೆಯ ಇಸವಿಯ ಸೆಪ್ಟೆಂಬರ್ ೨೦ ಮತ್ತು ಅಕ್ಟೋಬರ್ ೨೬ ಈ ತಾರೀಖುಗಳ 'ಕಂಠೀರವ'ದ ಸಂಚಿಕೆಗಳಲ್ಲಿ ಎರಡು ಲೇಖನಗಳೂ, ೧೯೨೧ನೆಯ ಇಸವಿಯ ಮೇ(೧೩,೧೪,೧೬)ನೆಯ ತಾರೀಖುಗಳ 'ಸಂಪದಭ್ಯುದಯ'ದ ಸಂಚಿಕೆಗಳಲ್ಲಿ ಮೂರು ಲೇಖನಗಳೂ ಅಚ್ಚಾಗಿ ಬಂದಿವೆ ಎಂದು ತಿಳಿದುಬರುತ್ತದೆ. ಆದರೆ ನಾವು ಕೊನೆಯ ಎರಡು ಲೇಖನಗಳನ್ನು ನೋಡಿಲ್ಲ. ಈ ಎಲ್ಲ ಲೇಖನಗಳನ್ನೂ ನೋಡಿದರೆ ಲಕ್ಷ್ಮೀಶನ ಕಾಲವು ೧೧೩೭ ರಿಂದ ೧೭೬೦ರ ವರೆಗೆ ಇರುವ ಅಂತರದಲ್ಲಿ ತೂಗುಯ್ಯಾಲೆಯ ಹಾಗೆ ಆಡುತ್ತಿದೆ ಎಂಬುದು ವ್ಯಕ್ತವಾಗುತ್ತದೆ. ಇಷ್ಟು ಜನ ಲೇಖಕರ ಪ್ರಯತ್ನವು ಸ್ತುತ್ಯರ್ಹವಾದರೂ ಒಬ್ಬರಾದರೂ ಹಿಡಿತಕ್ಕೆ ಸಿಕ್ಕುವ ನಿಷ್ಕೃಷ್ಟವಾದ, ಚಲಿಸಲಸಾಧ್ಯವಾದ ಆಧಾರವಾವುದನ್ನೂ ಕೊಟ್ಟಿಲ್ಲ. ಶ್ರೀಮಾನ್ ಗೋವಿಂದಪೈಗಳು ಹೇಳುವ ಹಾಗೆ 'ಕರ್ಣಾಟಕ ಕುವಲಯಾನಂದ'ವು

---

2 ಈ ಲೇಖನದಲ್ಲಿ ಗೋವಿಂದವೈದ್ಯನ ಕಂಠೀರವ ನರಸರಾಜವಿಜಯಕ್ಕೂ, ಜೈಮಿನಿ ಭಾರತಕ್ಕೂ ಹಲವೆಡೆಗಳಲ್ಲಿ ಹೋಲಿಕೆ ಇದೆ ಎಂದು ಪ್ರತಿಪಾದಿತವಾಗಿದೆ.

೧೬೭೪ ರಲ್ಲಿ ರಚಿತವಾಗಿದ್ದಲ್ಲಿ ಆ ಗ್ರಂಥಕ್ಕೆ ಉದಾಹರಣೆಗಳನ್ನು ಒದಗಿಸಿಕೊಟ್ಟ ಜೈಮಿನಿಭಾರತದ ಕಾಲವು ೧೬೭೪ಕ್ಕಿಂತ ಹಿಂದೆಂಬುದೇನೊ ನಿಶ್ಚಯವಾಗಬಹುದು. ಕವಿಚರಿತಕಾರರೂ ಈ ಆಧಾರದ ಮೇಲೆಯೇ ಲಕ್ಷ್ಮೀಶನ ಕಾಲವನ್ನು ಸು. ೧೬೫೦ಕ್ಕೆ ಮಾರ್ಪಡಿಸಿರುವರು.[3]

ಲಕ್ಷ್ಮೀಶನನ್ನು ಸ್ತುತಿಸಿರುವ ಕವಿಗಳು ಲಕ್ಷ್ಮಕವಿ (೧೭೨೩), ಕೋನಸಯ್ಯ (ಸು ೧೭೫೦), ಬಬ್ಬೂರು ರಂಗ (ಸು ೧೭೫೦), ಎಂಬವರು ಮಾತ್ರ ಎಂದು ಇದುವರೆಗೆ ತಿಳಿವಳಿಕೆಯಿದ್ದಿತು. ಆದರೆ 'ನಂದೀ ಮಾಹಾತ್ಮ್ಯ'ದ ಕರ್ತೃವಾದ ಗೋವಿಂದನೆಂಬೊಬ್ಬ ಕವಿಯೂ ಲಕ್ಷ್ಮೀಶನನ್ನು ಸ್ತುತಿಸಿದ್ದಾನೆ. ಆ ಸ್ತುತಿರೂಪವಾದ ಪದ್ಯವನ್ನು ಇಲ್ಲಿ ಕೊಡಬಹುದು.—

ಚತುರಾಸ್ಯರುದ್ರ ಲಕ್ಷ್ಮೀಪತಿಯನಂತರು
ನ್ನತ ಸತ್ಯಲೋಕಕುತ್ಕೀಲ ಕೀಲಾಲನಿಧಿ
ವಿತಳಮಂ ಸಾರಲೆಮ್ಮೊಳ್ ವರಾರೆಂದು ಸುಕವೀಂದ್ರಾಭಿಧಾನ
ಕೃತಿಕರ್ತರೆನಿಸಿ ವಿಶ್ರುತರಾಗೆ ಲೋಕದೊಳ್ [ವಾಂತು ।
ನುತಿಸದವರಾರ್ ಮನೋಮುದದಿಂದ ಕಾವ್ಯಪ
ದ್ಧತಿಯೊಳಾನಭಿವಂದಸಂಗೈದು ಮುಂದೆ ಪದಸಂದರ್ಭಮಂ
(ಪೀಠಿಕಾಸಂಧಿ—ಪದ್ಯ ೧೫) [ಸಾಗಿಪೆಂ ||

ಮೇಲಿನ ಕವಿಗಳಲ್ಲಿ ಚತುರಾಸ್ಯನು "ಚತುರಾಸ್ಯ ನಿಘಂಟು"ವಿನ ಕರ್ತನಾಗಿರಬಹುದು; ರುದ್ರನು ರುದ್ರಭಟ್ಟ; ಲಕ್ಷ್ಮೀಪತಿಯು ಲಕ್ಷ್ಮೀಶ; ಅನಂತನೆಂಬವನು ಯಾರೋ ತಿಳಿಯದು. ಈ ಕವಿಗಳೆಲ್ಲರೂ ಬ್ರಾಹ್ಮಣರಿರಬೇಕೆಂದು ತೋರುತ್ತದೆ. ಇವರೆಲ್ಲರೂ ಗೋವಿಂದನ ಕಾಲಕ್ಕಿಂತ ಹಿಂದೆ ಇದ್ದಿರಬೇಕು. ಗೋವಿಂದನ ಕಾಲವೊಂದನ್ನು ನಿಶ್ಚಯಿಸಿದರೆ ಲಕ್ಷ್ಮೀಶನು ಆ ಕಾಲಕ್ಕಿಂತ ಹಿಂದೆ ಇದ್ದನೆಂದು ಹೇಳಬಹುದು.

ಕವಿಚರಿತಕಾರರು ಗೋವಿಂದನ ಕಾಲವನ್ನು ಸು ೧೬೫೦ ಎಂದು ಊಹಿಸಿರುತ್ತಾರೆ. (ಕರ್ಣಾಟಕ ಕವಿಚರಿತೆ II ಪುಟ ೩೯೪). ಆದರೆ

3. ಕರ್ಣಾಟಕ ಕವಿಚರಿತೆ ಪುಟ LXXXV.

ಈ ಕವಿಯ ಚರಿತ್ರೆಯನ್ನು ಬರೆಯುವಾಗ ಕವಿಚರಿತಕಾರರಿಗೆ ಇವನ ಸಂಪೂರ್ಣ ಗ್ರಂಥವು ಲಭಿಸಿರಲಿಲ್ಲವೆಂದು ತಿಳಿದುಬರುತ್ತದೆ. ಆದುದರಿಂದ ಅವರು ಕವಿಯ ಕಾಲವನ್ನು ಊಹಿಸಬೇಕಾಯಿತು. ಕಾವ್ಯಕಲಾನಿಧಿಯ ಸಂಪಾದಕರು ಆ ಗ್ರಂಥದಲ್ಲಿ (ನಂದೀ ಮಾಹಾತ್ಮ್ಯ) ೫೦ ಸಂಧಿಗಳಿವೆಯೆಂದು ಬರೆದಿದ್ದಾರೆ.[4] ಹೀಗೆ ಬರೆಯಲು ಅವರಿಗೆ ಆಧಾರವೇನಿದ್ದಿತೋ ತಿಳಿಯದು. ನಮಗೆ ದೊರೆತ[5] ಒಂದು ಓಲೆಯ ಪ್ರತಿಯಲ್ಲಿ ೨೫ ಸಂಧಿಗಳೂ, ೧೨೨೫ ಪದ್ಯಗಳೂ, ೧೫೫ ಓಲೆಗಳೂ ಇವೆ. ಆ ಗ್ರಂಥವು ಇಲ್ಲಿಗೇ ಮುಗಿದಿದೆ ಎಂಬುದು "ಇತಿ ನಂದೀಕಾವ್ಯ ಸಮಾಪ್ತ. ಮಂಗಳ ಮಹಾ ಶ್ರೀ" ಎಂಬ ವಾಕ್ಯದಿಂದ ವ್ಯಕ್ತವಾಗುತ್ತದೆ. ಆದುದರಿಂದ ವಾಡಿಕೆಯ ಪ್ರಕಾರ ಕವಿಯು ಕೊನೆಯ ಸಂಧಿಯಲ್ಲಿ ತನ್ನ ವಿಚಾರವಾಗಿ ಏನನ್ನಾದರೂ ಹೇಳಿಕೊಂಡಿರಬೇಕಷ್ಟೆ?

ತನ್ನ ಕಾವ್ಯವನ್ನು ಹೇಳಿಸಿದವನು "ಇಮ್ಮಡಿ ಹಾವಳೀಂದ್ರ ಭೈರವೊಡೆಯನು" ಎಂದು ಕವಿಯು ಹೇಳಿ ಅವನನ್ನು ವಿಶೇಷವಾಗಿ ಸ್ತುತಿಸಿರುತ್ತಾನೆ. ಆ ಪದ್ಯಗಳನ್ನು ಇಲ್ಲಿ ಬರೆಯುತ್ತೇವೆ.—

ನಂದಿಯ ಮಹಾತ್ಮ್ಯೆಯಂ ಪೇಳಿಸಿದ ಭೋಗನಂ
ಕ್ರಂದನಂ ವಿಮಲ ವಿದ್ಯಾವಿನೋದಂ ಭಜಕ
ವೃಂದಮಂದಾರಮುಪಧ್ಯಸತ್ಕೀರ್ತಿಯುಕ್ತಂ ವಿನಯ
ಕಂದರ್ಪ ಸನ್ನಿಭಂ ಸಕಲಲೋಕಾಭಿರಾ [ರತ್ನಭೂಷಂ ।
ಮಂ ದಯಾಪೂರ್ಣಂ ಪರೇಂಗಿತಜ್ಞಂ ದ್ವಿಜ
ನೇಂದು ಸ್ವಭಾನುಂ ಸುಚಾರಿತ್ರಸಂಪನ್ನನುಂ ಪರಾಕ್ರಮ
ವಿಕ್ರಮಂ ॥ ೨೫-೨೭.

ಗುರುಕೃಪಾಮೃತಲೋಲ ವಿತರಣ ವಿಶಾಲ ಭಾ
ಸುರ ಪ್ರತಿಜ್ಞಾ ಪರಶುರಾಮ ಸಂಗರಭೀಮ
ನಿರುತ ಕನಕವಸಂತ ವಿದಿತವಿಭವ ಜಯಂತ ಮಹದಭಿಮಾನಿದಾನಿ

---

4. ನಂದೀ ಮಾಹಾತ್ಮ್ಯ, ಪೀಠಿಕೆ ii

5. Oriental Library, Mysore. *K*. 360.

ಅರಿರಾಯ ಮಾನಮರ್ದನ ಸದ್ಗುಣ ನಿಧಾನ
ಧರಣೀಂದ್ರ ಕುಲಸಾರ್ವಭೌಮ ಸುಕಲೋದ್ದಾಮ
ವರಹಾವಳೀಂದ್ರ ಸುಕುಮಾರ ಸತ್ಯಾಚಾರಧೀರಸಸಹಾಯ
ಶೂರಾ ॥ ೨೫-೨೮ ॥

ಸುರರತ್ನಮಾಕಾರಮಾದಂತೆ ಸುಧೆ ಮನೋ
ಹರರೂಪುವೆತ್ತಂತೆ ಕಲ್ಪಪಾದಪವೆ ಮೃದು
ತರದಿ ನುಡಿಗಲ್ತಂತಿರುದಿಸಿದಿಮ್ಮಡಿ ಹಾವಳೀಂದ್ರ ಸತ್ಕೀರ್ತಿ
* * * * ವರ ಸಾಲನತಿ [ಸಾಂದ್ರ ।
ಪರಿತೋಷದಿಂ ಕೃತಿಯ ಕೇಳ್ದೊಲ್ದು ವಿರುಪಾಕ್ಷ
ಪುರವ ಧಾರಾದತ್ತಮಾಗಿತ್ತನಾಚಂದ್ರಾರ್ಕಚಿರಮಿಪ್ಪೊಲು ॥
೨೫-೨೯ ॥

ಪೊಡವಿಯೊಳ್ ಸಕಲಜನಜಿಹ್ವೆಯುಳ್ಳನ್ನವರ
ಮೊಡನಿರ್ಪುದೆಂದು ಇಮ್ಮಡಿ ಹಾವಳೀ ಭೈರ
ಪೊಡವಿಪಂ ಪೇಳಿಸಿದ ನಂದಿಯ ಮಹಾತ್ಮ್ಯೆಯಂ ಲೋಕ
ವಿಶ್ರುತಮಾಗಲು ॥ ೨೫-೩೦ ॥

ಮೇಲಿನ ಪದ್ಯಗಳಿಂದ ಗೋವಿಂದ ಕವಿಯ ಪೋಷಕನು ಇಮ್ಮಡಿ ಹಾವಳಿ ಭೈರನೆಂದೂ, ಆ ಪ್ರಭುವು ಅವನಿಗೆ ವಿರುಪಾಕ್ಷ ಪುರವನ್ನು ದಾನವಾಗಿ ಕೊಟ್ಟನೆಂದೂ ತಿಳಿದುಬರುತ್ತದೆ. ಅಲ್ಲದೆ ಆ ಕವಿಗೆ "ಸುಕವಿ ಕಂಠಾಭರಣ" ಎಂಬ ಬಿರುದನ್ನು ಕೂಡ ಆ ಪ್ರಭುವೇ ಕೊಟ್ಟಿರಬಹುದು.

ಈ ಇಮ್ಮಡಿ ಹಾವಳೀಂದ್ರ ಭೈರನು ಆವತಿನಾಡ ಪ್ರಭು. ಅವನ ಎರಡು ಶಾಸನಗಳು ದೊರೆಯುತ್ತವೆ. ಮೊದಲನೆಯದು ೧೫೫೮ ರಲ್ಲಿ ಬರೆದದ್ದು[6]; ಎರಡನೆಯದು ೧೬೧೭ ರಲ್ಲಿ ಬರೆದದ್ದು.[7] ಆದುದರಿಂದ ಇವನ ಆಶ್ರಯವನ್ನು ಪಡೆದಿದ್ದ ಗೋವಿಂದ ಕವಿಯ ಕಾಲವು ಸು ೧೬೦೦ ಎಂದು ದೃಢವಾಗಿ ಹೇಳಬಹುದು.

---

6. Mysore Archælogical Report 1914 P. 50.
7. E. C. (*Kolar District*) Bagepalli 40.

ಲಕ್ಷ್ಮೀಶನು ಈ ಕವಿಯ ಸ್ತುತಿಗೆ ಪಾತ್ರನಾಗಿರುವುದರಿಂದ ಇವನ ಕಾಲಕ್ಕಿಂತಲೂ ಹಿಂದೆ ಇವನಿದ್ದಿರಬೇಕು. ಆದುದರಿಂದ ಲಕ್ಷ್ಮೀಶನು ೧೬೦೦ ಕ್ಕಿಂತಲೂ ಹಿಂದಿನವನೆಂಬುದು ನಿರ್ವಿವಾದವಾದ ಮಾತು. ಆದರೆ ಎಷ್ಟು ಹಿಂದೆ ಇದ್ದನು ಎಂಬುದನ್ನು ನಿರ್ಧರಿಸಲು ಸಾಕಾದಷ್ಟು ಆಧಾರವಿಲ್ಲ. ಲಕ್ಷ್ಮೀಶನ ಕಾಲನಿರ್ಣಯಕ್ಕೆ ಈಚಿನ ಒಂದು ಗಡಿಕಲ್ಲು ದೊರೆತಂತಾಯಿತು.

ಲಕ್ಷ್ಮೀಶನ ಬಿರುದು "ಕರ್ಣಾಟ ಕವಿಚೂತವನ ಚೈತ್ರ" ಎಂಬುದಾಗಿ ಹಲವು ಕಡೆ ಅಚ್ಚಾಗಿದೆ. ಆದರೆ ನಮಗೆ ದೊರೆತ ಎರಡು ಹಳೆಯ ಓಲೆಯ ಪ್ರತಿಗಳಲ್ಲಿ (ಒಂದರ ಕಾಲ ೧೭೧೯;[8] ಇನ್ನೊಂದರ ಕಾಲ ೧೭೫೩)[9] ಯೂ "ಕರ್ಣಾಟ ಕವಿಚೈತ್ರವನ ಚೂತ" ಎಂದು ಲಿಖಿತವಾಗಿದೆ. ಲಕ್ಷ್ಮೀಶನು ತನ್ನ ನಮ್ರಸ್ವಭಾ

8. ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನಶಕಬ್ದ ೧೬೪೦ ಸಂದಾ ವರ್ತಮಾನ ವಿಕಾರಿ ಸಂವತ್ಸರದ ಶ್ರಾವಣಶುದ್ಧ ೫ ಭಾರ್ಗ್ಗವಾರ ಸೂರ್ಯ್ಯನು ಪೂರ್ವಪ್ರತಿಷ್ಟೆಯಾದ ಗಳಿಗೆ ೧೨ನೆಯಲ್ಲಿ ಹಡದಣದ ದೇವಚಂದ್ರೈನ ಮಗ ವಿಜ್ಜೈಯನು ತಗಡೂರ ಶೇನಭೋಗ ದೇವಯ್ಯನವರ ಮಗ ಅಪ್ಪಾಜೈಯ್ಯನಿಗೆ ಜೈಮು ....ಮಂಗಳ ಮಹಾ ಶ್ರೀ"

ಈ ಪ್ರತಿಯು ತುಮಕೂರು ಡಿಸ್ಟ್ರಿಕ್ಟು ತುರುವೇಕೆರೆ ತಾಲ್ಲೂಕಿನ ಕಣತೂರಲ್ಲಿ ದೊರೆಯಿತು.

9. "ಶಾಲಿವಾಹನ ಶಕಾಬ್ದಃ ೧೬೭೫ನೆ ಸಂದ ವರ್ತಮಾನವಾದ ಶ್ರೀಮುಖನಾಮಸಂವತ್ಸರದ ಆಷಾಢ ಬಹುಳ ೧೨ ಶುಕ್ರವಾರದಲ್ಲು ಬಿಂಡಿಗನವಿಲೆಯ ಮಾವುಗರುಡೈಯನವರ ಮಗ ತಿಮ್ಮಪ್ಪಯ್ಯನು ಬರೆದ ಜಯಿಮಿನಿಪುಸ್ತಕಕ್ಕೆ ಮಂಗಳ ಮಹಾ ಶ್ರೀ"

ಈ ಪ್ರತಿಯು ತುಮಕೂರು ಡಿಸ್ಟ್ರಿಕ್ಟು ಸಿರಾ ತಾಲ್ಲೋಕಿನ ದೊಡ್ಡಗ್ರಹಾರದ ಬಳಿ ಇರುವ ವಡ್ಡರ ಹಳ್ಳಿಯಲ್ಲಿ ದೊರೆಯಿತು.

ಈ ಪ್ರತಿಗಳನ್ನು ದಯವಿಟ್ಟು ನನಗೆ ದೊರಕಿಸಿದ ನನ್ನ ಮಿತ್ರರಾದ ಶ್ರೀಮಾನ್ ತೀ. ನಂ. ಶ್ರೀಕಂಠಯ್ಯನವರು ಎಂ. ಎ. ಅವರಿಗೂ, ಶ್ರೀಮಾನ್ ಎ. ತಿಮ್ಮರಾಯಪ್ಪನವರಿಗೂ ಕೃತಜ್ಞನಾಗಿರುತ್ತೇನೆ.

ವಕ್ಕೆ ತಕ್ಕಂತೆ ಎಂದಿಗೂ "ಕರ್ಣಾಟ ಕವಿಚೂತವನ ಚೈತ್ರ"ನೆಂದು ಕರೆದುಕೊಳ್ಳಲು ಒಡಂಬಡಲಾರನು. ಆದುದರಿಂದ ಅವನ ನಿಜವಾದ ಬಿರುದು "ಕರ್ಣಾಟ ಕವಿಚೈತ್ರವನ ಚೂತ"ನೆಂದು ನನಗೆ ತೋರುತ್ತದೆ.

ಡಿ. ಎಲ್. ನರಸಿಂಹಾಚಾರ್ಯ.

ಕ ವಿ ಕ ಥೆ

ಒಂದು ದಿನ 'ಕುಱಿಳ್' ಕಾವ್ಯದ ಕರ್ತೃಗಳಾದ 'ತಿರುವಳ್ಳುವರ'ಲ್ಲಿಗೆ ಯಾರೋ ಒಬ್ಬರು ಜಿಜ್ಞಾಸುಗಳಾಗಿ ಬಂದು 'ಗೃಹಸ್ಥಾಶ್ರಮ ದೊಡ್ಡದೇ, ಸಂನ್ಯಾಸ ದೊಡ್ಡದೆ?' ಎಂದು ಕೇಳಿದರು. ಅದಕ್ಕೆ ಅವರು ಯಾವ ಉತ್ತರವನ್ನೂ ಕೊಡದೆ ಆತನನ್ನು ಗೌರವಿಸಿ ಆದರಿಸಿ ತಮ್ಮ ಮನೆಯಲ್ಲಿಯೆ ಕೆಲವು ದಿನ ನಿಲ್ಲಿಸಿಕೊಂಡರು. ತಮ್ಮ ಸಂಸಾರಸ್ವರೂಪವನ್ನು ನೋಡಿ ಆತನೇ ಉತ್ತರ ಪಡೆದುಕೊಳ್ಳಲೆಂಬುದು ಅವರ ಆಶಯ.

ಒಂದು ದಿನ ಅವರ ಹೆಂಡತಿ ನೀರು ಸೇದುತ್ತಿದ್ದರು; ಆಗ ತಿರುವಳ್ಳುವರು ಆಕೆಯನ್ನು ಕೂಗಲು ಆಕೆಯು ಅರ್ಧ ಸೇದಿದ ಬಿಂದಿಗೆಯನ್ನು ಹಾಗೆಯೇ ಬಿಟ್ಟು ಬಂದು ಬಿಟ್ಟರು. ಮತ್ತೊಂದು ದಿನ ಬೆಳಗ್ಗೆ ತಂಗುಳನ್ನು ಬಡಿಸಿದಾಗ, ಅದು ಬಹು ಬಿಸಿಯೆಂದೂ ತಮ್ಮ ಬಾಯಿ ಸುಟ್ಟು ಹೋಯಿತೆಂದೂ ಆಕ್ಷೇಪಿಸಿದರು. ಆಕೆಯು ಹಿಂದು ಮುಂದುನೋಡದೆ, ಸಂಶಯ ಪಡದೆ, ಬೀಸಣಿಗೆ ತಂದು ಅದನ್ನು ಬೀಸಿದರು. ಮತ್ತೊಂದು ದಿನ ಮಟಮಟ ಮಧ್ಯಾಹ್ನದಲ್ಲಿ ಮಗ್ಗದಲ್ಲಿ ಕೆಲಸ ಮಾಡುತ್ತ ಲಾಳಿಯನ್ನು ಬೀಳಿಸಿ ಅದನ್ನು ಹುಡುಕಲು ದೀಪ ಬೇಕೆಂದು ಕೂಗಿದರು. ಆಕೆ ಕೂಡಲೆ, ಯಾವ ಮಾತನ್ನೂ ಹೇಳದೆ, ದೀಪವನ್ನು ತಂದು ತೋರಿಸಿದರು. ಇದನ್ನು ನೋಡಿ, ಮನೆಗೆ ಬಂದಿದ್ದವನು ಕವಿಯ ಅರ್ಥವನ್ನು ಗ್ರಹಿಸಿ 'ಇಂಥ ಹೆಂಡತಿ ಯಿದ್ದರೆ ಗೃಹಸ್ಥಾಶ್ರಮ ಒಳ್ಳೆಯದು; ಇಲ್ಲದಿದ್ದರೆ ಸಂನ್ಯಾಸ ಒಳ್ಳೆಯದು' ಎಂದು ನಿರ್ಧರಿಸಿದನು.

ವಾಸುಕಿಯರಿಗೆ (ತಿರುವಳ್ಳುವರ ಪತ್ನಿ) ಅಂತ್ಯಕಾಲ ಪ್ರಾಪ್ತವಾಯಿತು. ಆಗ ಅವರು ಹಾಸಿಗೆಯ ಮೇಲೆ ಮಲಗಿಕೊಂಡೇ ಏನನ್ನೋ ಕೇಳಬೇಕೆಂದಿರುವಂತೆಯೂ ಚಿಂತಾಕ್ರಾಂತರಾಗಿಯೂ ನೋಡಿದರು. ಕವಿಯು ಏನೆಂದು ಕೇಳಲು, ಆಕೆಯು 'ಪ್ರಭುವೇ,

ನಾನು ತಮ್ಮ ಮನೆಗೆ ಬಂದು ಮೊದಲು ಅಡಿಗೆ ಮಾಡಿ ಬಡಿಸಿದ ದಿವಸ, ತಮ್ಮ ಎಲೆಯ ಹತ್ತಿರ ಸಿತ್ಯವೂ ಒಂದು ಬಟ್ಟಲು ನೀರನ್ನೂ ಒಂದು ಸೂಜಿಯನ್ನೂ ಇಡಬೇಕೆಂದು ಅಪ್ಪಣೆ ಮಾಡಿದಿರಿ. ಅದೇಕೆಂಬುದು ನನಗೆ ಬಗೆಹರೆದಿಲ್ಲ!' ಎಂದರು. ಅದಕ್ಕೆ ಕವಿಯು 'ಬಡಿಸುವಾಗ ಅಗುಳು ನೆಲದ ಮೇಲೆ ಬಿದ್ದರೆ, ಅದನ್ನು ಸೂಜಿಯಿಂದ ಎತ್ತಿ ಬಟ್ಟಲ ನೀರಿನಲ್ಲಿ ತೊಳೆದುಕೊಳ್ಳೋಣವೆಂದು ಹಾಗೆ ಹೇಳಿದೆ' ಎಂದು ಉತ್ತರ ಕೊಟ್ಟರು. ವಾಸುಕಿಯರು ಸಮಾಧಾನ ಹೊಂದಿ ಶಾಂತರಾಗಿ ಪ್ರಾಣ ಬಿಟ್ಟರು.

ಪತಿವಚನಪರಿಪಾಲನೆಯನ್ನು ಆಕೆ ಅಂಥ ವ್ರತವಾಗಿ ನಡೆಸಿದ್ದರು! ಬದುಕಿರುವ ವರೆಗೆ ಒಂದು ದಿನ ಗಂಡನನ್ನು ಎದುರಿಸಿರಲಿಲ್ಲ; ಸಂಸಾರವನ್ನು ಬಹು ಒಪ್ಪವಾಗಿ ಅಣಿಯಾಗಿ ನಡೆಸಿದರೆಂಬುದೂ ಸ್ಪಷ್ಟವಾಗಿದೆ; ಇದು ಕಲ್ಪಿತಕಥೆಯಲ್ಲದಿದ್ದರೆ, ತಿರುವಳ್ಳುವರಂಥ ಪುಣ್ಯವಂತರೇ ಇಲ್ಲ.

"ತಿರುವಳ್ಳುವರ್ ಚರಿತ್ರಂ", "ಮಹಾ ನೀತಿ ಚೂಡಾಮಣಿ" ಎಂಬ ತಮಿಳು ಗ್ರಂಥಗಳಲ್ಲಿ ಇಂಥ ಹಲವು ಕಥೆಗಳಿವೆ.

'ಕುಱಳ್' ಎಂಬುದು ತಿರುವಳ್ಳುವರ ಗ್ರಂಥ. ತೆಲುಗಿನಲ್ಲಿ ವೇಮನನ ಸೂಕ್ತಿಗಳು ಹೇಗೋ ಕನ್ನಡದಲ್ಲಿ ಸರ್ವಜ್ಞನ ವಚನಗಳು ಹೇಗೋ ತಮಿಳಿನಲ್ಲಿ ಇದು ಹಾಗೆ—ಆದರೆ ಅವಕ್ಕಿಂತಲೂ ಕಾಲದಲ್ಲಿ ಎಷ್ಟೋ ಪ್ರಾಚೀನವಾದ, ಭಾವದಲ್ಲಿ ಘನವಾದ, ಭಾಷೆಯಲ್ಲಿ ಬಿಗಿಯಾದ ಕಾವ್ಯ. ಇದರ ಕೆಲವು ಭಾಗಗಳನ್ನು ರಾ. ನರಸಿಂಹಾಚಾರ್ಯರು ಕನ್ನಡಿಸಿ 'ನೀತಿ ಮಂಜರಿ' (ದ್ವಿತೀಯಭಾಗಂ)* ಎಂದು ಪ್ರಕಟಿಸಿದ್ದಾರೆ. ಅವರ ಪೀಠಿಕೆಯಿಂದ ಕಾವ್ಯ ಸ್ವರೂಪವನ್ನು ತಿಳಿಸುವ ಕೆಲವು ವಾಕ್ಯಗಳನ್ನು ಇಲ್ಲಿ ಎತ್ತಿ ಬರೆದಿದ್ದೇನೆ.

---

* ಇದು 'ಕಂದ'ರೂಪವಾಗಿದೆ. ಮೂಲ ಪದ್ಯ ಒಂದೊಂದೂ ಇದರ ಅರ್ಧದಷ್ಟಿರುತ್ತದೆ. ತ್ರಿಪದಿಯಲ್ಲಿ ಮೊದಲ ಸಾಲನ್ನು ಬಿಟ್ಟು ಓದಿದರೆ ಹೇಗೋ ಹಾಗಿರುತ್ತದೆನ್ನಬಹುದು.

"ತಿರುವಳ್ಳುವ ಕವಿಯ ಜನ್ಮಸ್ಥಳವು ಮದರಾಸಿಗೆ ಸಮೀಪದಲ್ಲಿರುವ ಮಯಿಲಾಪುರವು*. ಆತನು ಜಾತಿಯಲ್ಲಿ ಪಂಚಮನೆಂದೂ ವೃತ್ತಿಯಲ್ಲಿ ನೆಯ್ಗೆಯವನೆಂದೂ ಹೇಳುತ್ತಾರೆ. ಅವನ ಕಾಲವು ಕ್ರಿಸ್ತಶಕದ ಎರಡನೆಯ ಶತಮಾನವೆಂದು ಕೆಲವರು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.....ಇವನಿಂದ ರಚಿತವಾದ ಕುರಳು ಅತ್ಯುತ್ತಮವಾದ ನೀತಿಗ್ರಂಥವೆಂದು ಖ್ಯಾತಿಯನ್ನು ಪಡೆದಿದೆ. ...ಈ ಗ್ರಂಥವು ಇಂಗ್ಲಿಷ್ ಭಾಷೆಗೆ ಮಾತ್ರವೇ ಅಲ್ಲದೆ ಲಾಟಿರ್ ಫ್ರೆಂಚ್ ಜರ್ಮರ್ ಇಟಾಲಿಯರ್ ಎಂಬ ಭಾಷೆಗಳಿಗೂ ಪರಿವರ್ತಿಸಲ್ಪಟ್ಟಿದೆ. ಇದರಲ್ಲಿ ಪ್ರಾಯಿಕವಾಗಿ ಸರ್ವಮತಸಾಧಾರಣವಾದ ವಿಷಯಗಳು ಪ್ರತಿಪಾದಿತವಾಗಿರುವುದರಿಂದ ಹಿಂದುಸ್ಥಾನದ ಹಲವು ಮತದವರೂ† ಈ ಕವಿ ನಮ್ಮವನು ತಮ್ಮವನು ಎಂದು ಹೇಳಿಕೊಳ್ಳುತ್ತಿದ್ದಾರೆ. ಈ ಕಾರಣದಿಂದಲೇ ಇದಕ್ಕೆ ಸಾಧಾರಣವೇದವೆಂಬ ಹೆಸರು ಬಂದಂತೆ ಕಾಣುತ್ತದೆ.....

ಈ ಗ್ರಂಥದಲ್ಲಿ ಹತ್ತು ಹತ್ತು ದ್ವಿಪದಿಗಳುಳ್ಳ ೧೩೩ ಅಧಿಕಾರಗಳಿವೆ. ಧರ್ಮ, ಅರ್ಥ, ಕಾಮ, ಎಂಬ ತ್ರಿವರ್ಗವೇ ಇದರಲ್ಲಿ ಪ್ರತಿಪಾದಿತವಾದ ವಿಷಯವು. ಈ ದ್ವಿಪದಿಗಳು ಸೂತ್ರಗಳಂತೆ ಅತಿಸಂಗ್ರಹವಾಗಿ ಆಕಾರದಲ್ಲಿ ಸಣ್ಣವಾಗಿದ್ದರೂ ವಿಪುಲವಾದ ಅರ್ಥವನ್ನು ಗರ್ಭೀಕರಿಸಿಕೊಂಡಿವೆ............ಸಾಸವೆಯ ಕಾಳಿನಲ್ಲಿ ದ್ವಾರವನ್ನು ಮಾಡಿ ಸಪ್ತಸಮುದ್ರಗಳನ್ನೂ ಹೊಗಿಸಿದಂತೆ ಇವೆ........"

---

* ನವಿಲುಗಳ ಊರು. (?)

† ಅಷ್ಟೇ ಅಲ್ಲ; ಕ್ರೈಸ್ತಬೋಧನೆಯೂ ಇದೆ ಎಂಬುದು ಪೋಪ್ ಎಂಬವರ ಮತ.

ಹ್ಯಾಂಲೆಟ್

ಡೇನ್ಮಾರ್ಕಿನ ರಾಣಿಯಾದ ಗರ್ಟ್ರೂಡಳು ತನ್ನ ಪತಿಯ ಅನಿರೀಕ್ಷಿತವಾದ ಮರಣದಿಂದ ವಿಧವೆಯಾದಳು. ಆದರೂ ಪತಿಯು ಗತಿಸಿ ಹೋದ ಎರಡು ತಿಂಗಳೊಳಗಾಗಿಯೇ ಆತನ ಸಹೋದರನಾದ ಕ್ಲಾಡಿಯಸ್ಸನ್ನು ಮದುವೆಯಾದಳು. ಗುಣದಲ್ಲಿಯೂ ರೂಪದಲ್ಲಿಯೂ ಇವಳ ಹಿಂದಿನ ಪತಿಯು ಎಷ್ಟು ಉತ್ಕೃಷ್ಟನೆನಿಸಿದ್ದನೋ ಈಗಿನ ಪತಿಯು ಅಷ್ಟು ನಿಕೃಷ್ಟನು. ಆದರಿಂದ ಈ ವಿವಾಹವನ್ನು ಆಗಿನ ಜನರು ತಿಳಿಗೇಡಿತನದ ಅಥವಾ ಕಠಿನ ಮನಸ್ಸಿನ ಅಥವಾ ಅದಕ್ಕಿಂತ ಕೀಳಾದ ವಿಚಿತ್ರಕಾರ್ಯವೆಂದು ಎಣಿಸಿದ್ದರು. ಅಲ್ಲದೆ ಕ್ಲಾಡಿಯಸ್ಸನು ತನ್ನ ಅಣ್ಣನ ಹೆಂಡತಿಯನ್ನು ಮದುವೆಯಾಗಬೇಕೆಂದೂ ಸಿಂಹಾಸನಕ್ಕೆ ನ್ಯಾಯವಾಗಿ ಉತ್ತರಾಧಿಕಾರಿಯಾಗಿದ್ದ ತನ್ನ ಅಣ್ಣನ ಮಗನಿಗೆ ಸಿಂಹಾಸನವು ದೊರೆಯದಂತೆ ಮಾಡಿ ಅದನ್ನು ತಾನು ಪಡೆಯಬೇಕೆಂದೂ, ಗೋಪ್ಯವಾಗಿ ಅಣ್ಣನನ್ನು ಸಂಹರಿಸಿಬಿಟ್ಟನೆಂದು ಜನರು ಸಂದೇಹಗೊಂಡರು.

ಆದರೆ ರಾಣಿಯ ಈ ಅವಿವೇಕದಿಂದ, ತಂದೆಯೆಂದರೆ ದೇವರಂತೆ ಪೂಜಿಸುತ್ತ, ಸ್ವತಃ ಗೌರವಶಾಲಿಯೂ ಗುಣಶಾಲಿಯೂ ಆಗಿದ್ದ ಯುವರಾಜನ ಮನಸ್ಸಿಗೆ ಬಹುಚಿಂತೆಯುಂಟಾಯಿತು. ಪಿತೃಶೋಕವೂ, ಮಾತೃವಿನ ಪುನರ್ವಿವಾಹವೂ ಒಂದಕ್ಕಿಂತ ಒಂದು ತೀವ್ರವಾಗಿ ಅವನಿಗೆ ಅತ್ಯಂತ ದುಃಖವನ್ನುಂಟುಮಾಡಿದುವು. ಚಿಂತೆಯೆಂಬ ಕಾರ್ಮುಗಿಲು ಅವನ ಮನಸ್ಸನ್ನು ಮುಸುಕಿ, ಸಂತೋಷದ ಮುಖಭಾವವೂ ನೋಟವೂ ಅದೃಶ್ಯವಾದುವು. ರೂಢಿಯಾಗಿ ಬಂದ ಗ್ರಂಥಕಾಲಕ್ಷೇಪವು ಲುಪ್ತವಾಯಿತು. ರಾಜಧರ್ಮಕ್ಕೂ ತನ್ನ ವಯಸ್ಸಿಗೂ ತಕ್ಕುವಾದ ವ್ಯಾಯಾಮವಿನೋದಾದಿಗಳು ಬೇಡವಾದುವು. ಪ್ರಪಂಚವು ಕಳೆಬೆಳೆದು ಮುಚ್ಚಿಹೋದ ಪುಷ್ಪೋದ್ಯಾನದಂತೆ ತೋರುತ್ತ ಬೇಸರವನ್ನುಂಟುಮಾಡುತ್ತಿತ್ತು.

ಗರ್ಟ್ರೂಡಳು ತನ್ನನ್ನು ಪ್ರಾಣಾಧಿಕಳೆಂದು ಪ್ರೀತಿಸುತ್ತಿದ್ದ ಪತಿಯನ್ನು ತಾನೂ ಮಿಗಿಲಾಗಿ ಪ್ರೀತಿಸುತ್ತಿದ್ದಂತೆಯೂ ಅವನಿಗೆ ವಿಧೇಯಳಾಗಿದ್ದಂತೆಯೂ ಕಾಣಿಸುತ್ತಿದ್ದರೂ, ಅವಳು ಪತಿಯನ್ನು ಅಷ್ಟು ಜಾಗ್ರತೆಯಾಗಿ ಮರೆತುಬಿಟ್ಟುದೂ, ಪತಿಯು ಮೃತನಾದ ಎರಡು ತಿಂಗಳೊಳಗಾಗಿಯೇ, ಅಥವಾ ರಾಜಕುವರನಿಗೆ ಇನ್ನೂ ನಿನ್ನೆ ಮೊನ್ನೆ ತಂದೆಯು ಮೃತನಾದಂತೆ ಕಾಣುತ್ತಿದ್ದ ಆ ಕಾಲದಲ್ಲಿಯೇ, ಮತ್ತೆ ಮದುವೆಯಾದುದೂ, ಅವನಿಗೆ ಬಹು ಸಂತಾಪಕಾರಣ ವಾಯಿತು. ಸಮೀಪಬಾಂಧವ್ಯವಾಗಿ ನ್ಯಾಯವಿರುದ್ಧವಾದ ಈ ವಿವಾಹಕ್ಕಾಗಿಯೂ, ರಾಜಾರ್ಹವಾದ ನಡತೆಯಿಲ್ಲದ ತುಚ್ಛ ಮನು ಷ್ಯನನ್ನು ತನಗೂ ಸಿಂಹಾಸನಕ್ಕೂ ಸ್ವಾಮಿಯನ್ನಾಗಿ ಮಾಡಿಕೊಂ ಡುದಕ್ಕಾಗಿಯೂ, ರಾಜಕುವರನಿಗೆ ನ್ಯಾಯವಾಗಿ ಬರಬೇಕಾಗಿದ್ದ ಸಿಂಹಾಸನದ ಬಾಧ್ಯತೆಯು ತಪ್ಪಿಹೋದದ್ದರಿಂದ ಉಂಟಾದ ಹೃದಯ ವೇದನೆಗಿಂತಲೂ ಅತ್ಯಧಿಕವಾದ ಸಂತಾಪವುಂಟಾಯಿತು. ಈ ದುಃಖವು ಇವನ ಸಂತೋಷಸ್ವಭಾವವನ್ನು ಮಂಕುಮಾಡಿತು; ಸರಿ ಯಾಗಿ ನೋಡಿದರೆ ಹತ್ತು ರಾಜ್ಯಗಳನ್ನು ಕಳೆದುಕೊಳ್ಳುವುದರಿಂದುಂ ಟಾಗುವ ದುಃಖಕ್ಕಿಂತಲೂ ಈ ದುಃಖವು ಹೆಚ್ಚಾಗಿ ಅವನ ಮನಸ್ಸನ್ನು ಕುಗ್ಗಿಸಿ ಅವನನ್ನು ತೇಜೋಹೀನನನ್ನಾಗಿ ಮಾಡಿತು. ಹೊಸ ಅರಸನೂ, ಅರಸಿತಿಯೂ ಇವನಿಗೆ ದುಃಖ ಮರೆಯುವಂತೆ ಮಾಡಬೇಕೆಂದು ಹಲವು ಪ್ರಯತ್ನಗಳನ್ನು ಮಾಡಿದರೂ ಅವು ವಿಫಲ ವಾದುವು. ರಾಜ ಸಭೆಯಲ್ಲಿ ಇವನು ತಂದೆಯ ಮರಣದಿಂದುಂಟಾದ ದುಃಖಸೂಚಕವಾದ ಕಪ್ಪು ಉಡಿಗೆಯಲ್ಲಿರುವನು. ಅದನ್ನು ಎಂದೂ ತೆಗೆದುಹಾಕಲಿಲ್ಲ. ತಾಯಿಯ ಪುನರ್ವಿವಾಹದ ದಿನದಲ್ಲಿಯೂ, ಇನ್ನೂ ಕೆಲವು ಉತ್ಸವಗಳು ನಡೆದ ದಿನಗಳಲ್ಲಿಯೂ ಇವನು ಆ ಉಡಿಗೆ ಯನ್ನು ತೆಗೆದುಹಾಕಲಿಲ್ಲ. ಇವನು ಹೇಗೆತಾನೇ ಆ ದಿನಗಳನ್ನು ಶೋಕದಿನಗಳೆಂದು ಭಾವಿಸದೆ ಸಂತೋಷದಿನಗಳೆಂದು ಭಾವಿಸಿಯಾನು! ಅಲ್ಲದೆ, ತನ್ನ ತಂದೆಯ ಮರಣಕಾರಣವು ತಿಳಿಯದೆಇದ್ದುದೇ ರಾಜ ಕುವರನ ವಿಶೇಷ ಚಿಂತೆಗೆ ಕಾರಣವಾಯಿತು. ಅವನು ಹಾವಿನಿಂದ

ಸತ್ತಂತೆ ಕ್ಲಾಡಿಯಸ್ಸನು ಹೇಳಿದನು. ಸಿಂಹಾಸನಕ್ಕಾಗಿ ಅಣ್ಣನನ್ನು ಕೊಂದು, ಈಗ ಸಿಂಹಾಸನದ ಮೇಲೆ ಕುಳಿತಿರುವ ಅವನೇ ಆ ಕಾಳೋರಗನೆಂಬ ಸಂಶಯವು ಮಾತ್ರ ಹ್ಯಾಂಲೆಟ್ ರಾಜಕುವರನಿಗೆ ಪ್ರಬಲವಾಗಿತ್ತು.

ಎಷ್ಟುಮಟ್ಟಿಗೆ ತನ್ನ ಸಂಶಯವು ನಿಜವಾದುದು? ತನ್ನ ತಾಯಿಯು ಈ ಕೊಲೆಯಲ್ಲಿ ಭಾಗಿಯಾಗಿರುವಳೇ? ಅವಳಿಗೆ ತಿಳಿದು ಈ ಕೊಲೆಯು ನಡೆಯಿತೆ? ಎಂಬೀ ಸಂಗತಿಗಳು ರಾಜಕುವರನ ಮನಸ್ಸನ್ನು ಸರ್ವದಾ ಪೀಡಿಸುತ್ತಿದ್ದುವು. ಮೃತನಾದ ಅರಸಿನ ರೂಪವುಳ್ಳ ಒಂದು ಭೂತವು ರಾತ್ರಿಕಾಲದಲ್ಲಿ ಎರಡು ಮೂರು ಸಲ ಅರಮನೆಯ ಮುಂಭಾಗದ ಪಹರೆಯವರಿಗೆ ಗೋಚರವಾಯಿತೆಂಬ ವದಂತಿಯು ಈ ರಾಜಕುವರನ ಕಿವಿಗೆ ಬಿದ್ದಿತು. ಆ ಮೃತನಾದ ಅರಸನು ಹಿಂದೆ ಸಾಮಾನ್ಯವಾಗಿ ಆಪಾದಮಸ್ತಕವಾಗಿ ಯಾವ ಉಡಿಗೆತೊಡಿಗೆಗಳಿಂದಿರುತ್ತಿದ್ದನೋ ಅದೇ ಉಡಿಗೆತೊಡಿಗೆಗಳಿಂದಲೇ ಈಗ ಆ ಮೂರ್ತಿಯೂ ಗೋಚರವಾಗುತ್ತಿತ್ತು. ಇದನ್ನು ನೋಡಿದವರು ಆ ಭೂತ ಬರುವ ಕಾಲಕ್ರಮಗಳನ್ನು ಕುರಿತೂ ಒಂದೇ ವಿಧವಾಗಿ ಹೇಳುತ್ತಿದ್ದರು. ಹಾಗೆ ನೋಡಿದವರಲ್ಲಿ ಹ್ಯಾಂಲೆಟಿನ ಸ್ನೇಹಿತನಾದ ಹೊರೇಷಿಯೋವೂ ಒಬ್ಬನು. ಅವರು "ಅದು ರಾತ್ರಿ ಹನ್ನೆರಡು ಗಂಟೆಗೆ ಬರುವುದು. ರೂಪದಲ್ಲಿ ಕಂಗೆಟ್ಟಂತೆ ತೋರುವುದು. ಮುಖವು ಆಗ್ರಹಕ್ಕಿಂತಲೂ ಹೆಚ್ಚಾಗಿ ದುಃಖವನ್ನು ಸೂಚಿಸುವಂತೆ ಕಾಣುವುದು. ಗಡ್ಡವು ಮುಪ್ಪಿನ ಗಡ್ಡದಂತೆ, ಕಂದುಬೆಳ್ಳಿಯ ಹಾಗಿರುವುದು. ನಾವು ಮಾತನಾಡಿಸಿದರೂ ಅದು ಮಾತನಾಡಲಿಲ್ಲ. ಆದರೂ ತಲೆಯನ್ನು ಎತ್ತಿ ಮಾತನಾಡತೊಡಗುವುದೋ ಎನ್ನುವಂತೆ ಇತ್ತು. ಆದರೆ ಅಷ್ಟರಲ್ಲಿಯೇ ಬೆಳಗಿನ ಜಾವದ ಕೋಳಿ ಕೂಗಲು, ಅದು ಆತುರದಿಂದ ಅದೃಶ್ಯವಾಯಿತು" ಎಂದು ಹೇಳಿದರು.

ರಾಜಕುವರನು ಕಾವಲುಗಾರರು ಹೇಳಿದ ಈ ಮಾತುಗಳನ್ನು ಕೇಳಿ, ಅಪನಂಬಿಕೆಪಡಲಾರದೆ, ಆಶ್ಚರ್ಯಭರಿತನಾಗಿ ಅವರು ನೋಡಿದ ವ್ಯಕ್ತಿಯು ತನ್ನ ತಂದೆಯ ಭೂತವೆಂದೇ ನಿಷ್ಕರ್ಷೆಮಾಡಿಕೊಂಡನು.

ಈ ಭೂತವು ಅನಾವಶ್ಯಕವಾಗಿ ಗೋಚರವಾಗಲು ಕಾರಣವಿಲ್ಲವೆಂತಲೂ ಏನೋ ಸಮಾಚಾರವಿರಬಹುದೆಂಬುದಾಗಿಯೂ ಈವರೆಗೆ ಸುಮ್ಮನಿದ್ದರೂ ತನ್ನೊಡನೆ ಮಾತನಾಡಬಹುದೆಂತಲೂ ಯೋಚಿಸಿ, ಅದನ್ನು ನೋಡಲೆಳಸಿ, ಆ ರಾತ್ರಿ ಕಾವಲುಗಾರರ ಜೊತೆಯಲ್ಲಿ ತಾನೂ ಕಾವಲಿರಲು ಯೋಚಿಸಿಕೊಂಡನು. ಅದರಂತೆಯೇ ಅವನು ರಾತ್ರಿಯಾಗುವುದನ್ನೇ ಬಹು ಆತುರದಿಂದ ನಿರೀಕ್ಷಿಸುತ್ತಿದ್ದನು. ರಾತ್ರಿಯೂ ಆಯಿತು. ಹೊರೇಷಿಯೋ ಮತ್ತು ಮಾರಸೆಲಸ್‌ರ ಜತೆಯಲ್ಲಿ ರಾಜಕುವರನು ಆ ಭೂತವು ಸಂಚರಿಸುತ್ತಿದ್ದ ಅರಮನೆಯ ಮುಂದೆ ಕಾವಲಿರಲು ಹೊರಟನು. ರಾತ್ರಿಯು ಬಹು ಚಳಿಯಾಗಿತ್ತು. ಗಾಳಿಯು ಚಿಲ್ಲನೆ ಬೀಸುತ್ತಿತ್ತು. ಆ ಚಳಿಯ ವಿಷಯವಾಗಿ ಇವರು ಮಾತನಾಡುತ್ತಿರಲು ಹೊರೇಷಿಯೋವು ಆ ಭೂತದ ಬರುವಿಕೆಯನ್ನು ತಿಳಿಸಿದನು. ಅಷ್ಟರಲ್ಲಿಯೇ ಎಲ್ಲರೂ ನಿಶ್ಶಬ್ದರಾದರು. ತಂದೆಯ ಭೂತವನ್ನು ನೋಡಿದುದರಿಂದ ರಾಜಕುವರನಿಗೆ ತಟ್ಟನೆ ಭಯವೂ ಆಶ್ಚರ್ಯವೂ ಉಂಟಾದುವು. ಅವನಿಗೆ ಆ ಭೂತವು ಒಳ್ಳೆಯದೇ ಕೆಟ್ಟದೇ ಎಂಬುದಾಗಲಿ, ಅದು ಒಳ್ಳೆಯ ಉದ್ದೇಶದಿಂದ ಬಂದಿದೆಯೇ ಕೆಟ್ಟ ಉದ್ದೇಶದಿಂದ ಬಂದಿದೆಯೇ ಎಂಬುದಾಗಲಿ, ಗೊತ್ತಿರಲಿಲ್ಲವಾದುದರಿಂದ ಆಶ್ಚರ್ಯಕ್ಕಿಂತಲೂ ಭಯವು ಹೆಚ್ಚಿತು. ಅದನ್ನು ಓಡಿಸುವಂತೆ ದೇವತೆಗಳನ್ನೂ ದೇವದೂತರನ್ನೂ ಪ್ರಾರ್ಥಿಸಿದನು. ಆದರೂ ಜಾಗ್ರತೆಯಾಗಿಯೇ ಧೈರ್ಯವನ್ನು ತಂದುಕೊಂಡನು. ಈಗ ಪ್ರೇತರೂಪವಾಗಿದ್ದ ತಂದೆಯು ಮಗನನ್ನು ಬಹು ಕನಿಕರದಿಂದ ನೋಡಿದನು. ಜೀವಿತನಾಗಿದ್ದಾಗ್ಗೆ ತಂದೆಯು ಮಗನನ್ನು ಹೇಗೆ ನೋಡುತ್ತಿದ್ದನೋ ಈಗಲೂ ಹಾಗೆಯೇ ನೋಡಿದನು; ಮಾತನಾಡುವ ಉದ್ದೇಶವುಳ್ಳಂತೆ ಬೋಧೆಯಾಯಿತು. ಆದುದರಿಂದ ರಾಜಕುವರನಿಗೆ ಮಾತನಾಡದೆ ಇರಲಾಗಲಿಲ್ಲ. "ತಂದೆಯೇ, ಓ! ಪ್ರಭುವೇ," ಎಂದು ಮಾತಿಗೆ ಮೊದಲಿಟ್ಟು, ಅವನು ಸಮಾಧಿಸ್ಥಳವನ್ನು ಏಕೆ ಬಿಟ್ಟುಬಂದನೆಂಬುದನ್ನೂ, ಏತಕ್ಕಾಗಿ ಭೂಮಿಯನ್ನೂ ಬೆಳದಿಂಗಳನ್ನೂ ನೋಡಲೆಳಸಿರುವನೆಂಬುದ

ನ್ನೂ, ಅವನ ಆತ್ಮಕ್ಕೆ ಹಿತವಾಗುವಂತೆ ತಾವು ಏನು ಮಾಡಬಹುದೆಂಬು ದನ್ನೂ ತಿಳಿಸಬೇಕೆಂದು ಕೇಳಿದನು. ಆಗ ಆ ಭೂತವು ಹ್ಯಾಂಲೆಟ್ ನನ್ನು ಕರೆದು ಒಂದು ನಿರ್ಜನಪ್ರದೇಶಕ್ಕೆ ಬರಬೇಕೆಂದು ಸೂಚಿಸಿತು. ಆದರೆ ಹೊರೇಷಿಯೋವೂ, ಮಾರ್ಸೆಲಸ್‌ನೂ, ಆ ಭೂತವು ದುಷ್ಟ ಭೂತವಾಗಿದ್ದು ರಾಜಕುವರನನ್ನು ಸಮೀಪದ ಸಮುದ್ರ ತೀರಕ್ಕೋ ಅಥವಾ ಎತ್ತರವಾದ ಪರ್ವತ ಶಿಖರಕ್ಕೋ ಕರೆದೊಯ್ದು ಅಲ್ಲಿ ಅವನ ಬುದ್ಧಿ ಪಲ್ಲಟ ಮಾಡಿ ಬಿಡಬಹುದೋ ಎಂದು ಹೆದರಿ, ಅವನನ್ನು ಅದರ ಜತೆಯಲ್ಲಿ ಹೋಗದಿರುವಂತೆ ಮಾಡಬೇಕೆಂದು ಪ್ರಯತ್ನಿಸಿದರು. ಆದರೆ ರಾಜಕುವರನಿಗೆ ಜೀವದ ಮೇಲೆ ಆಸೆಯಿರಲಿಲ್ಲ. "ಅಲ್ಲದೆ ಆತ್ಮವು ನಿತ್ಯ. ಅದನ್ನು ಈ ಭೂತವು ಏನುಮಾಡೀತು?" ಎಂದು ಕೊಳ್ಳುತ್ತ ಧೀರನಾದ ರಾಜಕುವರನು ಇವರ ಮಾತಿಗೆ ಕಿವಿಗೊಡದೆ, ಆ ಭೂತವು ತನ್ನನ್ನು ಕರೆದುಕೊಂಡು ಹೋದ ಹೋದ ಕಡೆಗೆಲ್ಲಾ ಸಿಂಹದಂತೆ ನುಗ್ಗಿದನು. ಭೂತವಾಗಿರುವ ತಂದೆಯೂ ಮಗನೂ ವಿಜನ ವಾದ ಸ್ಥಳವನ್ನು ತಲಪುತ್ತಲೇ, ಭೂತವು ಮಾತನಾಡತೊಡಗಿತು. "ಮಗು! ನಾನು ನಿನ್ನ ತಂದೆ. ನನ್ನ ಸಹೋದರನಾದ ಕ್ಲಾಡಿಯ ಸ್ಸನು ನನ್ನ ಭಾರ್ಯೆಯನ್ನೂ ಸಿಂಹಾಸನವನ್ನೂ ಆಕ್ರಮಿಸಿಕೊ ಳ್ಳಲು ನನ್ನನ್ನು ಕೊಲೆ ಮಾಡಿದನು. (ಹೀಗೆಯೇ ನಡೆದಿರಬಹು ದೆಂದು ರಾಜಕುವರನಿಗೂ ಬಲವಾದ ಸಂಶಯವಿತ್ತು.) ಪದ್ಧತಿಯ ಪ್ರಕಾರ ಒಂದು ದಿನ ಮಧ್ಯಾಹ್ನ ನಾನು ಉದ್ಯಾನವನದಲ್ಲಿ ಮಲಗಿ ರಲು ಘಾತುಕನಾದ ಅವನು ಅಲ್ಲಿಗೆ ಬಂದು ಮನುಷ್ಯಪ್ರಕೃತಿಗೆ ಮಹಾಕ್ರೂರವಿಷವಾದ ಹೆನ್‌ಬೇನ್ ದ್ರವವನ್ನು ನನ್ನ ಕಿವಿಯಲ್ಲಿ ಹಿಂಡಿದನು. ಅದು ಪಾದರಸದಂತೆ ಬಹುಬೇಗನೆ ಎಲ್ಲ ರಕ್ತನಾಳಗಳ ಲ್ಲಿಯೂ ವ್ಯಾಪಿಸಿತು. ರಕ್ತವನ್ನು ಕುದಿಸಿ ಚರ್ಮವೆಲ್ಲಾ ಕುಷ್ಠ ಹಿಡಿದಂತೆ ಮಾಡಿತು. ಹೀಗೆ, ನಾನು ನಿದ್ರಿಸುತ್ತಿದ್ದಾಗ, ನನ್ನ ತಮ್ಮನೇ, ನನ್ನ ಪ್ರಾಣ ಪತ್ನಿ ರಾಜ್ಯಗಳನ್ನು ತಟ್ಟನೆ ಅಪಹರಿಸಿ ದನು. ನಿನ್ನ ತಂದೆಯ ಮೇಲೆ ನಿನಗೆ ಪ್ರೀತಿ ಇದ್ದರೆ, ನನ್ನನ್ನು ಅನ್ಯಾಯವಾಗಿ ಕೊಲೆಮಾಡಿದ ಆ ನನ್ನ ಸಹೋದರನ ಮೇಲೆ ಹಗೆ

ತೀರಿಸಿಕೊಳ್ಳಲೇಬೇಕು. ಅಯ್ಯೋ! ನಿನ್ನ ಜನನಿಯು ನನ್ನನ್ನು ಕೊಲೆ ಮಾಡಿದವನನ್ನೇ ಮದುವೆಯಾಗುವಷ್ಟು ನೀಚಳಾಗಿಹೋದಳಲ್ಲಾ! ಆದರೆ ನೀನು ಪಾಪಿಯಾದ ಆ ನನ್ನ ತಮ್ಮನಮೇಲೆ ಹಗೆ ತೀರಿಸಿಕೊಳ್ಳುವಾಗ ನಿನ್ನ ತಾಯಿಗೆ ಸ್ವಲ್ಪವಾದರೂ ಬಾಧೆಯಾಗದಂತೆ ನೋಡಿಕೊ. ಅವಳಿಗೆ ದೇವರು ಕೊಡುವ ಶಿಕ್ಷೆಯೂ, ಅವಳ ಅಂತರಂಗವು ಕೊಡುವ ಯಾತನೆಯೂ ಸಾಕಾಗಿವೆ'' ಎಂದು ಹೇಳಿತು. ರಾಜಕುವರನು ಇವೆಲ್ಲವನ್ನೂ ಅವನ ಅಪ್ಪಣೆಯಂತೆ ನಡೆಸುವುದಾಗಿ ಮಾತುಕೊಡಲು ಭೂತವು ಅದೃಶ್ಯವಾಯಿತು. ಅನಂತರ ರಾಜಕುವರನು ಅದುವರೆಗೆ ತಾನು ಕಲಿತು, ಕಂಡು, ಕೇಳಿದ ಸಂಗತಿಗಳನ್ನೆಲ್ಲಾ ಮರೆತು ತನ್ನ ತಂದೆಯು ಹೇಳಿದ್ದ ಒಂದಂಶವನ್ನು ಮಾತ್ರ ಜ್ಞಾಪಕದಲ್ಲಿಟ್ಟುಕೊಳ್ಳುವುದಾಗಿ ಖಂಡಿತವಾದ ಪ್ರತಿಜ್ಞೆ ಮಾಡಿದನು. ಭೂತವು ಬಂದ ಸಂಗತಿಯನ್ನೂ, ಅದು ತನ್ನನ್ನು ಕರೆದುಕೊಂಡುಹೋದ ಸಂಗತಿಯನ್ನೂ, ಬಹು ಗೋಪ್ಯವಾಗಿಡಬೇಕೆಂದು ಹೊರೇಷಿಯೋ ಮಾರ್ಸೆಲಸ್‌ರಿಗೆ ಹೇಳಿದನು. ಆಗ ನಡೆದ ಸಂಭಾಷಣೆಯನ್ನು ಹೊರೇಷಿಯೋವಿಗೆ ಮಾತ್ರ ಹೇಳಿದನು.

ರಾಜಕುವರನ ಮನಸ್ಸು ಮೊದಲೇ ದುರ್ಬಲವಾಗಿತ್ತು. ಪ್ರೇತದರ್ಶನದಿಂದ ಈಗ ಅದು ಮತ್ತೂ ದುರ್ಬಲವಾಯಿತು. ಬುದ್ಧಿಯೇ ವಿಕಲವಾದಹಾಗಾಯಿತು. ಇದು ಹೀಗೆಯೇ ಅನುಗಾಲವೂ ನಡೆದೀತೆಂದು ಅವನು ಹೆದರಿ "ಕ್ಲಾಡಿಯುಸ್ಸಿಗೆ ವಿರೋಧವಾಗಿ ನಾನು ಏನನ್ನೋ ಯೋಚಿಸುತ್ತಿರುವುದಾಗಿ, ಅಥವಾ ನನ್ನ ತಂದೆಯ ಮರಣಕಾರಣವು ನನಗೆ ತಿಳಿದಿರುವುದಾಗಿ ಸಂಶಯ ಬಂದರೆ ಕ್ಲಾಡಿಯುಸ್ಸನು ನನ್ನ ಮೇಲೆ ಕಾವಲು ಇಡಬಹುದು. ಅದರಿಂದ ನಾನು ದಿಟವಾಗಿ ಹುಚ್ಚುಹಿಡಿದವನಂತೆ ಕಾಣಬೇಕು. ಇದರಿಂದ ಅವನಿಗೆ ನನ್ನಿಂದ ಅಪಾಯವಾದೀತೆಂಬ ಭಯವಾಗಲಿ, ಸಂಶಯವಾಗಲಿ ಹುಟ್ಟದಿರುವುದು. ಮನಸ್ಸಿನ ನಿಜವಾದ ಬಾಧೆಯನ್ನು ಕೃತಕ ಪೈತ್ಯದಿಂದ ಮುಚ್ಚಿಕೊಳ್ಳುವುದರಿಂದ ಕ್ಷೇಮಕರವಾಗಿಯೂ ಕಾಣುವುದು.'' ಎಂದು ಯೋಚಿಸಿಕೊಂಡನು. ನಡೆನುಡಿಗಳಲ್ಲಿಯೂ, ವೇಷಭಾಷೆಗಳಲ್ಲಿಯೂ

ಸಂಪೂರ್ಣವಾಗಿ ಹುಚ್ಚನಂತಾದನು. ರಾಜನೂ ರಾಣಿಯೂ ಇದರ ಕಾರಣವನ್ನರಿಯಲಾರದೆ ವಂಚಿತರಾದರು. ರಾಜಕುವರನು ತನ್ನ ತಂದೆಯ ಭೂತವನ್ನು ಕಂಡಿದ್ದನೆಂಬ ಸಂಗತಿಯು ಇವರಿಗೆ ತಿಳಿಯಲಿಲ್ಲ. ಆದ್ದರಿಂದ ತನ್ನ ತಂದೆಯ ಸಾವು ಈ ವಿಧವಾದ ಮನೋವಿಕಾರಕ್ಕೆ ಕಾರಣವಾಗಿರಬಹುದೆಂದು ಅವರು ಅರಿಯದವರಾದರು. ಈ ಮನೋವಿಕಾರಕ್ಕೆ ಸ್ತ್ರೀವ್ಯಾಮೋಹವು ಕಾರಣವೆಂದು ಯೋಚಿಸಿಕೊಂಡರು.

ರಾಜಕಾರ್ಯಗಳಲ್ಲಿ ಅರಸಿಗೆ ಮುಖ್ಯ ಮಂತ್ರಿಯಾಗಿದ್ದ ಪೊಲೋನಿಯಸ್ಸನ ಮಗಳಾದ ಒಫೀಲಿಯಾ ಎಂಬ ರೂಪವತಿಯಾದ ತರುಣಿಯಲ್ಲಿ ರಾಜಕುವರನು ಇದಕ್ಕೆ ಹಿಂದೆ ಅನುರಕ್ತನಾಗಿದ್ದನು. ಅವಳಿಗೆ ಅನೇಕ ಪ್ರಣಯಪತ್ರಿಕೆಗಳನ್ನು ಬರೆದಿದ್ದನು; ಉಂಗುರಗಳನ್ನು ಕಳುಹಿಸಿದ್ದನು. ತನ್ನ ಪ್ರೀತಿಯನ್ನು ಪುರಸ್ಕರಿಸಿ, ಪರಿಗ್ರಹಿಸಬೇಕೆಂದು ಅನೇಕವೇಳೆ ಪ್ರಾರ್ಥನೆಮಾಡಿದ್ದನು. ಪ್ರೀತಿಪ್ರಾರ್ಥನೆಗಳಿಗೆ ಕೊನೆಮೊದಲಿಲ್ಲದ ಇವನ ಪ್ರಣಯ ಪ್ರತಿಜ್ಞೆಗಳನ್ನು ಆ ತರುಣಿಯೂ ಅಂಗೀಕರಿಸಿದ್ದಳು. ಆದರೆ ಈಚೆಗೆ ಇವನು ಮನೋವ್ಯಥೆಗೊಳಗಾಗಿ ಅವಳನ್ನು ಮನ್ನಿಸದೆ ಹೋದನು. ಹುಚ್ಚನಂತೆ ಕಾಣಿಸಿಕೊಳ್ಳಲು ಇವನು ಮೊದಲುಮಾಡಿದಂದಿನಿಂದ ಅವಳನ್ನು ನಿರ್ದಯೆಯಿಂದಲೋ, ಒಂದು ವಿಧವಾದ ಒರಟುತನದಿಂದಲೋ ಕಾಣುತ್ತಿರುವಂತೆ ತೋರ್ಪಡಿಸಿಕೊಂಡನು. ಆದರೆ ಆಕೆ ಅವನನ್ನು ಅನೃತವಾದಿಯೆಂದು ಭಾವಿಸದೆ, ಈ ಪ್ರಕೃತಸ್ಥಿತಿಯು ಚಿರಸ್ಥಾಯಿಯಾದ ಔದಾಸೀನ್ಯವಲ್ಲವೆಂತಲೂ, ಮನೋವ್ಯಥೆಯೇ ಇದಕ್ಕೆ ಕಾರಣವೆಂತಲೂ ಯೋಚಿಸುತ್ತಿದ್ದಳು. ನಿಯಮಾನುಸಾರವಾಗಿ ಬಾಜಿಸಲು ಇಂಪಾಗಿ ಧ್ವನಿಕೊಡುವ ವಾದ್ಯವು ನಿಯಮ ತಪ್ಪಿ ಬಾಜಿಸಿದರೆ ಕರ್ಕಶಧ್ವನಿಯಿಂದ ಅಸಹ್ಯವಾಗುವಂತೆಯೇ, ಈ ರಾಜಕುವರನ ಗಂಭೀರವಾದ ಮನೋಭಾವವೂ, ಸೂಕ್ಷ್ಮವಾದ ಬುದ್ಧಿಯೂ ಮನೋವ್ಯಥೆಯಿಂದ ವಕ್ರವಾಗಿ ಕಾಣುತ್ತಿವೆಯೆಂದು ತರ್ಕಿಸಿದಳು. ತಂದೆಯನ್ನು ಕೊಂದವನ ಮೇಲೆ ಹಗೆ

ತೀರಿಸಿಕೊಳ್ಳುವ ಯೋಚನೆಯೂ, ರಮಣಿಯ ಪ್ರೇಮವನ್ನು ಪಡೆಯುವ ಯೋಚನೆಯೂ ಹೃದಯದಲ್ಲಿ ಏಕತ್ರ ಸ್ಥಾನಹೊಂದಲಾರವು. ಆದರೂ ಅವನಿಗೆ ಆ ರಮಣಿಯ ಯೋಚನೆಯು ಅಗಾಗ್ಯೆ ಬರುತ್ತಿತ್ತು. ಹೀಗಿರಲು ಒಂದಾನೊಂದು ದಿನ ತಾನು ಆ ಗುಣವತಿಯನ್ನು ಅಕಾರಣವಾಗಿ ಅತ್ಯಂತ ಕಠಿಣವಾಗಿ ಕಂಡುದಾಗಿ ಅವನ ಮನಸ್ಸಿಗೆ ಬರುತ್ತಲೇ, ಅವನ ಹುಚ್ಚಿಗೆ ಅನುಗುಣವಾಗಿ ತೋರಿಬರುವಂತೆ ಅತ್ಯುಕ್ತಿಭರಿತವಾದ ಒಂದು ಹುಚ್ಚು ಹುಚ್ಚು ಪತ್ರವನ್ನು ಬರೆದನು. ಹುಚ್ಚುಹುಚ್ಚಾಗಿ ತೋರುತ್ತಿದ್ದರೂ ಅದರಲ್ಲಿ ಪ್ರೀತಿಯ ಮನೋಜ್ಞಭಾವವು ಅಲ್ಲಲ್ಲಿ ವ್ಯಕ್ತವಾಗುತ್ತಿತ್ತು. ಆದ್ದರಿಂದ ಅವನ ಹೃದಯತಲದಲ್ಲಿ ತನ್ನ ಮೇಲಣ ಗಂಭೀರವಾದ ಪ್ರೇಮವು ನೆಲಸಿದ್ದಿತೆಂದು ಆ ತರುಣಿಯು ತಿಳಿಯದೆ ಹೋಗಲಿಲ್ಲ.

"ನಕ್ಷತ್ರಗಳು ತೇಜೋಮಯವೇ, ಸೂರ್ಯನು ಸ್ಥಿರನೇ, ಸತ್ಯ ಅಸತ್ಯವೇ ಎಂದು ಬೇಕಾದರೂ ಸಂದೇಹ ಬರಲಿ, ಆದರೆ ನಾನು ನಿನ್ನನ್ನು ಪ್ರೀತಿಸುತ್ತೇನೆಯೋ ಎಂಬಂಶದಲ್ಲಿ ಮಾತ್ರ ಸಂದೇಹ ಬರದಿರಲಿ!" ಎಂಬಿನೇ ಮೊದಲಾದ ರೀತಿಯಲ್ಲಿ ಕಾಗದವನ್ನು ಬರೆದನು. ಅವಳು ಕರ್ತವ್ಯವನ್ನನುಸರಿಸಿ ಅದನ್ನು ತನ್ನ ತಂದೆಗೆ ತೋರಿಸಿದಳು. ಆ ವೃದ್ಧನು ಅದನ್ನು ರಾಜನಿಗೂ ರಾಣಿಗೂ ತಿಳಿಸುವುದು ತನ್ನ ಕರ್ತವ್ಯವೆಂದು ಭಾವಿಸಿ, ಅವರಿಗೆ ತಿಳಿಸಿದನು. ಅವರು ಅಂದಿನಿಂದ ರಾಜಕುವರನ ಮನೋವಿಕಾರಕ್ಕೆ ಪ್ರಣಯಾನುರಾಗವೇ ಕಾರಣವೆಂದು ನಿರ್ಧರಮಾಡಿಕೊಂಡರು. ಈ ರಮಣಿಯ ಅಸದೃಶವಾದ ರೂಪಾತಿಶಯವೂ ಸೌಶೀಲ್ಯವೂ ರಾಜಕುಮಾರನನ್ನು ವಿವಾಹಾನಂತರ ಹಿಂದಿನ ಸಂತೋಷಚಿತ್ತವೃತ್ತಿಗೆ ತರುವುವೆಂದು ರಾಣಿಯು ಯೋಚಿಸಿದಳು.

ಆದರೆ ರಾಜಕುವರನ ವ್ಯಾಧಿಯು ಇವಳ ಊಹೆಗೆ ಮೀರಿದ ಕಾರಣವುಳ್ಳದ್ದಾಗಿಯೂ, ಆದುದರಿಂದ ಇವಳ ಕೋರಿಕೆಯಂತೆ ಗುಣಹೊಂದಲಾರದುದಾಗಿಯೂ ಇತ್ತು. ತನ್ನ ಘಾತುಕನನ್ನು ವಧಿಸುವಂತೆ ಭೂತವು ಮಾಡಿದ ಅಪ್ಪಣೆಯನ್ನು ನೆರವೇರಿಸುವವರೆಗೆ ಅವನಿಗೆ ಮನಶ್ಶಾಂತಿಯುಂಟಾಗುವ ಸಂಭವವೇ ಇರಲಿಲ್ಲ. ಆ ಕೆಲಸವನ್ನು

ನೆರವೇರಿಸುವುದಕ್ಕೆ ಕ್ಷಣಕಾಲ ಸಾವಕಾಶಮಾಡಿದರೂ, ತಂದೆಗೆ ಅವಿಧೇಯನಾಗಿ ನಡೆದ ಮಹಾಪಾಪವು ಪ್ರಾಪ್ತವಾಗುವುದೆಂದು ರಾಜಕುವರನು ಪರಿತಪಿಸುತ್ತಿದ್ದನು. ತನ್ನ ತಂದೆಯ ಕೊಲೆಪಾತಕಿಯು ಈಗ ರಾಜನಾಗಿರುತ್ತ, ಸರ್ವದಾ ಅಂಗರಕ್ಷಕರಿಂದ ಪರಿವೃತನಾಗಿರುವನು; ಅಥವಾ ತನ್ನ ತಾಯಿಯಾದ ಅವನ ಭಾರ್ಯೆಯ ಜೊತೆಯಲ್ಲಿರುವನು ; ರಾಜನನ್ನು ರಾಣಿಯ ಬಳಿಯಿಂದ ದೂರವಾಗಿಡುವುದು ಸುಲಭವಾಗಿರಲಿಲ್ಲ. ಈ ಕಾರಣಗಳಿಂದ ಇವನ ಕಾರ್ಯಸಾಧನೆಯು ಬಹು ತೊಡಕುಗಳಿಗೆ ಸಿಕ್ಕಿತು. ಅಲ್ಲದೆ ತನ್ನ ತಂದೆಯನ್ನು ಕೊಂದು ಸಿಂಹಾಸನವನ್ನು ಆಕ್ರಮಿಸಿಕೊಂಡಿರುವವನು ತನ್ನ ತಾಯಿಗೆ ಪ್ರಿಯನೆಂಬ ಕಾರಣದಿಂದಲೂ, ತಂದೆಯ ಭೂತಾತ್ಮವು "ನಿನ್ನ ತಾಯಿಯ ಅತ್ಯಾಚಾರವಿಚಾರದಲ್ಲಿ ಅವಳ ಮನಸ್ಸಾಕ್ಷಿಯೂ ಭಗವಂತನೂ ಶಿಕ್ಷಕರಾಗಿರಬೇಕಲ್ಲದೆ, ಮಗನಾದ ನೀನು ಅವಳನ್ನು ದಂಡಿಸತಕ್ಕುದಲ್ಲ." ಎಂದು ಹಿಂದೆ ಹೇಳಿದ್ದ ಕಾರಣದಿಂದಲೂ, ತನ್ನ ತಾಯಿಯ ಅತ್ಯಾಚಾರಕ್ಕಾಗಿ ರಾಜಕುವರನು ದುಃಖಿತನಾಗಿದ್ದುದರಿಂದಲೂ, ಇವನ ಕಾರ್ಯೋತ್ಸಾಹವು ಇನ್ನೂ ಮಂದವಾಗುತ್ತಿತ್ತು. ಈ ರಾಜಕುವರನಂತಹ ಮೃದುಸ್ವಭಾವದವನಿಗೆ ಮನುಷ್ಯಮಾತ್ರನನ್ನು ಕೊಲೆಮಾಡುವುದೆಂಬುದೇ ಅತಿನಿಂದ್ಯವೂ ಘೋರವೂ ಆದ ವಿಚಾರವಾಗಿತ್ತು. ಈ ರೀತಿಯಾದ ಮನೋವ್ಯಾಧಿಯೂ ಬಹುಕಾಲದಿಂದ ಇವನನ್ನು ಬಾಧಿಸುತ್ತಿದ್ದ ವಿವಿಧಾಲೋಚನೆಗಳಿಂದುಂಟಾದ ಚಿತ್ತಕ್ಷೋಭೆಯೂ ಕಾರ್ಯಸಾಧನೆಗೆ ದೃಢಸಂಕಲ್ಪಮಾಡಲು ಅಡಚಣೆಗಳಾದುವು. ಆದುದರಿಂದ ಡೋಲಾಯಮಾನವಾದ ಮನಸ್ಸುಳ್ಳವನಾಗಿ ಕಟ್ಟಕಡೆಯ ಲಕ್ಷ್ಯವನ್ನು ಸಾಧಿಸಲು ಹಿಂದುಳಿದನು. ಅಲ್ಲದೆ "ನಾನು ನೋಡಿದುದು ನಿಜವಾಗಿಯೂ ನಮ್ಮ ತಂದೆಯ ಪ್ರೇತವೇ? ಅಥವಾ ಕಾಮರೂಪಿಯಾದ ಪಾಪಪುರುಷನು, ಅತ್ಯಂತ ಘೋರವಾದ ಕೊಲೆಮಾಡಿಸುವುದಕ್ಕಾಗಿ, ಮೃತನಾದ ನನ್ನ ತಂದೆಯ ರೂಪವನ್ನು ಹೊಂದಿಬಂದು ವ್ಯಾಕುಲದಿಂದ ದುರ್ಬಲನಾದ ನನ್ನನ್ನು ಮೆಟ್ಟಿಕೊಂಡಿರಬಹುದೆ?" ಎಂದು ತನ್ನಲ್ಲಿತಾನೇ ವಿಚಾರ

ಮಾಡತೊಡಗಿದನು. ಅಂತೂ ಭ್ರಮಾತ್ಮಕವಾಗಿರಬಹುದಾದ ಛಾಯಾಸ್ವರೂಪಿನ ಭೂತದ ಉದ್ದೇಶದಂತೆ ನಡೆಯಲು ತನಗೆ ಇನ್ನೂ ಪ್ರಬಲವಾದ, ಖಂಡಿತವಾದ, ಆಧಾರಗಳು ಆವಶ್ಯಕವೆಂದು ನಿರ್ಧರಿಸಿದನು.

ಈ ರೀತಿಯಲ್ಲಿ ಈ ರಾಜಕುವರನು ವಿವಿಧವಿಚಾರಮಗ್ನನಾಗಿರುವಲ್ಲಿ ಆಸ್ಥಾನಕ್ಕೆ ಒಂದು ನಾಟಕಸಂಘದವರು ಬಂದರು. ಹಿಂದೆ ಈ ರಾಜಕುವರನು ಇವರ ನಾಟಕಾಭಿನಯದಲ್ಲಿ ಅತ್ಯಂತ ಸಂತಸಗೊಳ್ಳುತ್ತಿದ್ದನು. ಅದರಲ್ಲಿಯೂ ಮುಖ್ಯವಾಗಿ ಟ್ರಾಯ್ ಪಟ್ಟಣದ ಅರಸನಾದ ಪ್ರಿಯಂ ಎಂಬಾತನ ಮರಣ, ಅವನ ರಾಣಿಯಾದ ಹಕ್ಯುಬಾ ಎಂಬಾಕೆಯ ಶೋಕ, ಈ ವಿಚಾರಗಳನ್ನು ಅಭಿನಯಿಸುವ ಒಬ್ಬ ನಟನ ಪಾತ್ರ ಪ್ರದರ್ಶನದಲ್ಲಿಯೂ, ಅವನ ವಾಕ್ಸರಣಿಯಲ್ಲಿಯೂ ಈ ರಾಜಕುವರನಿಗೆ ಆದರವು ಮಿಗಿಲಾಗಿತ್ತು. ಇವನು ತನ್ನ ಪೂರ್ವ ಪರಿಚಿತರೂ ಸ್ನೇಹಿತರೂ ಆದ ಆ ನಾಟಕ ಸಂಘದವರನ್ನು ಅಕ್ಕರೆಯಿಂದ ಕಂಡು, ಹಿಂದೆ ವಿವರಿಸಿದ ಪಾತ್ರವು ಬಲು ಚೆನ್ನಾಗಿದ್ದುದರಿಂದ, ಇನ್ನೊಮ್ಮೆ ಅದನ್ನು ನೋಡಬೇಕೆಂದೂ, ಕೇಳಬೇಕೆಂದೂ ಕುತೂಹಲಪಟ್ಟನು. ಆ ನಟನು ಸಮಸ್ತವೂ ಆಗ ಕಣ್ಣೆದುರಿಗೆ ನಡೆದಿದ್ದರೆ ಹೇಗೋ ಹಾಗೆ ಮನಮರುಗಿಸುವಂತಹ ವಾಗ್ವೈಖರಿಯಿಂದಲೂ, ಅಭಿನಯ ಕೌಶಲದಿಂದಲೂ—ಪ್ರಜಾಸಹಿತವಾದ ಟ್ರಾಯ್ ಪಟ್ಟಣವನ್ನು ಶತ್ರುಗಳು ಸುಟ್ಟು ಬೂದಿಮಾಡಿ ವೃದ್ಧನೂ ದುರ್ಬಲನೂ ಆದ ಅರಸನನ್ನು ಕ್ರೂರವಾಗಿ ಕೊಲ್ಲಲು, ಅವನ ವೃದ್ಧಳಾದ ರಾಣಿಯು ಕಿರೀಟವನ್ನು ಧರಿಸುತ್ತಿದ್ದ ತಲೆಯ ಮೇಲೆ ಒಂದು ಕೊಳಕು ಬಟ್ಟೆಯನ್ನು ಕವಿಚಿಕೊಂಡು, ಶ್ರೇಷ್ಠವಾದ ಪೀತಾಂಬರವನ್ನು ಧರಿಸುತ್ತಿದ್ದ ಶರೀರಕ್ಕೆ ಕಂಬಳಿಯ ತುಂಡನ್ನು ಸುತ್ತಿಕೊಂಡು, ದುಃಖಾತಿರೇಕದಿಂದ, ಬರಿಯ ಕಾಲಿನಲ್ಲಿ ಹುಚ್ಚುಹುಚ್ಚಾಗಿ ಅರಮನೆಯಲ್ಲೆಲ್ಲಾ ಓಡಿಯಾಡಿದ್ದನ್ನು ವಿವರಿಸುತ್ತಿರಲಾಗಿ ಅದೆಲ್ಲವೂ ಪ್ರತ್ಯಕ್ಷತಃ ನಡೆದಂತೆ ಬೋಧೆಯಾಗುತ್ತಿತ್ತು. ಪ್ರೇಕ್ಷಕರೆಲ್ಲರೂ ಗೋಳಾಡಿದರು. ಆ ನಟನೂ ಗದ್ಗದಕಂಠನಾಗಿ, ಧಾರಾಕಾರವಾಗಿ ಸುರಿಯುತ್ತಿರುವ ಕಣ್ಣೀರಿನಿಂದ ಆ ಪಾತ್ರವನ್ನು ಪ್ರದರ್ಶಿಸಿದನು.

"ಆಹಾ! ಈ ಪಾತ್ರವನ್ನು ಪ್ರದರ್ಶಿಸಿದ ನಟನು ಕೇವಲ ಕಲ್ಪಿತವಾದ ವಾಕ್ಯಗಳನ್ನು ಪಠಿಸುತ್ತ, ತಾನು ಕಂಡೇ ಅರಿಯದ, ಸತ್ತು ಎಷ್ಟೋ ಶತಮಾನಗಳಾಗಿಹೋದ ಹಕ್ಯುಬಾ ಎಂಬವಳಿಗಾಗಿ ಇಷ್ಟು ದುಃಖಿಕೊಳ್ಳಗಾಗಲು, ಮೊನ್ನೆಮೊನ್ನೆ ಬದುಕಿ ರಾಜನಾಗಿದ್ದು ಕೊಲೆಗೆ ಈಡಾದ ಸ್ವಂತ ತಂದೆಯ ವಿಚಾರದಲ್ಲಿ ದುಃಖವೇ ಇಲ್ಲದಿರುವ ನಾನು ಎಂಥ ಮಡೆಯ! ಹಗೆ ತೀರಿಸಿಕೊಳ್ಳಬೇಕೆಂಬ ನನ್ನ ಸಂಕಲ್ಪವು ಔದಾಸೀನ್ಯದಿಂದ ಮಂದವಾದ ಮರವೆಯಲ್ಲಿ ನಿದ್ರೆ ಮಾಡಿಬಿಟ್ಟಿತಲ್ಲಾ!" ಎಂದು ಯೋಚಿಸತೊಡಗಿದನು.

ಹೀಗೆ ಅವನು ನಟರ ವಿಚಾರವನ್ನೂ, ನಾಟಕಾಭಿನಯವಿಚಾರವನ್ನೂ, ಉತ್ತಮವಾದ ನಾಟಕವು ಪ್ರೇಕ್ಷಕರ ಚಿತ್ತವೃತ್ತಿಯಲ್ಲಿ ಬಲವಾಗಿ ಕಾರ್ಯಮಾಡುವುದೆಂಬುದನ್ನೂ ಕುರಿತು ಯೋಚಿಸುತ್ತಿರುವಲ್ಲಿ, ಒಂದಾನೊಂದು ಕೊಲೆಯ ವಿಚಾರವೂ, ಆ ಕೊಲೆಮಾಡಿದವನು ತಾನು ಮಾಡಿದ ಕೊಲೆಯನ್ನೇ ಹೋಲುವ ಒಂದು ಕೊಲೆಯ ಅಭಿನಯವು ರಂಗಸ್ಥಳದಲ್ಲಿ ಬಹು ಚೆನ್ನಾಗಿ ಅಭಿನಯಿಸಲ್ಪಡುವುದನ್ನು ನೋಡಿದಮಾತ್ರದಿಂದಲೇ ತನ್ನ ಅಪರಾಧವನ್ನು ಆ ಕ್ಷಣದಲ್ಲಿಯೇ ಅಲ್ಲಿಯೇ ಹೇಳಿಕೊಂಡನೆಂಬ ಸಂಗತಿಯೂ ಜ್ಞಾಪಕಕ್ಕೆ ಬಂತು.

ಈ ನಟರು ತನ್ನ ಚಿಕ್ಕಪ್ಪನೆದುರಿಗೆ ತನ್ನ ತಂದೆಯ ಕೊಲೆಯನ್ನು ಹೋಲುವಂತಹ ಒಂದು ನಾಟಕವನ್ನು ಆಡಬೇಕೆಂದೂ, ಆಗ ತಾನು ಅತ್ಯಂತ ಜಾಗರೂಕತೆಯಿಂದ, ಆ ನಾಟಕದ ದರ್ಶನವು ಅವನ ಚಿತ್ತವೃತ್ತಿಯಲ್ಲಿ ಏನು ಪರಿಣಾಮಮಾಡುವುದೆಂಬುದನ್ನು ಕಾಯುತ್ತಿರಬೇಕೆಂದೂ, ಅವನ ಮುಖಭಾವವೇ ಮೊದಲಾದವುಗಳಿಂದ ಅವನ ಮನೋಭಾವವನ್ನು ತಿಳಿದು, ತನ್ನ ತಂದೆಯ ಕೊಲೆಗೆ ಅವನು ಕಾರಣನೆ, ಅಲ್ಲವೆ, ಎಂಬುದನ್ನು ನಿಷ್ಕರ್ಷಿಸಬೇಕೆಂದೂ ಯೋಚಿಸಿದನು. ಅದರಂತೆಯೇ ಒಂದು ನಾಟಕವು ರಚಿತವಾಯಿತು. ಅದನ್ನು ನೋಡುವುದಕ್ಕೆ ರಾಜನೂ ರಾಣಿಯೂ, ಬರುವಂತೆ ಪ್ರಾರ್ಥಿತರಾದರು.

ಆ ನಾಟಕದ ಕಥೆಯು, "ವಿಯನ್ನಾ ನಗರದಲ್ಲಿ ಒಬ್ಬಾನೊಬ್ಬ ಡ್ಯೂಕನಿದ್ದನು. ಅವನ ಭಾಗ್ಯಾಪಹಾರಕ್ಕಾಗಿ ಅವನ ಸಮೀಪ

ಬಂಧುವೇ, ಅವನನ್ನು ಕೊಲೆಮಾಡಿದನು. ಕೆಲವು ಕಾಲಾನಂತರ, ಆ ಕೊಲೆಪಾತಕನು ಆ ಡ್ಯೂಕನ ಪದವಿಯನ್ನೂ, ಅವನ ಹೆಂಡತಿಯ ಪ್ರೇಮವನ್ನೂ ಪಡೆದನು.'' ಎಂಬುದಾಗಿತ್ತು. ಇದು ತನ್ನನ್ನು ಹಿಡಿಯುವುದಕ್ಕಾಗಿ ಒಡ್ಡಿದ ಬೋನೆಂಬುದನ್ನು ತಿಳಿಯದೆ ಆ ರಾಜ್ಯಾಪಹಾರಿಯೂ ಭ್ರಾತೃಘಾತುಕನೂ ಆದ ಕ್ಲಾಡಿಯಸ್ಸನು ಪತ್ನೀಪರಿವಾರಸಹಿತನಾಗಿ ಆ ನಾಟಕವನ್ನು ನೋಡಲು ಬಂದಿದ್ದನು. ರಾಜಕುವರನೂ ಸಹ ಅತ್ಯಂತ ಜಾಗರೂಕತೆಯಿಂದ, ಅವನ ಮುಖ ವಿಕಾರವೇ ಮೊದಲಾದವುಗಳನ್ನು ಪರೀಕ್ಷಿಸುವ ಕುತೂಹಲದಿಂದ ಅವನಿಗೆ ಸಮೀಪದಲ್ಲಿಯೇ ಕಾದು ಕುಳಿತಿದ್ದನು.

ಆ ಡ್ಯೂಕ್ ಮತ್ತು ಅವನ ಹೆಂಡತಿಯ ಸಂಭಾಷಣೆಯೇ ಮೊದಲನೆಯದಾಗಿ ನಾಟಕಾರಂಭವಾಯಿತು. ಈ ಸಂಭಾಷಣೆಯಲ್ಲಿ ಆ ಡ್ಯೂಕಿನ ಮಡದಿಯು ತನಗೆ ತನ್ನ ಪತಿಯಲ್ಲಿರುವ ಅಪರಿಮಿತವಾದ ಪ್ರೀತಿವಾತ್ಸಲ್ಯಗಳನ್ನು ವಿವರಿಸಿ, ಅವನ ಅನಂತರ ತಾನು ಬದುಕಿರಲಾರಳೆಂದೂ, ಹಾಗೂ ಬದುಕಿದ್ದರೆ, ಮತ್ತೆ ವಿವಾಹವಾದಲ್ಲಿ ಪಾತಕಿಯಾಗುವಳೆಂದೂ, ಪುನರ್ವಿವಾಹ ಮಾಡಿಕೊಳ್ಳುವ ಹೆಂಗಸರು ತಮ್ಮ ಪತಿಯನ್ನು ಕೊಲ್ಲಲು ಹೇಸರೆಂದೂ ಹೇಳಿದಳು. ಈ ಮಾತುಗಳನ್ನು ಕೇಳಿ ಅರಸಿನ ಮುಖವು ವಿವರ್ಣವಾಯಿತು. ಅರಸಿತಿಗೆ ದಾರುಣವಾದ ಯಾತನೆಯುಂಟಾಯಿತು. ಕಥೆಯು ಮುಂದಕ್ಕೆ ಸಾಗಿ ಆ ಡ್ಯೂಕನು ಉದ್ಯಾನವನದಲ್ಲಿ ಮಲಗಿರಲು ಅವನ ಬಂಧುವು ಅವನಿಗೆ ವಿಷವನ್ನು ಹಾಕಲು ಬಂದನು. ಈ ಕಥಾಸಂದರ್ಭವು ಅರಸನಿಗೆ ತನ್ನ ಅಣ್ಣನು ಉದ್ಯಾನವನದಲ್ಲಿ ಮಲಗಿರುವಾಗ್ಗೆ ತಾನು ನಡೆಸಿದ ಘೋರ ಕರ್ಮವನ್ನು ತಟ್ಟನೆ ಸ್ಮೃತಿಪಥಕ್ಕೆ ತಂದು ತೋರಿಸಿತು. ಅವನ ಅಂತರಂಗವು ಛಿದ್ರಛಿದ್ರವಾಯಿತು. ಇನ್ನು ನಾಟಕದ ಮುಂದಿನ ಕಥೆಯನ್ನು ನೋಡುವುದಕ್ಕೆ ಕುಳಿತುಕೊಳ್ಳಲು ಅಸಾಧ್ಯವಾಯಿತು. ಆದ್ದರಿಂದ ಆಕಸ್ಮಿಕವಾಗಿ ಅಸ್ವಸ್ಥನಾದಂತೆ, ತಟ್ಟನೆ ನಾಟಕ ಮಂದಿರವನ್ನು ಬಿಟ್ಟು ತನ್ನ ಅಂತಃಪುರಕ್ಕೆ ಹೊರಟುಹೋದನು. ಅರಸನು ಹೊರಟುಹೋದ ಕಾರಣ ನಾಟಕವೂ ಅಲ್ಲಿಗೆ ನಿಂತಿತು. ರಾಜ

ಕುವರನು ತಾನು ಕಂಡುಕೇಳಿದ್ದ ಸಂಗತಿಯು ಭ್ರಮೆಯಲ್ಲವೆಂತಲೂ, ಭೂತವು ಹೇಳಿದ ಸಂಗತಿಗಳು ನಿಜವೆಂತಲೂ ಸಂಬಲು ಈಗ ಪ್ರಮಾಣವು ದೊರೆಯಿತು. ಆಶ್ಚರ್ಯಭಯಾನುಮಾನಹರ್ಷಗಳಿಂದ ಉದ್ವೇಗಗೊಂಡ ಹ್ಯಾಂಲೆಟ್‌ನು ತನ್ನ ಸ್ನೇಹಿತರ ಮುಂದೆ "ಅಯ್ಯಾ, ಆ ಭೂತವು ಹೇಳಿದ ಮಾತು ಅಕ್ಷರಲಕ್ಷಬಾಳುವುದು!" ಎಂದನು. ಹೀಗೆ ತನ್ನ ತಂದೆಯನ್ನು ಅವನ ತಮ್ಮನೇ ಕೊಲೆಮಾಡಿದನೆಂಬ ನಿಶ್ಚಯಜ್ಞಾನ ವುಂಟಾದ ಮೇಲೆ ಆ ಘಾತುಕನಿಗೆ ಯಾವ ರೀತಿಯಾದ ಶಿಕ್ಷೆಯನ್ನು ಮಾಡಿ ಹಗೆ ತೀರಿಸಿಕೊಳ್ಳಬೇಕೆಂದು ಯೋಚಿಸುತ್ತಿರುವಲ್ಲಿ, "ನಿನ್ನೊಡನೆ ಕೆಲವು ವಿಚಾರಗಳನ್ನು ಕುರಿತು ಮಾತನಾಡಬೇಕಾಗಿದೆ." ಎಂಬುದಾಗಿ ಅವನ ತಾಯಿಯು ಹೇಳಿಕಳುಹಿಸಿ ಅವನನ್ನು ಅಂತಃಪುರಕ್ಕೆ ಕರೆಯಿಸಿಕೊಂಡಳು. ಈಚೆಗೆ ರಾಜಕುವರನ ನಡತೆಯಲ್ಲುಂಟಾದ ವ್ಯತ್ಯಾಸವು ಅರಸನನ್ನೂ ಅರಸಿತಿಯನ್ನೂ ಬಹುವಾಗಿ ನೋಯಿಸುತ್ತಿದೆ, ಎಂಬುದನ್ನು ಅರಸಿತಿಯು ತನ್ನ ಮಗನಿಗೆ ತಿಳಿಸಬೇಕೆಂಬುದು ಅರಸನ ಕೋರಿಕೆಯಾಗಿತ್ತು. ಅದರಂತೆ ಅರಸಿತಿಯು ರಾಜಕುವರನನ್ನು ಬರಮಾಡಿಕೊಂಡಳು. ಈ ತಾಯಿ ಮಕ್ಕಳ ಸಂಭಾಷಣೆಯನ್ನು ಸ್ವಲ್ಪವೂ ಲೋಪವಿಲ್ಲದಂತೆ ತಿಳಿಯಬೇಕೆಂದೂ, ಅರಸನು ತಿಳಿಯಬೇಕಾದ ಯಾವುದಾದರೂ ಸಂಗತಿಯನ್ನು ಮಗನ ಮೇಲಣ ಪಕ್ಷಪಾತದಿಂದ ಅರಸಿತಿಯು ತನಗೆ ತಿಳಿಸದಿರಲು ಅವಕಾಶವಿಲ್ಲದಿರಲೆಂದೂ, ಅರಸನು ಪೊಲೋನಿಯಸ್ ಎಂಬ ವೃದ್ಧ ಮಂತ್ರಿಯನ್ನು ಅಂತಃಪುರದಲ್ಲಿ ಒಂದು ತೆರೆಯ ಹಿಂದೆ ಹೊಂಚುಕೇಳುತ್ತಿರುವಂತೆ ನಿಯಮಿಸಿದ್ದನು. ಕುಯುಕ್ತಿ ಕುಮಂತ್ರಗಳಿಂದಲೇ ಬೆಳೆದು ವೃದ್ಧನಾದ ಮತ್ತು ಕುತ್ಸಿತವಾದ ವಕ್ರಮಾರ್ಗದಿಂದ ವಿಚಾರಗಳನ್ನು ತಿಳಿಯುವುದರಲ್ಲಿ ಉತ್ಸಾಹವುಳ್ಳ ಪೊಲೋನಿಯಸ್‌ನಿಗೆ ಈ ಹೀನಕಾರ್ಯವು ಸಮ್ಮತವಾಗಿಯೆ ಇತ್ತು. ರಾಜಕುವರನು ತಾಯಿಯ ಬಳಿಗೆ ಬಂದನು. ಅವಳು ಅವನ ನಡೆನುಡಿಗಳನ್ನು ಕುರಿತು ಸ್ಪಷ್ಟತರವಾದ ರೀತಿಯಲ್ಲಿ ಖಂಡಿಸಿ ಮಾತನಾಡತೊಡಗಿದಳು. "ನೀನು ನಿನ್ನ ತಂದೆಯನ್ನು ಬಹುವಾಗಿ ಅಪಮಾನಗೊಳಿಸಿರುವೆ" ಎಂದಳು. (ಎಂದರೆ ತಾನು

ತನ್ನ ಗಂಡನ ತಮ್ಮನನ್ನು ಮದುವೆಯಾಗಿರುವುದರಿಂದ, ಈಗ ಅರಸನಾದ ಅವನನ್ನು "ನಿನ್ನ ತಂದೆ" ಎಂದು ಹೇಳಿದಳು.) ತನಗೆ ಅತ್ಯಂತ ಪೂಜ್ಯನಾದ ನಿಜವಾದ ತಂದೆಯನ್ನು ಸಂಹರಿಸಿದ ಆ ನೀಚನನ್ನು "ನಿನ್ನ ತಂದೆ" ಎಂದು ಹೇಳಿದ ಮಾತು ರಾಜಕುವರನಿಗೆ ಸಹಿಸಲ ಸಹ್ಯವಾಗಲು ಅತಿ ತೀಕ್ಷ್ಣವಾಗಿ ಮಗನು "ಅಮ್ಮಾ ನೀನು ನನ್ನ ತಂದೆಯನ್ನು ಬಹುವಾಗಿ ಖೇದಗೊಳಿಸಿರುವೆ" ಎಂದನು.

ತಾಯಿ.—'ಇದು ಅಪ್ರಯೋಜಕವಾದ ಉತ್ತರ.'

ಮಗ.—'ಪ್ರಶ್ನೆಯ ಯೋಗ್ಯತೆಗೆ ತಕ್ಕ ಉತ್ತರ!'

ತಾಯಿ. —'ನೀನು ಯಾರೊಡನೆ ಮಾತನಾಡುತ್ತಿರುವೆ ಎಂಬುದನ್ನು ಮರೆತಂತಿದೆ.!'

ಮಗ.—'ಅಯ್ಯೋ, ಮರೆತರೆ ಸಾಕಾಗಿದೆ! ಆದರೆ ಮರೆತಿಲ್ಲ. ನೀನು ನಿನ್ನ ಪತಿಯ ತಮ್ಮನ ಹೆಂಡತಿ. ನನ್ನ ತಾಯಿ. ನೀನು ಈಗ ಏನಾಗಿರುವೆಯೋ ಅದಾಗದೆ ಇದ್ದಿದ್ದರೆ ಚೆನ್ನಾಗಿತ್ತು!'

ತಾಯಿ.—'ಹಾಗೋ! ಆಗಲಿ, ನೀನು ನನ್ನ ವಿಚಾರದಲ್ಲಿ ಇಷ್ಟು ಲಘುವಾಗಿ ನಡೆಯುವುದಾದರೆ, ನಿನ್ನೊಡನೆ ಅಧಿಕಾರದಿಂದ ಮಾತನಾಡಬಲ್ಲವರಿಂದ ಮಾತನಾಡಿಸುವೆನು' ಎಂದು ಹೇಳಿ, ಅರಸನನ್ನೋ ಅಥವಾ ಮಂತ್ರಿಯನ್ನೋ ಬರಮಾಡುವುದರಲ್ಲಿದ್ದಳು. ರಾಜಕುವರನಿಗೆ 'ಈಗ ತಾಯಿಯು ಒಂಟಿಯಾಗಿ ಸಿಕ್ಕಿರುವಳು. ಇವಳಲ್ಲಿ ಮಾತನಾಡಿ ಇವಳ ನೀಚನಡತೆ ಇವಳಿಗೆ ಮನಗಾಣುವಂತೆ ಮಾಡುವುದು ಸಾಧ್ಯವೇ' ಎಂಬ ಯೋಚನೆ ತೋರಿತು. ಆದುದರಿಂದ ಅವಳ ಕೈಯನ್ನು ಭದ್ರವಾಗಿ ಹಿಡಿದುಕೊಂಡು ಅವಳನ್ನು ಕುಳ್ಳಿರಿಸಿದನು. ಅವನ ಆ ಉದ್ರೇಕವನ್ನು ನೋಡಿ ಈ ಹುಚ್ಚನಿಂದ ತನಗೇನಾದರೂ ಅಪಾಯವಾಗಬಹುದೆಂದು, ತಾಯಿಯು ಭಯದಿಂದ ಕೂಗಿಕೊಂಡಳು. ಆಗ ಅಲ್ಲಿದ್ದ ಒಂದು ತೆರೆಯ ಹಿಂದಿನಿಂದ "ಹಾ! ಮಹಾರಾಣಿಯವರು!! ಸಹಾಯ! ಸಹಾಯ!" ಎಂಬ ಶಬ್ದವು ಕೇಳಿಸಿತು.

ಹ್ಯಾಂಲೆಟ್‌ನು ಈ ಧ್ವನಿಯನ್ನು ಕೇಳಿ, ಅರಸಾಗಿರಬಹುದೆಂದು ಊಹಿಸಿ ಧ್ವನಿ ಬಂದ ಕಡೆಯಲ್ಲಿ ಶಬ್ದವು ಅಡಗುವವರೆಗೆ ತನ್ನ

ಕತ್ತಿಯಿಂದ ಇರಿದನು. ಅನಂತರ ಅವನು ಮೃತನಾಗಿರಬಹುದೆಂದು ನಿಶ್ಚಯಿಸಿಕೊಂಡನು. ಆ ಕಳೇಬರವನ್ನು ಈಚೆಗೆ ಎಳೆಯಲಾಗಿ, ಅದು ಅರಸನ ಕಳೇಬರವಾಗಿರದೆ, ತೆರೆಯ ಹಿಂದೆ ಗೂಢಚಾರನಾಗಿ ಅಡಗಿಕೊಂಡಿದ್ದ, ಅಪ್ರಾರ್ಥಿತವಾಗಿ ಎಲ್ಲದರಲ್ಲೂ ತಲೆ ಹಾಕಿಕೊಂಡು ಬರುತ್ತಿದ್ದ ಪೊಲೋನಿಯಸ್ ಆಗಿದ್ದನು. ಆಗ ರಾಣಿಯು, "ಅಯ್ಯೋ! ಏನು ಅವಿವೇಕವಾದ ಘೋರ ಕರ್ಮವನ್ನು ಮಾಡಿದೆ!" ಎಂದಳು.

ರಾಜಕುವರನು "ತಾಯೇ, ಘೋರಕರ್ಮವೇನೋ ಅಹುದು; ಆದರೆ ಅರಸನನ್ನು ಕೊಂದು ಅವನ ತಮ್ಮನನ್ನು ಮದುವೆ ಮಾಡಿಕೊಂಡ ನಿನ್ನ ಕೃತ್ಯದಷ್ಟು ನೀಚವಲ್ಲ" ಎಂದನು. ಈಗ ಅವನಿಗೆ ತನ್ನ ತಾಯಿಯೊಡನೆ ಸ್ಪಷ್ಟವಾಗಿ ಮಾತನಾಡಿಬಿಡಬೇಕೆನ್ನಿಸಿತು. ತಂದೆ ತಾಯಿಗಳ ತಪ್ಪನ್ನು ಮೃದುವಾದ ರೀತಿಯಲ್ಲಿ ಭಾವಿಸಬೇಕಾದುದು ಧರ್ಮವಾಗಿಯೂ ಸಹಜವಾಗಿಯೂ ಇದ್ದರೂ, ಭಯಂಕರವಾದ ಅಪರಾಧಗಳ ವಿಚಾರದಲ್ಲಿ ಮಗನು ತಾಯಿಯಾದವಳನ್ನು ಸುಮ್ಮನೆ ಬಯ್ಯಬೇಕೆಂಬ ಉದ್ದೇಶದಿಂದ ಅಲ್ಲದೆ, ಅವಳನ್ನು ದುರ್ಮಾರ್ಗದಿಂದ ತಪ್ಪಿಸಿ ಸುಪಥವನ್ನು ಹಿಡಿಯುವಂತೆ ಮಾಡುವುದಕ್ಕಾಗಿ ತಕ್ಕಂತೆ ಮಾತನಾಡುವುದು ವಿಹಿತವಾದದ್ದೇಯೆ. ಆದ್ದರಿಂದ ಸುಗುಣಿಯಾದ ರಾಜಕುವರನು ಹೀಗೆಂದನು :—"ಪತಿಯು ಮೃತನಾದ ಅಲ್ಪಕಾಲದಲ್ಲಿಯೇ, ಆತನನ್ನು ಮರೆತು ನೀನು ಪುನರ್ವಿವಾಹವಾದುದೂ, ಅದರಲ್ಲಿಯೂ ಅವನನ್ನು ಕೊಲೆಮಾಡಿದವನನ್ನು ಮದುವೆಯಾದುದೂ, ಎಂಥ ನೀಚಕೃತ್ಯ! ನಿನ್ನ ಮೊದಲ ಮದುವೆಯಲ್ಲಿ ನೀನು ನಮ್ಮ ತಂದೆಗೆ ಮಾಡಿಕೊಟ್ಟ ಭಾಷೆ ಪ್ರತಿಜ್ಞೆಗಳೋ! ಇದನ್ನು ನೋಡಿದರೆ ಹೆಂಗಸರ ಭಾಷೆ ಪ್ರಮಾಣಗಳೇ ನಿರರ್ಥಕ, ಸದ್ಗುಣವೆಂಬುದೇ ಸಂದೇಹ, ವಧೂವರರ ಪ್ರತಿಜ್ಞೆಗಳು ಜೂಜುಖೋರರ ಆಣೆ ಭಾಷೆಗಳಿಗಿಂತಲೂ ಕೀಳು, ಧರ್ಮವೆಂಬುದು ಬೂಟಾಟಿಕೆ, ಮಾತಿನ ಮಾಲೆ—ಎನ್ನಿಸುತ್ತದೆ. ಪಂಚಭೂತಗಳು ಸಹ ನಿನ್ನ ಅತ್ಯಾಚಾರವನ್ನು ಸಹಿಸದೆ ನಾಚಿಕೆಪಡುತ್ತವೆ. ನಿನ್ನ ಪತಿಯ

ಮತ್ತು ಉಪಪತಿಯ ಚಿತ್ರಪಟಗಳನ್ನಾದರೂ ಹೋಲಿಸಿನೋಡು." ಎಂದು ತನ್ನ ತಂದೆಯ ಚಿತ್ರಪಟವನ್ನು ತೋರಿಸಿ, ಎಂಥ ಸುಂದರ ವಾದ ದೃಷ್ಟಿ! ಏನು ದಿವ್ಯವಾದ ಆಕೃತಿ! ಮನ್ಮಥನ ಮುಂಗುರುಳು, ದೇವೇಂದ್ರನ ಫಾಲಫಲಕ! ಗಗನಚುಂಬಿಯಾದ ಮಹಾಮೇರು ವಿನ ಮೇಲೆ ಕುಳಿತು ಅದನ್ನು ಬೆಳಗುತ್ತಿರುವ ದೇವತೆಯಂತಿದ್ದಾನೆ! ಈತನು ನಿನ್ನ ಪತಿಯಾಗಿದ್ದನು." ಎಂದು ಹೇಳಿ, ಮತ್ತೊಂದನ್ನು ತೋರಿಸುತ್ತ, ಇದೋ ನೋಡು, ಇದು ಈಗಿನ ನಿನ್ನ ಪತಿ! ಆ ನಿನ್ನ ಪತಿಯ ಸ್ಥಾನವನ್ನು ಅಕ್ರಮದಿಂದ ಆಕ್ರಮಿಸಿರುವವನು.! ಅಂಥ ಆರೋಗದೃಢಕಾಯನಾದ ಅಣ್ಣನನ್ನು ಪೈರಿಗೆ ಹುಳು ಹತ್ತಿ ಕೊಲ್ಲುವಂತೆ ಕೊಂದ ಕ್ರಿಮಿ! ಆ ಮನ್ಮಥನ ಮುಂದೆ ಈ ಮರ್ಕಟನೆ?" ಎಂದು ಮನಮರುಗುವಂತೆ ಹೇಳಿದನು. ಹೀಗೆ ತನ್ನ ಕುಮಾರನು ತನ್ನ ಪಾಪಮಯವಾದ ಅಂತರಂಗವನ್ನು ತೋರಿಸಿ ಕೊಡಲು, ರಾಣಿಯು ಬಹುವಾಗಿ ನಾಚಿಕೆಪಟ್ಟಳು. ಭಯಂಕರವೂ ವಿಕಾರವೂ ಆದ ತನ್ನ ದುಷ್ಕೃತಸವು ಗೋಚರಿಸಿ ಮೂರ್ಛೆ ಬಂದಂತಾ ದಳು. "ನಿನ್ನ ಪತಿಯನ್ನು ಸಂಹರಿಸಿ, ಕಳ್ಳನಂತೆ ಕಿರೀಟವನ್ನು ಅಪ ಹರಿಸಿದವನೊಡನೆ ಸತಿಯಾಗಿ ಬಾಳುವುದು ನಿನಗೆ ಹೇಗೆ ಸಮ್ಮತವಾ ಯಿತು?" ಎಂದು ರಾಜಕುವರನು ಹೇಳುತ್ತಿರುವ ವೇಳೆಗೆ, ಆ ತಂದೆಯ ಭೂತವು ಅವನು ಜೀವಂತನಾಗಿದ್ದಾಗ್ಗೆ ಕಾಣುತ್ತಿದ್ದಂ ತೆಯೇ, ಇವನು ಹಿಂದೆ ನೋಡಿದ್ದಾಗ ಕಂಡು ಬಂದ ರೂಪದಿಂದಲೇ, ಅಂತಃಪುರವನ್ನು ಪ್ರವೇಶಿಸಿತು. ರಾಜಕುವರನು ಭೀತನಾಗಿ ಆ ಭೂತವು ಏನನ್ನು ಬಯಸುವುದೆಂದು ವಿಚಾರ ಮಾಡಿದನು.

ಭೂತವು "ನೀನು ಮರೆತಂತೆ ಕಾಣುವ ನಿನ್ನ ವಾಗ್ದಾನವನ್ನು, ನನ್ನ ಕೊಲೆಗೆ ಪ್ರತೀಕಾರವನ್ನು, ಜ್ಞಾಪಕಮಾಡಲು ಬಂದೆನು. ನಿನ್ನ ತಾಯಿಯು ಭಯದಿಂದಲೂ ಶೋಕಾತಿಶಯದಿಂದಲೂ ಮೃತಳಾ ದಾಳು! ಅವಳೊಡನೆ ಜಾಗ್ರತೆಯಾಗಿ ಮಾತನಾಡು." ಎಂದು ಹೇಳಿ, ಅದೃಶ್ಯವಾಯಿತು. ಆದರೆ ಆ ಭೂತವು ನಿಂತಿದ್ದ ಸ್ಥಳವನ್ನು ತೋರಿಸುವುದರಿಂದಲಾಗಲಿ, ಅಥವಾ ಎಷ್ಟು ವಿವರಣೆಯಿಂದಲಾಗಲಿ,

ರಾಜಕುವರನಿಗೆ ತಾಯಿಯನ್ನು ನಂಬುವಂತೆ ಮಾಡಲಾಗಲಿಲ್ಲ. ಅವಳ ಕಣ್ಣಿಗೆ ಶೂನ್ಯವಾಗಿ ಕಾಣುವ ಸ್ಥಳದಲ್ಲಿ ತನ್ನ ಮಗನು ಏನೇನೋ ಮಾತನಾಡುತ್ತಿರುವುದು ಅವಳಿಗೆ ಹೆಚ್ಚು ಭಯವನ್ನುಂಟು ಮಾಡಿತು. ಆದರೂ ಇದಕ್ಕೆ ಕಾರಣವು ಅವನ ಅಸ್ವಸ್ಥತೆಯೇ ಎಂದು ಭಾವಿಸಿದಳು. ರಾಜಕುವರನು ತಾಯಿಯನ್ನು ಕುರಿತು "ಅಮ್ಮಾ, ಸಂಕಟದಿಂದ ಮೃತಿಹೊಂದಿದ ತಂದೆಯ ಭೂತವು ಭೂಮಿಗೆ ಮತ್ತೆ ಬಂದುದು ನಿನ್ನ ದುಷ್ಕೃತದಿಂದ ಎಂಬುದನ್ನು ಒಪ್ಪಿಕೊಳ್ಳದೆ, ಇದೆಲ್ಲವೂ ನನ್ನ ಹುಚ್ಚೆಂದು ಭಾವಿಸಿ ಸಮಾಧಾನಮಾಡಿಕೊಳ್ಳಬೇಡ. ಬೇಕಾದರೆ ನನ್ನ ನಾಡಿಯನ್ನು ನೋಡು; ಅದರ ಗತಿಯು ಹುಚ್ಚರ ನಾಡಿಯಂತೆ ವೇಗವಾಗಿರದೆ ಸಾಧಾರಣ ಸ್ಥಿತಿಯಲ್ಲಿದೆ. ತಾಯೇ, ನಿನ್ನ ಅಪರಾಧಗಳನ್ನು ಕುರಿತು ನೀನು ಪರಮೇಶ್ವರನಲ್ಲಿ ಕ್ಷಮಾಪಣೆಯನ್ನು ಬೇಡಿಕೊ. ಮುಂದೆ ಆ ನೀಚನ ಸತಿಯಾಗಿರದಿರು. ದಿವಂಗತನಾದ ನಮ್ಮ ತಂದೆಯಲ್ಲಿ ಭಕ್ತಿ ಗೌರವಗಳನ್ನು ಇಡುವುದಾದರೆ ನೀನು ಅಂದಿಗೆ ನನ್ನ ಜನನಿಯಾಗುವೆ. ನಾನು ನಿನ್ನನ್ನು ವಂದಿಸಿ ನಿನ್ನ ಆಶೀರ್ವಾದಗಳನ್ನು ಪ್ರಾರ್ಥಿಸಿಕೊಳ್ಳುವೆನು" ಎಂಬುದಾಗಿ ಮನ ಮರುಗಿಸುವ ರೀತಿಯಲ್ಲಿ ಕಣ್ಣೀರು ಕರೆಯುತ್ತ ಮತ್ತೆ ಮತ್ತೆ ಹೇಳಿದನು. ಆಗ ಅವಳು ತನ್ನ ಮಗನ ಅಭಿಲಾಷೆಯಂತೆ ನಡೆಯುವುದಾಗಿ ಮಾತುಕೊಟ್ಟಳು. ಹೀಗೆ ತಾಯಿ ಮಕ್ಕಳ ಅಂದಿನ ಮಾತುಕಥೆಗಳು ಮುಗಿದುವು.

ದುರದೃಷ್ಟವಶಾತ್ ದುಡುಕಿ ತಾನು ಯಾರನ್ನು ಕೊಂದನೆಂಬುದನ್ನು ತಿಳಿಯಲು ರಾಜಕುವರನಿಗೆ ಈಗ ವ್ಯವಧಾನ ಸಿಕ್ಕಿತು. ತನ್ನಿಂದ ಸಂಹೃತನಾದವನು ತನ್ನ ಪ್ರಾಣಾಧಿಕ ಪ್ರಿಯಳಾದ ಒಫೀಲಿಯೆಯ ತಂದೆಯೆಂಬುದಾಗಿ, ತೆರೆಯಿಂದ ಹೊರಗೆ ಆ ಶವವನ್ನು ಎಳೆಯುತ್ತಲೇ ತಿಳಿಯಿತು. ಈಗ ಅವನು ಸ್ವಲ್ಪ ಶಾಂತಚಿತ್ತನಾಗಿದ್ದ ಕಾರಣ, ತನ್ನ ಮುಂದಾಲೋಚನೆಯಿಲ್ಲದ ಈ ಕೆಲಸಕ್ಕಾಗಿ ಬಹಳ ದುಃಖಿತನಾದನು. ಆ ಮಂತ್ರಿಯ ಮರಣವು ರಾಜಕುವರನನ್ನು ಸ್ವದೇಶದಿಂದ ಹೊರಕ್ಕೆ ಕಳುಹಿಸಲು ರಾಜನಿಗೆ ಒಂದು ನೆಪವಾಯಿತು. ಅವನನ್ನು

ಕೊಂದುಬಿಡಬೇಕೆಂದೇ ಮನಸ್ಸು; ಆದರೆ ಪ್ರಜೆಗಳಿಗೂ ರಾಣಿಗೂ ಹೆದರಿ ಹಾಗೆ ಮಾಡಲಿಲ್ಲ. ರಾಣಿಯಲ್ಲಿ ಮತ್ತಾವ ದೋಷಗಳು ಎಷ್ಟೇ ಇದ್ದರೂ ಅವಳು ಮಗನಲ್ಲಿ ಪ್ರಾಣವನ್ನಿಟ್ಟುಕೊಂಡಿದ್ದಳು. ಆದುದರಿಂದ ಪೊಲೋನಿಯಸ್‌ನ ಮರಣ ಸಂಬಂಧವಾಗಿ ರಾಜಕುವರನನ್ನು ನ್ಯಾಯವಿಚಾರಣೆಗೆ ಗುರಿಮಾಡದಿರುವುದಕ್ಕಾಗಿಯೂ, ಅವನ ಸುರಕ್ಷೆಗಾಗಿಯೂ ರಾಜಕುವರನನ್ನು ಕಣ್ಮರೆ ಮಾಡುತ್ತೇನೆಂದು ತೋರಿಸಿಕೊಂಡು ಅವನನ್ನು ಒಂದು ಹಡಗಿನಲ್ಲಿ ಇಂಗ್ಲೆಂಡಿಗೆ ಕಳುಹಿಸಿದನು. ಆಗ ಇಂಗ್ಲೆಂಡ್ ದೇಶವು ಡೆನ್ಮಾರ್ಕಿಗೆ ಕಪ್ಪಕಾಣಿಕೆಗಳನ್ನು ಕೊಡುತ್ತ ಸಾಮಂತ ರಾಜ್ಯವಾಗಿತ್ತು. ಕುಬುದ್ಧಿಯು ಈ ಅರಸನು ರಾಜಕುವರನನ್ನು ಇಂಗ್ಲೆಂಡಿನಲ್ಲಿ ಹಡಗಿಳಿಯುತ್ತಲೇ, ಅಸಾಧಾರಣವಾದ ಕಾರಣವಿರುವುದರಿಂದ, ಸಂಹರಿಸುವಂತೆ ಇಂಗ್ಲೆಂಡ್ ಆಸ್ಥಾನಕ್ಕೆ ಕಾಗದ ಬರೆದು, ತನ್ನ ಆಸ್ಥಾನದ ಇಬ್ಬರು ಅಧಿಕಾರಿಗಳ ಸಹಿತ ಕಳುಹಿಸಿದ್ದನು. ರಾಜಕುವರನು ಏನೋ ದ್ರೋಹ ತಂತ್ರವಿರುವುದೆಂದು ಸಂದೇಹಗೊಂಡಿದ್ದನಾಗಿ, ರಾತ್ರಿಯಲ್ಲಿ ಆ ಕಾಗದವನ್ನು ತೆಗೆದು ನೋಡಿ, ತನ್ನ ಹೆಸರನ್ನು ಚೆನ್ನಾಗಿ ಅಳಿಸಿ, ಅಲ್ಲಿ ಆ ಅಧಿಕಾರಿಗಳ ಹೆಸರುಗಳನ್ನು ಬರೆದು ಮತ್ತೆ ಆ ಕಾಗದವನ್ನು ಯಥಾಸ್ಥಾನದಲ್ಲಿಟ್ಟನು. ಸ್ವಲ್ಪ ಹೊತ್ತಿಗೆ ಇವರ ಹಡಗನ್ನು ಕಡಲ್ಗಳ್ಳರು ಮುತ್ತಿದರು; ಯುದ್ಧಕ್ಕೆ ಉಪಕ್ರಮವಾಯಿತು. ರಾಜಕುವರನು ತನ್ನ ಪರಾಕ್ರಮವನ್ನು ತೋರಿಸಲುದ್ಯುಕ್ತನಾಗಿ ಸಾಯುಧನಾಗಿ, ಏಕಾಂಗಿಯಾಗಿ, ಶತ್ರುಗಳ ಹಡಗಿಗೆ ಹಾರಿದನು. ಆಗ ಇವನ ಹಡಗು ಹೇಡಿತನದಿಂದ, ಇವನನ್ನು ಇವನ ಅದೃಷ್ಟಕ್ಕೆ ಒಪ್ಪಿಸಿ ತಪ್ಪಿಸಿ ಕೊಂಡು ಓಡಿಹೋಯಿತು. ಈ ಅಧಿಕಾರಿಗಳು ಇಂಗ್ಲೆಂಡ್ ಆಸ್ಥಾನವನ್ನು ತಲಪಿದ ಕೂಡಲೆ ಅವರ ಅರ್ಹತೆಗೆ ಅನುಗುಣವಾದ ಶಾಸ್ತಿಯನ್ನು ಹೊಂದುವಂತೆ ರಾಜಕುವರನು ತಿದ್ದಿದ್ದ ಕಾಗದವನ್ನು ತಲುಪಿಸಿ, ತಕ್ಕ ಫಲವನ್ನು ಹೊಂದಿದರು.

ಆ ಕಡಲ್ಗಳ್ಳರು ಗುಣಶಾಲಿಗಳು. ಅವರು ತಮ್ಮ ಸೆರೆಯಾಳು ಯಾರೆಂಬುದನ್ನು ಅರಿತ ಮೇಲೆ, ತಾವು ಅವನಿಗೆ ತೋರಿಸಬಹುದಾದ

ಯಾವ ಸನ್ಮಾನಕ್ಕಾಗಲಿ, ಮಾಡಬಹುದಾದ ಯಾವ ಉಪಕಾರಕ್ಕಾಗಲಿ, ರಾಜಕುವರನು ಆಸ್ಥಾನದಲ್ಲಿ ತಮಗೆ ಪ್ರತಿಫಲವನ್ನುಂಟುಮಾಡಬಹುದೆಂಬ ಪ್ರತ್ಯಾಶೆಯಿಂದ, ಡೇನ್ಮಾರ್ಕಿಗೆ ಸಮೀಪವಾದ ಒಂದು ತೀರಪಟ್ಟಣದಲ್ಲಿ ಇಳಿಸಿದರು. ಆ ಸ್ಥಳದಿಂದ ರಾಜಕುವರನು ತಾನು ಸ್ವದೇಶಕ್ಕೆ ಹಿಂದಿರುಗುವಂತೆ ನಡೆದ ಘಟನೆಗಳನ್ನು ವಿವರಿಸಿ, ಮರುದಿನ ಅರಸನ ದರ್ಶನಮಾಡಿಕೊಳ್ಳುವೆನೆಂದು ಕಾಗದ ಬರೆದು ಕಳುಹಿಸಿದನು. ಊರನ್ನು ಸೇರುತ್ತಿದ್ದ ಹಾಗೇ, ಅವನಿಗೆ ದುಃಖ ಜನಕವಾದ ನೋಟವೇ ಮೊದಲನೆಯದಾಗಿ ಗೋಚರವಾಯಿತು.

ಯುವತಿಯಾಗಿಯೂ, ರೂಪವತಿಯಾಗಿಯೂ ಹಿಂದೆ ಇವನಿಗೆ ಪ್ರೀತಿಸರ್ವಸ್ವಳಾಗಿಯೂ, ಇದ್ದ ಓಫೀಲಿಯೆಯ ಪ್ರೇತಸಂಸ್ಕಾರ ಕರ್ಮಗಳು ಆಗ ನಡೆಯುತ್ತಿದ್ದುವು. ತನ್ನ ಮುಪ್ಪಿನ ತಂದೆಯ ಮರಣವೇ ಆಕೆಯ ಮರಣಕ್ಕೆ ಕಾರಣವಾಯಿತು. ತನ್ನ ತಂದೆಯು ತನ್ನ ಮನೋವಲ್ಲಭನಿಂದ ದುರ್ಮರಣ ಪಡೆದ ವಿಚಾರವು ಮೃದು ಹೃದಯಳಾದ ಆ ತರುಣಿಗೆ ಅಸಾಧಾರಣವಾದ ಖೇದವನ್ನುಂಟು ಮಾಡಿತು. ಅವಳು ತಂದೆ ಸತ್ತ ಸ್ವಲ್ಪಕಾಲದಲ್ಲಿಯೇ ಬುದ್ಧಿ ಸ್ವಾಧೀನ ತಪ್ಪಿ ಆಸ್ಥಾನದ ಶ್ರೀಮಂತವನಿತೆಯರಿಗೆ ಹೂಗಳನ್ನು ಹಂಚುತ್ತ ಅವು ದಿವಂಗತನಾದ ತನ್ನ ತಂದೆಯ ಸಮಾಧಿಯ ಮೇಲೆ ಇಡುವುದಕ್ಕೆಂದು ಹೇಳುತ್ತ ತಿರುಗುವಳು. ಪ್ರಣಯಗೀತೆಗಳನ್ನೂ ಮರಣ ಗೀತೆಗಳನ್ನೂ ಹಾಡುವಳು. ಹಲವು ತಡವೆ ಏನೇನೋ ಅರ್ಥವಾಗದ ಮಾತುಗಳನ್ನಾಡುವಳು. ಅವುಗಳನ್ನು ನೋಡಿದರೆ, ತನ್ನ ವಿಚಾರವೇ ತನಗೆ ಸಂಪೂರ್ಣವಾಗಿ ಮರೆತುಹೋಗಿದ್ದಂತೆ ತೋರುತ್ತಿತ್ತು.

ಒಂದುದಿನ ಅವಳು ಹೂವುಪತ್ರೆಗಳನ್ನು ಹಾಕಿ ಒಂದು ಮಾಲೆಯನ್ನು ಕಟ್ಟಿಕೊಂಡು ಹೊಳೆಯ ಕಡೆಗೆ ಹೊರಟಳು. ಅವಳು ಹೊರಟಿದ್ದುದನ್ನು ಮನೆಯಲ್ಲಿ ಯಾರೂ ನೋಡಲಿಲ್ಲ: ಹೊಳೆಯ ಹತ್ತಿರ ಒಂದು ನಿರವಂಜಿ ಮರವಿತ್ತು. ಅದರ ಕೊಂಬೆಗಳು ನೀರಿನ ಮೇಲೆ ಬಾಗಿ ಅದರೊಳಗೆ ಪ್ರತಿಫಲಿಸುತ್ತಿದ್ದುವು. ಒಫೀಲಿಯೆಯು

ತನ್ನ ಮಾಲೆಯನ್ನು ಆ ಮರದ ಕೊಂಬೆಯೊಂದಕ್ಕೆ ನೇತುಹಾಕಬೇಕೆಂದು ಅದರ ಮೇಲೆ ಹತ್ತಿರಲು, ಅದು ಮುರಿದು ಅವಳೂ ಅವಳ ಮಾಲೆಯೂ ಇತರ ವಸ್ತುಗಳೂ ಎಲ್ಲಾ ನೀರಿನಲ್ಲಿ ಮುಗುಚಿಕೊಂಡುವು.

ಸ್ವಲ್ಪ ಹೊತ್ತು ಅವಳ ಉಡಿಗೆಯು ಅವಳನ್ನು ನೀರಿನಮೇಲೆ ತೇಲಿಸುತ್ತಿತ್ತು. ಆಗ ಅವಳು ತನ್ನ ದುಸ್ಥಿತಿಯನ್ನು ಅರಿಯದೆ, ನೀರಿನಲ್ಲಿಯೇ ಹುಟ್ಟಿಬೆಳೆದ ಜಲದೇವತೆಯಂತೆ, ಬಾಯಿಗೆ ಬಂದ ಹಳೆಯ ಹಾಡುಗಳನ್ನು ಹರುಕು ಮುರುಕಾಗಿ ಹಾಡುತ್ತಿದ್ದಳು. ಆದರೆ ಸ್ವಲ್ಪ ಹೊತ್ತಿನ ಮೇಲೆ ಉಟ್ಟಿದ್ದ ಉಡಿಗೆಯು ನೆನೆಯಲು, ಹಾಡುತ್ತ ಹಾಡುತ್ತಲೇ ನೀರಿನಲ್ಲಿ ಮುಳುಗಿಹೋದಳು.

ಯುವರಾಜನು ಹಿಂದಿರುಗಿ ಬಂದಾಗ ನಡೆಯುತ್ತಿದ್ದುದೇ ಈ ಕನ್ಯೆಯ ಸಮಾಧಿಕಾರ್ಯ. ಪ್ರೇತಕರ್ಮಗಳನ್ನು ಕನ್ಯೆಯ ಅಣ್ಣನು ಮಾಡುತ್ತಿದ್ದನು. ಅಲ್ಲಿಗೆ ರಾಜನೂ ರಾಣಿಯೂ ಸಪರಿವಾರರಾಗಿ ಬಂದಿದ್ದರು. ಇದೇನೆಂಬುದೇ ಯುವರಾಜನಿಗೆ ಮೊದಲು ತಿಳಿಯದು. ತಿಳಿದುಕೊಳ್ಳಬೇಕೆಂಬ ಕುತೂಹಲದಿಂದ ಪ್ರಶ್ನೆಮಾಡಿದರೆ, ನಡೆಯುತ್ತಿರುವ ಕೆಲಸಕ್ಕೆ ಅಡಚಣೆಯಾಗುವುದೆಂಬ ಯೋಚನೆಯಿಂದ ವಿಚಾರಮಾಡಲು ಆತುರಗೊಳ್ಳದೆ ಹೊರಚಾಗಿ ನಿಂತಿದ್ದನು. ಪದ್ಧತಿಯಂತೆ ರಾಣಿಯು ಆ ಸಮಾಧಿಯ ಮೇಲೆ ಹೂವೆರಚುತ್ತ, "ಅಯ್ಯೋ! ನಮ್ಮ ಹ್ಯಾಂಲೆಟ್‌ಗೆ ನಿನ್ನನ್ನು ಮಡದಿಯಾಗಿ ಮಾಡಿಕೊಂಡು, ನಿನ್ನ ಶಯ್ಯೆಯನ್ನು ಹೂಮಾಲೆಗಳಿಂದ ಅಲಂಕರಿಸಬೇಕೆಂದಿದ್ದೆನಲ್ಲಾ! ಅದು ಹೋಗಿ ನಿನ್ನ ಸಮಾಧಿಯ ಮೇಲೆ ಹೂವೆರಚುವಂತಾಯಿತೆ!" ಎಂದು ಸಂಕಟಪಟ್ಟಳು. ಆ ಕನ್ಯೆಯ ಸಹೋದರನಾದ ಲಯರ್ಟೀಸನು ದುಃಖಾತಿರೇಕದಿಂದ ಆ ಸಮಾಧಿಯೊಳಕ್ಕೆ ಧುಮ್ಮಿಕ್ಕಿ "ಎಲೈ ಸೇವಕರಿರಾ, ನಾನು ನನ್ನ ಸಹೋದರಿಯ ಜತೆಯಲ್ಲಿ ಸಮಾಧಿಯನ್ನು ಸೇರುವೆನು. ನನ್ನ ಮೇಲೆ ಮಣ್ಣನ್ನು ಮುಚ್ಚಿ ಪರ್ವತಮಾಡಿಬಿಡಿ!" ಎಂದು ಕೂಗಿದನು.

ರಾಜಕುವರನಿಗೆ ಈ ಕನ್ಯೆಯಲ್ಲಿದ್ದ ಪ್ರೀತಿಪ್ರಣಯಗಳು ಮತ್ತೆ ಉದ್ಬುದ್ಧವಾದುವು. ಕೇವಲ ಸಹೋದರಮಾತ್ರನಾದವನು ಈ ಮಟ್ಟಿಗೆ

ದುಃಖಕ್ಕೊಳಗಾಗಿ ತಾನು ಸುಮ್ಮನೆ ನಿಂತಿರುವುದು ಅವನಿಗೆ ಸರಿಯಾಗಿ ತೋರಲಿಲ್ಲ. ತನಗೆ ಆಕೆಯಲ್ಲಿರುವ ಪ್ರೀತಿಗೆ ಸಮಾನವಾದಷ್ಟು ಪ್ರೀತಿಯು ಇನ್ನು ಯಾರಿಗೂ ಇರಲಾಗದೆಂದೂ, ನಲವತ್ತು ಸಹಸ್ರ ಸಹೋದರರ ಪ್ರೀತಿಯನ್ನೆಲ್ಲಾ ಒಟ್ಟುಗೂಡಿಸಿದರೂ, ತನ್ನ ಪ್ರೀತಿಯು ಅದಕ್ಕೂ ಮಿಗಿಲಾಗುವುದೆಂದೂ, ಹೇಳಿ ಕೊಳ್ಳುತ್ತ, ಮೊದಲೇ ಹುಚ್ಚನಂತೆ ಕಾಣುತ್ತಿದ್ದ ಇವನು ಮತ್ತಷ್ಟು ಹುಚ್ಚನಾದನೋ ಎನ್ನುವಂತೆ, ಆ ಸಮಾಧಿಯೊಳಕ್ಕೆ ಧುಮ್ಮಿಕ್ಕಿದನು. ಹೀಗೆ ಧುಮ್ಮಿಕ್ಕಿದವನು ಯಾರೆಂಬುದನ್ನು ಲಯರ್ಟೀಸನು ತಿಳಿದ ಒಡನೆಯೇ, ತನ್ನ ತಂದೆಯ ಮತ್ತು ಸಹೋದರಿಯ ಅಕಾಲಮರಣಕ್ಕೆ ಕಾರಣನಾದ ಇವನನ್ನು ಶತ್ರುವೆಂದು ಭಾವಿಸುತ್ತ, ಅವನ ಕುತ್ತಿಗೆಯನ್ನು ಬಲವಾಗಿ ಹಿಡಿದುಕೊಂಡನು. ಅದೃಷ್ಟವಶಾತ್ ಸಮೀಪದಲ್ಲಿದ್ದ ಆಳುಗಳು ಇವರನ್ನು ಜಾಗ್ರತೆಯಾಗಿ ಬಿಡಿಸಿದರು. ಅನಂತರ ಸಮಾಧಿಕಾರ್ಯಗಳೆಲ್ಲಾ ನೆರವೇರಿದವು. ಲಯರ್ಟೀಸನ ದ್ವಂದ್ವಯುದ್ಧಕ್ಕೋ ಎನ್ನುವಂತೆ ತಾನು ಸಮಾಧಿಯೊಳಕ್ಕೆ ಧುಮ್ಮಿಕ್ಕಿದುದು ತಿಳಿಗೇಡಿತನವಾಯಿತೆಂದು ರಾಜಕುವರನು ಪಶ್ಚಾತ್ತಾಪಪಟ್ಟನು. ಒಫೀಲಿಯೆಯ ಮೇಲಣ ಅನುರಾಗವೇ ಇದಕ್ಕೆ ಕಾರಣವೆಂದು ಗೊತ್ತಾದಮೇಲೆ ಈ ಯುವಕರಿರ್ವರೂ ಪರಸ್ಪರ ಅಪರಾಧಗಳನ್ನು ಮರೆತು ಕೆಲವುಕಾಲ ಹಿತವಾಗಿದ್ದರು.

ಆದರೂ ಲಯರ್ಟೀಸನಿಗೆ ತಂದೆಯ ಮತ್ತು ಸಹೋದರಿಯ ಮರಣಕ್ಕಾಗಿ ದುಃಖವೂ, ರಾಜಕುವರನ ಮೇಲೆ ಕೋಪವೂ ಇದ್ದೇ ಇತ್ತು. ಕ್ಲಾಡಿಯಸ್ಸನು ಅವನ ಕೋಪವನ್ನೂ ದುಃಖವನ್ನೂ ರಾಜಕುವರನ ನಾಶಕ್ಕಾಗಿ ಉಪಯೋಗಿಸಿಕೊಳ್ಳಲು ಸಂಚುಮಾಡಿದನು. ಲಯರ್ಟೀಸನು ಹಿಂದಿನ ದುಃಖವನ್ನೂ ಕೋಪವನ್ನೂ ಮರೆತು ಸ್ನೇಹವಾಗಿರುವಂತೆ ಕಾಣಿಸಿಕೊಳ್ಳುತ್ತ, ಕತ್ತಿಯ ಕಾಳಗದಲ್ಲಿ ಉಭಯರೂ ತಮ್ಮ ತಮ್ಮ ಯುಕ್ತಿಚಮತ್ಕಾರಗಳನ್ನು ತೋರಿಸಲು ವಿನೋದವಾದ ದ್ವಂದ್ವಯುದ್ಧ ಮಾಡುವುದಕ್ಕೆ ಬರುವಂತೆ ರಾಜಕುವರನನ್ನು ಕೇಳಿಕೊಂಡನು. ಈ ದ್ವಂದ್ವಯುದ್ಧಕ್ಕೆ ಒಂದು

ದಿನವು ಗೊತ್ತಾಯಿತು. ಅದನ್ನು ನೋಡಲು ಅರಸನೂ ಅರಸಿತಿಯೂ ಪರಿವಾರವೂ ಸೇರಿದರು. ಅರಸನ ಅಪ್ಪಣೆಯಂತೆ ಲಯರ್ಟೀಸನು ಕತ್ತಿಯಕೊನೆಗೆ ತೀಕ್ಷ್ಣವಾದ ವಿಷವನ್ನು ಸವರಿದ್ದನು. ಕತ್ತಿಯ ಸಾಧನೆಯಲ್ಲಿಯೂ ದ್ವಂದ್ವಯುದ್ಧದಲ್ಲಿಯೂ ಈ ಯುವಕರಿಬ್ಬರೂ ಸಮಭಟರೆಂದು ಪ್ರಖ್ಯಾತರಾಗಿದ್ದರು. ಆದುದರಿಂದ ಪ್ರೇಕ್ಷಕರು ಈ ಯುವಕರಲ್ಲಿ ಒಬ್ಬೊಬ್ಬನ ಗೆಲುವಿನ ವಿಚಾರಕ್ಕೂ ಅಮೂಲ್ಯವಾದ ಪಂದ್ಯವನ್ನು ಒಡ್ಡುತ್ತಾ ಬಂದರು. ಇಂತಹ ದ್ವಂದ್ವಯುದ್ಧಗಳಲ್ಲಿ ಹರಿತವಲ್ಲದ ಮೊನಚಿಲ್ಲದ ಕತ್ತಿಗಳನ್ನು ಉಪಯೋಗಿಸುವುದು ನಿಯಮ. ಲಯರ್ಟೀಸನ ಘಾತುಕತನದ ವಿಚಾರದಲ್ಲಿಯಾಗಲಿ, ಅವನ ಆಯುಧದ ವಿಚಾರದಲ್ಲಿಯಾಗಲಿ, ರಾಜಕುವರನಿಗೆ ಸಂದೇಹವಿರಲಿಲ್ಲವಾಗಿ, ಯಾವುದನ್ನೂ ಪರೀಕ್ಷಿಸದೆ ತಾನು ಹತ್ತಿರದಲ್ಲಿದ್ದ ಒಂದು ಚೂಪಲ್ಲದ ಕತ್ತಿಯನ್ನು ತೆಗೆದುಕೊಂಡನು.

ಕಾಳಗಕ್ಕೆ ಮೊದಲಾಯಿತು. ಲಯರ್ಟೀಸನು ಮೊದಮೊದಲು ಯುವರಾಜನೇ ಗೆಲ್ಲುವಂತಹ ಸಂಧಿಯನ್ನು ಉಂಟುಮಾಡುತ್ತ ಬಂದನು. ಮೋಸಗಾರನಾದ ಆ ದುರುಳರಸನು ಆ ಸನ್ನಿವೇಶವನ್ನು ಅಪಾರವಾಗಿ ಹೊಗಳುತ್ತ, ಅಮೂಲ್ಯವಾದ ಪಂದ್ಯವಿಡುತ್ತ, ಯುವರಾಜನಿಗೆ ಉತ್ತೇಜನ ಕೊಡುವವನಂತೆ ಕೋಲಾಹಲದಿಂದ "ಯುವರಾಜನಿಗೆ ವಿಜಯವಾಗಲಿ!" ಎಂದು ಕೂಗುತ್ತಿದ್ದನು. ಸ್ವಲ್ಪ ಹೊತ್ತಿನ ಮೇಲೆ ಲಯರ್ಟೀಸನು ಉದ್ವೇಗಗೊಂಡು ವಿಷಯುಕ್ತವಾದ ತನ್ನ ಆಯುಧದಿಂದ ಯುವರಾಜನನ್ನು ತಿವಿದನು. ಹ್ಯಾಂಲೆಟ್‌ನೂ ಉದ್ವೇಗಗೊಂಡನು. ಆಮೇಲಿನ ಹೋರಾಟದಲ್ಲಿ ಅವರ ಕತ್ತಿಗಳು ಬದಲಾಗಿ ಹ್ಯಾಂಲೆಟ್‌ನ ಕೈಗೆ ವಿಷಹತ್ತಿಸಿದ ಕತ್ತಿಯು ಸಿಕ್ಕಿತು. ಅವನಿಗೆ ಆ ಕತ್ತಿಯ ಸ್ವರೂಪವು ತಿಳಿಯದು. ಆದ್ದರಿಂದ ಮತ್ತೆ ದ್ವಂದ್ವಯುದ್ಧಕ್ಕೆ ಉಪಕ್ರಮವಾದಾಗ ಯುವರಾಜನು ತನ್ನ ಪ್ರತಿಭಟನನ್ನು ಅದರಿಂದ ತಿವಿದನು. ಹೀಗೆ ಲಯರ್ಟೀಸನು ತನ್ನ ವಿಶ್ವಾಸ ಘಾತುಕತನಕ್ಕಾಗಿ ತನ್ನ ಸ್ವಂತ ಆಯುಧದಿಂದಲೇ ಪ್ರಾಯಶ್ಚಿತ್ತವನ್ನು ಹೊಂದಿದನು.

ಒಂದುವೇಳೆ ಈ ದ್ವಂದ್ವಯುದ್ಧದಲ್ಲಿ ಯುವರಾಜನು ಬದುಕಿ ಬಂದರೆ, ವಿಜಯಶಾಲಿಯಾದ ಅವನಿಗೆ ಅಭಿನಂದನ ಪೂರ್ವಕವಾಗಿ ಕೊಡಲು ಒಂದು ಪಾನೀಯವನ್ನು ಅರಸನು ಸಿದ್ಧಪಡಿಸಿ ಅದಕ್ಕೆ ವಿಷಹಾಕಿ ಇಟ್ಟಿದ್ದನು. ಲಯರ್ಟೀಸನ ಕೈಯಿಂದ ಸಾಯದಿದ್ದರೆ ಇದನ್ನು ಕುಡಿದಾದರೂ ಸತ್ತುಹೋಗಲಿ ಎಂಬುದು ಅವನ ಆಶಯವಾಗಿತ್ತು. ಆದರೆ ಈ ವಿಚಾರವನ್ನು ಅರಿಯದ ಅರಸಿಯು ಅದನ್ನು ಕುಡಿದು, ಕೂಡಲೆ, ತನಗೆ ವಿಷಪ್ರಯೋಗವಾಗಿದೆಯೆಂದು ಪ್ರಲಾಪಿಸುತ್ತ ಮೃತಳಾದಳು.

ಯುವರಾಜನು ಏನೋ ಘಾತುಕ ಕೃತ್ಯವು ನಡೆಯುತ್ತಿರುವುದಾಗಿ ಸಂಶಯಗೊಂಡು ಬಾಗಿಲುಗಳನ್ನು ಮುಚ್ಚುವಂತೆ ಅಪ್ಪಣೆ ಮಾಡಿ ವಿದ್ಯಮಾನಗಳನ್ನು ಅರಿಯಲು ಪ್ರಯತ್ನಿಸತೊಡಗಿದನು. ಲಯರ್ಟೀಸನು "ಯುವರಾಜ! ಈಗ ವಿಚಾರಮಾಡತೊಡಗಬೇಡ. ನಾನೇ ಘಾತುಕನು. ನಿನ್ನ ಕೈಯಿಂದಾದ, ನನ್ನ ಸ್ವಂತಶಸ್ತ್ರ ಘಾತದಿಂದ ನಾನು ಮರಣೋನ್ಮುಖನಾಗಿದ್ದೇನೆ. ನನ್ನ ಪಾಪ ಕರ್ಮಫಲವನ್ನು ನಾನು ಅನುಭವಿಸುವೆನು. ನಾನು ನಿನ್ನನ್ನು ತಿವಿದ ಆಯುಧದ ಕೊನೆಯು ವಿಷಲಿಪ್ತವಾಗಿತ್ತು. ನೀನೂ ಇನ್ನು ಅರ್ಧ ಗಳಿಗೆಯ ಕಾಲವೂ ಜೀವಿಸಿರಲಾರೆ. ಯಾವ ಮಣಿಮಂತ್ರೌಷಧಗಳೂ ಈ ವಿಷಕ್ಕೆ ಪ್ರತಿಕ್ರಿಯೆಯಾದವುಗಳಲ್ಲ. ನನ್ನ ಅಪರಾಧವನ್ನು ಮನ್ನಿಸು. ಅಯ್ಯೋ! ನೀಚರಾಜನೇ! ಏನು ಅನರ್ಥವನ್ನು ತಂದಿಟ್ಟೆ!" ಎನ್ನುತ್ತ ಮೃತನಾದನು.

ಯುವರಾಜನ ಅವಸಾನಕಾಲವು ಕ್ಷಣಕ್ಷಣಕ್ಕೆ ಸಮೀಪವಾಗುತ್ತಿತ್ತು. ಆ ಕತ್ತಿಯ ಮೇಲೆ ಇನ್ನೂ ಸ್ವಲ್ಪ ವಿಷವಿರುವುದನ್ನು ಅವನು ನೋಡಿದನು. ತತ್ಕ್ಷಣವೇ ಮೋಸಗಾರನಾದ ತನ್ನ ಚಿಕ್ಕಪ್ಪನ ಕಡೆಗೆ ತಿರುಗಿ, ಆ ಆಯುಧದ ಅಗ್ರದಿಂದ ಅವನ ಹೃದಯವನ್ನಿರಿದನು. ಅಂತೂ ಹೀಗೆ ತನ್ನ ತಂದೆಯನ್ನು ಅಕಾರಣವಾಗಿ ಅತಿನೀಚತನದಿಂದ ಕೊಂದ ಈ ಘಾತುಕನನ್ನು ಸಂಹರಿಸಿ, ತನ್ನ ತಂದೆಯ ಭೂತಾತ್ಮನಿಗೆ ಕೊಟ್ಟಿದ್ದ ವಾಗ್ದಾನವನ್ನು ನೆರವೇರಿಸಿದನು.

ಆಮೇಲೆ, ಈ ಪರಮ ದಾರುಣವಾದ ಪರ್ಯವಸಾನವನ್ನೆಲ್ಲಾ ನೋಡುತ್ತ ಸಮೀಪದಲ್ಲಿ ನಿಂತಿದ್ದ ಹೊರೇಷಿಯೋವಿನ ಕಡೆಗೆ ತಿರುಗಿ ಕೊಂಡನು. ಈ ವೇಳೆಗೆ ತನಗೆ ಪ್ರಾಣವು ಕಂಠಗತವಾಗುತ್ತಿತ್ತು.

ಹೊರೇಷಿಯೋವು ಆತ್ಮಹತ್ಯ ಮಾಡಿಕೊಂಡು ತನ್ನ ಸ್ನೇಹಿತ ನನ್ನು ಹಿಂಬಾಲಿಸುವುದಾಗಿ ಸೂಚಿಸಲು, ಯುವರಾಜನು "ಅಯ್ಯಾ ಮಿತ್ರನೇ, ಪ್ರಪಂಚಕ್ಕೆ ಈ ಕಥೆಯನ್ನು ಯಥಾರ್ಥವಾಗಿ ತಿಳಿಸಲು ನೀನು ಬದುಕಿರಬೇಕು. ದಯಮಾಡಿ ಹಾಗೆ ಮಾಡುವುದಾಗಿ ನನಗೆ ಮಾತುಕೊಡು" ಎಂದು ಪ್ರಾರ್ಥಿಸಿಕೊಂಡನು. ಆಗ ಹೊರೇಷಿ ಯೋ ತನ್ನ ಸ್ನೇಹಿತನ ಅವಸಾನ ಕೋರಿಕೆಯಂತೆ ಆ ಸಮಸ್ತ ವಿದ್ಯಮಾನವನ್ನೂ ಸ್ವಲ್ಪವೂ ಲೋಪವಿಲ್ಲದೆ ಪ್ರಪಂಚಕ್ಕೆ ಹೇಳುವು ದಾಗಿ ಮಾತುಕೊಟ್ಟನು.

ಈ ವಾಗ್ದಾನದಿಂದ ತೃಪ್ತನಾದ ಯುವರಾಜನ ಆತ್ಮವು ಶಾಂತ ವಾಗಿ ಪರಲೋಕಕ್ಕೆ ತೆರಳಿತು. ಹೊರೇಷಿಯೋವೂ, ಸಮೀಪ ದಲ್ಲಿದ್ದ ಇತರರೂ ದುಃಖಾತಿಶಯದಿಂದ ಕಣ್ಣೀರು ಕರೆಯುತ್ತ, ಗದ್ಗದ ಕಂಠರಾಗಿ "ಪರಮಾತ್ಮನೇ, ಗುಣಾಢ್ಯನಾದ ರಾಜಕುವರನ ಆತ್ಮಕ್ಕೆ ಶಾಂತಿ ಸಮೃದ್ಧಿಗಳನ್ನು ಕೃಪೆಮಾಡು." ಎಂದು ಪ್ರಾರ್ಥಿ ಸಿದರು. ಈ ರಾಜಕುವರನು ಸಕಲರ ಪ್ರೀತಿ ಸನ್ಮಾನಗಳಿಗೂ ಪಾತ್ರವಾಗುವ ಘನತೆಯುಳ್ಳವನಾಗಿದ್ದನು. ಇವನ ಸುಗುಣಸಂಪ ತ್ತಿಯೂ, ರಾಜಾರ್ಹವಾದ ಯೋಗ್ಯತೆಯೂ ಇವನನ್ನು ಪ್ರಜಾನು ರಾಗಪಾತ್ರನನ್ನಾಗಿ ಮಾಡಿದ್ದುವು. ಇವನು ಜೀವಂತನಾಗಿದ್ದಿದ್ದರೆ ಸಂದೇಹವಿಲ್ಲದೆ ಡೆನ್‌ಮಾರ್ಕಿಗೆ ಸರ್ವತೋಮುಖವಾದ ಪರಿಪೂರ್ಣತೆ ಯುಳ್ಳ ರಾಜಾಧಿರಾಜನೇ ಆಗುತ್ತಿದ್ದನು.

ಫಾಹಿಯಾನನ ಕ್ಷೇತ್ರಯಾತ್ರೆ

ಪ್ರವೇಶ

ಫಾಹಿಯಾನನು ಷಾಂಸಿ ಪ್ರಾಂತದ ಪಿಂಗ್-ಯಾಂಗ್ ಡಿಸ್ಟ್ರಿಕ್ಟಿನ ವು-ಯಾಂಗಿನ ನಿವಾಸಿಯು. ಇವನ ಮೊದಲ ಹೆಸರು ಕುಂಗ್ ಎಂದು. ಇವನ ಮೂವರು ಅಣ್ಣಂದಿರೂ ಹಲ್ಲುಹುಟ್ಟುವ ಮೊದಲೆ ತೀರಿಹೋಗಲು, ಇವನ ತಂದೆಯು ಇವನಿಗೆ ಶ್ರಮಣಪದವಿಯನ್ನು ಕೊಡಿಸಿ ಮನೆಯಲ್ಲಿಟ್ಟು ಕೊಂಡನು. ಫಾಹಿಯಾನನು ಸವಣನಾದಾಗ ಮೂರು ವರ್ಷ ವಯಸ್ಸು. ಅವನಿಗೆ ಸವಣನಾದಮೇಲೆ ಶಾಕ್ಯಪುತ್ರ ಫಾಹಿಯಾನ್ ಎಂಬ ಹೊಸ ನಾಮಕರಣವಾಯಿತು. ಫಾಹಿಯಾನನೆಂದರೆ ಧರ್ಮದ ದಿವ್ಯಜ್ಯೋತಿ ಯೆಂದರ್ಥ.

ಇಷ್ಟರಲ್ಲೆ ಫಾಹಿಯಾನನು ತೀವ್ರರೋಗಪೀಡಿತನಾಗಲು, ಅವನ ತಂದೆಯು ಅವನನ್ನು ಬಳಿಯ ಸಂಘಾರಾಮಕ್ಕೆ ಕಳುಹಿಸಿದನು. ನೀರೋಗಿ ಯಾದರೂ, ಫಾಹಿಯಾನನು ಮನೆಗೆ ಹಿಂದಿರುಗಲಿಲ್ಲ. ಹತ್ತುವರ್ಷ ವಾದಾಗ ಇವನ ತಂದೆಯು ಸಾಯಲು, ಇವನ ಚಿಕ್ಕಪ್ಪನೊಬ್ಬನು "ನಿನ್ನ ತಾಯಿಯು ಅನಾಥಳಾಗಿರುವಳು. ನೀನು ಭಿಕ್ಷುವೃತ್ತಿಯನ್ನು ಬಿಟ್ಟು ಬಂದರೆ ಒಳ್ಳೆಯದು'' ಎಂದುದಕ್ಕೆ ಫಾಹಿಯಾನನು "ತಂದೆಯ ಬಲ ವಂತಕ್ಕಾಗಿ ನಾನು ಭಿಕ್ಷುವಾಗಲಿಲ್ಲ. ಜೀವನದ ಅಸಾರತೆಯಿಂದ ದೂರ ನಾಗಿರಬೇಕೆಂದು ಭಿಕ್ಷುವಾದೆ'' ಎಂದುಬಿಟ್ಟನು. ಅವನ ತಾಯಿಯು ಮಡಿದಾಗ ಅವನ ಪ್ರೀತಿಯ ಆಳವು ಗೊತ್ತಾಯಿತು. ಅವಳ ಸಮಾಧಿ ಯಾದಮೇಲೆ ಮರಳಿ ಸಂಘಾರಾಮಕ್ಕೆ ಬಂದ.

ಅಭ್ಯಾಸಕಾಲವು ಮುಗಿದು ಪೂರ್ಣಧರ್ಮಾನುಯಾಯಿಯಾದಾಗ, ಇವನ ರೀತಿನೀತಿಗಳಿಗೆ ಎಲ್ಲರೂ ಮೆಚ್ಚುತ್ತಿದ್ದರು. ಹೀಗಿರಲು ಫಾಹಿ

ಯಾನನು ವಿನಯಪಿಟಕದ ಅಸಂಪೂರ್ಣ ಸ್ಥಿತಿಯಿಂದ ಸಮಾಧಾನ ಹೊಂದದೆ, ಸಂಪೂರ್ಣ ವಿನಯವನ್ನು ಅರಸುತ್ತ ಹಿಂದೂದೇಶಕ್ಕೆ ಹೊರಟನು. ಇವನು ಛಾಂಗ್-ಅನ್ ಬಿಟ್ಟುದು ಕ್ರಿ. ಶ. ೪೦೦-೪೦೧ರಲ್ಲಿ. ಇವನ ಜತೆಯಲ್ಲಿ ಹ್ವುಯಿ-ಕಿಂಗ್, ಟಾಒ-ಛಿಂಗ್, ಹ್ವುಯಿ-ಯಿಂಗ್ ಮತ್ತು ಹ್ವುಯಿ-ವಿ ಎಂಬ ಭಿಕ್ಷುಗಳೂ ಹೊರಟರು.

ಹೀಗೆ ಹೊರಟು ಲುಂಗ್ ಡಿಸ್ಟ್ರಿಕ್ಟನ್ನು ದಾಟಿ, ಕ್ಯೆರ್ಯೆ-ಕ್ವಿ ರಾಜನ ನಾಡಿನಲ್ಲಿ ಮಳೆಗಾಲವನ್ನು ಕಳೆದು, ಮುಂದೆ ನಯು-ಟಾನ್ ರಾಜನ ದೇಶದ ಮೂಲಕ ಯಾಂಗ್-ಉ ಪರ್ವತಗಳನ್ನು ದಾಟಿ, ಛಾಂಗ್-ಯೆ ಎಂಬ ಸೈನ್ಯಸಜ್ಜಿತ ಠಾಣ್ಯವನ್ನು ಸೇರಿದರು. ಆಗ ಛಾಂಗ್-ಯೆನಲ್ಲಿ ಗಲಾಟೆಯಿತ್ತು; ಹಾದಿಗಳು ಸುರಕ್ಷಿತವಾಗಿರಲಿಲ್ಲ. ಛಾಂಗ್-ಯೆ ದೇಶದ ದೊರೆಯು ಯಾತ್ರಿಕರಿಗೆ ದಾನಪತಿಯಾದನು.

ಅಲ್ಲಿ ಯಾತ್ರಿಕರು ಛಿ-ಯೆನ್, ಹ್ವುಯಿ-ಕಿನ್, ಸಾಂಗ್-ಷೌ, ಪಾಒ-ಯುನ್, ಸಾಂಗ್-ಕಿಂಗ್ ಮುಂತಾದವರನ್ನು ಸಂಧಿಸಿದರು. ಎಲ್ಲರೂ ಮಳೆಗಾಲವನ್ನು ಅಲ್ಲಿಯೇ ಕಳೆದರು.

ವರ್ಷಾಕಾಲ ಮುಗಿಯಲು ಮುಂದೆ ಸಾಗಿ ಟುನ್-ಹ್ವಾಂಗಿಗೆ ಬಂದರು. ಅಲ್ಲಿಯ ಕೋಟೆಯು ಪೂರ್ವಪಶ್ಚಿಮ ೮೦ ಲೈ (⅓ ಮೈಲು) ಮತ್ತು ದಕ್ಷಿಣೋತ್ತರ ೪೦ ಲೈ ಇತ್ತು. ತಿಂಗಳ ಮೇಲೆ ಕೆಲದಿವಸ ಅಲ್ಲಿ ತಂಗಿದ್ದು, ಫಾಹಿಯಾನನೂ ಅವನ ನಾಲ್ವರು ಸಂಗಡಿಗರೂ ಪಾಒ-ಯುನ್ ಮುಂತಾದವರನ್ನು ಬೀಳ್ಕೊಂಡು, ಮಾರ್ಗದರ್ಶಕನೊಬ್ಬನ ಕೂಡ ಹೊರಟರು. ಟುನ್-ಹ್ವಾಂಗ್ ದೇಶದ ಸುಬೇದಾರನಾದ ಲೈ-ಹೊ ಎಂಬುವನು ಪ್ರವಾಸಿಗಳು ಗೋಬಿ ಮರುಭೂಮಿಯನ್ನು ಹಾಯಲನುಕೂಲ ಮಾಡಿಕೊಟ್ಟನು. ಈ ಮರಳುಗಾಡಿನಲ್ಲಿ ಭೂತಗಳೂ ಬೆಂಗಾಳಿಯೂ ಬಹಳ; ಅಲ್ಲಿ ಸಿಕ್ಕಿದವರು ಯಾರೂ ಉಳಿಯುವಂತಿಲ್ಲ. ಮೇಲೆ ಹಕ್ಕಿಗಳ ಹಾರಾಟವಿಲ್ಲ; ಕೆಳಗೆ ಮೃಗಗಳ ಓಡಾಟವಿಲ್ಲ. ಆದರೆ ಕಣ್ಣಳತೆಯುದ್ದಕ್ಕೂ ಸತ್ತವರ ಎಲುಬುಗಳು ದಾರಿಗರಿಗೆ ದಾರಿದೋರಿ ಹರಿದಿವೆ.

ಷೇ-ಷೇ

ಹೀಗೆ ಹದಿನೇಳು ದಿನಗಳಲ್ಲಿ ೧೫೦೦ ಲೈ ನಡೆದು, ಯಾತ್ರಿಕರು ಷೇ-ಷೇ ದೇಶಕ್ಕೆ ಬಂದರು.

ಈ ನಾಡು ಬಂಜರು. ಕೊರಕಲು. ಸಾಮಾನ್ಯರ ಉಡುಪು ಚೈನೀಯರದಂತೆ ಒರಟು—ಬಟ್ಟೆಗೆ ಹಾಕುವ ಉಣ್ಣೆ ತುಬಟ ಮಾತ್ರ ಬೇರೆ. ಇಲ್ಲಿಯ ದೊರೆಯು ಬೌದ್ಧಧರ್ಮಾನುಯಾಯಿ. ಇಲ್ಲಿ ಹೀನಯಾನದ ೪೦೦೦ ಆಚಾರ್ಯರುಂಟು. ಇಲ್ಲಿಯ ಶ್ರಮಣರೂ ಗೃಹಸ್ಥರೂ ಹಿಂದೂದೇಶದ ಮತವನ್ನೇ ಅನುಸರಿಸಿದರೂ, ಕೆಲವರದು ಸೂಕ್ಷ್ಮ, ಕೆಲವರದು ಸ್ಥೂಲ. ಇಲ್ಲಿಂದ ಮುಂದೆ ಪಶ್ಚಿಮಕ್ಕೆ ಸಿಕ್ಕುವ ನಾಡುಗಳಲ್ಲಿನ ಮತಸ್ಥಿತಿಯೂ ಹೀಗೆಯೆ ಇದೆ; ಆದರೆ ಜನರ ಭಾಷೆ ಬದಲಾಗುತ್ತದೆ. ಅಂತೂ ಬೌದ್ಧರೆಲ್ಲರೂ ಬಳಸುವುದು ಹಿಂದೂದೇಶದ ಪುಸ್ತಕಗಳನ್ನೇ.

ವೂ—ಇ

ಷೇಷೇನಲ್ಲಿ ಒಂದು ತಿಂಗಳ ಸುಮಾರು ಇದ್ದು, ವಾಯುವ್ಯದಲ್ಲಿ ಹದಿನೈದು ದಿನ ನಡೆದು, ಯಾತ್ರಿಕರು ವೂ-ಇ ದೇಶಕ್ಕೆ ಬಂದರು. ವೂ-ಇ ಯ ಹೀನಯಾನದವರ ಸಂಖ್ಯೆ ೪೦೦೦. ಅವರ ಮತಸಂಬಂಧವಾದುದೆಲ್ಲ ನಿಯತವಾದುದು. ತ್ಸಿನ್ ದೇಶದ ಸವಣರಿಗೆ ಇವರ ಮತಕಟ್ಟಲೆಗಳು ಹೊಸದಾಗಿ ಕಾಣುತ್ತವೆ. ಫಾಹಿಯಾನನು ಫೂ-ಕುಂಗ್-ಸೂನ್ ಎಂಬವನ ಆಸರೆಯಲ್ಲಿ ಎರಡು ತಿಂಗಳ ಮೇಲೆ ಕೆಲದಿನ ನಿಂತನು. ಅಲ್ಲಿಂದ ಪಾಒ-ಯುನ್ ಮುಂತಾದವರೆಡೆಗೆ ಮರಳಿದನು. ಕೊನೆಗೆ ವೂ-ಇ ಯವರ ರೀತಿನಡತೆಗಳು ಸಮರ್ಪಕವಿರದೆ, ಅವರ ಅತಿಥಿಪುರಸ್ಕಾರವು ಅಷ್ಟಷ್ಟೆ ಆಗಿರಲು, ಛಿ-ಯೆನ್, ಹ್ವುಯಿ-ಕಿನ್, ಹ್ವುಯಿ-ವಿ, ಇವರು ಪ್ರಯಾಣದ ಆನುಕೂಲ್ಯಗಳನ್ನು ನೋಡಿಕೊಳ್ಳುವುದಕ್ಕೆಂದು ಕಾಒ-ಛಾಂಗಿಗೆ ಹೊರಟರು. ಫಾಹಿಯಾನನೂ ಇತರರೂ ಫೂ-ಕುಂಗ್-ಸೂನನ ಸನ್ಮಾನಗಳಿಗೆ ಕೃತಜ್ಞರಾಗಿ, ನೈಋತ್ಯಕ್ಕೆ ತಿರುಗಿದರು. ದಾರಿಯಲ್ಲಿ ಒಂದು ಮನೆಯಿರಲಿಲ್ಲ, ಜನವಿರಲಿಲ್ಲ. ಅಲ್ಲಿಯ ದಾರಿಗಳನ್ನೂ

ಅಲ್ಲಿಯ ಹೊಳೆಗಳನ್ನೂ ದಾಟಲು ಅವರು ಪಟ್ಟ ಕಷ್ಟಗಳನ್ನು ವರ್ಣಿಸಲು ಮಾತು ಸಾಲದು.

ಖೋಟಾನ್

ಹೀಗೆ ತಿಂಗಳ ಮೇಲೆ ಐದು ದಿವಸ ಕಷ್ಟಪಟ್ಟು, ಹಾಗೆ ಹೀಗೆ ಮಾಡಿ, ಖೋಟಾನಿಗೆ ಬಂದರು.

ಈ ನಾಡು ಸಂಪತ್ಸಮೃದ್ಧವಾಗಿ ಏಳಿಗೆವಡೆಯುತ್ತಿದೆ. ಇಲ್ಲಿಯ ಜನರೆಲ್ಲ ಹಣವಂತರು; ಒಬ್ಬರುಳಿಯದಂತೆ ಎಲ್ಲರೂ ಬೌದ್ಧಧರ್ಮಕ್ಕೆ ತಲೆಬಾಗುವವರು. ಒಬ್ಬರನ್ನೊಬ್ಬರು ಮತಸಂಬಂಧವಾದ ಗೀತದಿಂದ ಸಂತೋಷಪಡಿಸುತ್ತಾರೆ. ಇಲ್ಲಿ ಮಹಾಯಾನದವರು ಕೋಟ್ಯನು ಕೋಟಿ. ಇವರು ಒಟ್ಟಿಗೆ ಊಟಹೊಂದಿ, ಅಲ್ಲಿ ಇಲ್ಲಿ ಚೆದರಿರುತ್ತಾರೆ. ಇವರ ಮನೆಯ ಮುಂದೆ ಇರುವ ಸಣ್ಣ ಗೋಪುರವು ಏನಿಲ್ಲವೆಂದರೂ ೨೦ ಅಡಿ ಎತ್ತರವಿರುತ್ತದೆ. ಇಲ್ಲಿಯ ಆಚಾರ್ಯರ ಮನೆಗಳಲ್ಲಿ ಪರನಾಡಿನ ಆಚಾರ್ಯರ ಸೌಕರ್ಯಗಳಿಗೂ ಅನುಕೂಲಗಳುಂಟು.

ಈ ನಾಡೊಡೆಯನು ಫಾಹಿಯಾನನನ್ನೂ ಇತರರನ್ನೂ ಗೋಮತಿ ಎಂಬ ಸಂಘಾರಾಮದಲ್ಲಿ ತಂಗಿಸಿದನು. ಈ ಸಂಘಾರಾಮದಲ್ಲಿ ಮಹಾಯಾನದದರು ೩೦೦೦ ಇದ್ದರು. ಇವರೆಲ್ಲರೂ ಒಂದು ಘಂಟಾನಾದವಾದೊಡನೆ ಊಟಕ್ಕೆ ನೆರೆಯುತ್ತಿದ್ದರು. ಊಟದ ಹಜಾರವನ್ನು ಸದ್ದಿಲ್ಲದೆ ಗಂಭೀರವಾಗಿ ಹೊಕ್ಕು, ಕ್ಲೃಪ್ತ ಪಂಕ್ತಿಯಲ್ಲಿ ಕೂಡುವರು. ಎಲ್ಲರೂ ನೀರವರು; ಊಟದ ಪಾತ್ರೆಗಳ ಸದ್ದು ಕೂಡ ಇಲ್ಲ. ಬಡಿಸುವವರು ಹೆಚ್ಚುಹಾಕಿದರೆ, ಅವರು ಒಬ್ಬರಿಗೊಬ್ಬರು ಮಾತನಾಡಕೂಡದು; ಕೈಯಿಂದ ಸಂಜ್ಞೆಮಾಡಬಹುದು ಮಾತ್ರ.

ಹ್ವುಯಿ-ಕಿಂಗ್, ಟಾಒ-ಛಿಂಗ್ ಮತ್ತು ಹ್ವುಯಿ-ಟಾ ಇವರು ಕೈ-ಷಾ ನಾಡಿಗಾಗಿ ಮುಂದೆ ಸಾಗಿದರು. ಫಾಹಿಯಾನನೂ ಇತರರೂ ಉತ್ಸವವನ್ನು ನೋಡಲಾಶಿಸಿ ಮೂರು ದಿವಸದ ಮೇಲೆ ಕೆಲದಿನ ಅಲ್ಲಿ ನಿಂತರು.

4565
VIJAYA EVENING COLLEGE LIBRARY
BANGALORE-4.

ಈ ದೇಶದಲ್ಲಿ ಚಿಕ್ಕವುಗಳನ್ನು ಬಿಟ್ಟರೆ ಹದಿನಾಲ್ಕು ದೊಡ್ಡ ಸಂಘಾರಾಮುಗಳಿವೆ. ಉತ್ಸವಕಾಲದಲ್ಲಿ, ಮೊದಲ ದಿನ, ಪಟ್ಟಣದ ರಾಜಮಾರ್ಗಗಳನ್ನು ಗುಡಿಸಿ, ನೀರು ಚಿಮುಕಿಸಿ, ದಾರಿಗಳನ್ನಲಂಕರಿಸುತ್ತಾರೆ. ಊರ ಹೆಬ್ಬಾಗಿಲಿನಲ್ಲಿ ದೊಡ್ಡ ಹಂದರವೆತ್ತಿ, ಅದನ್ನೂ ವಿಧವಿಧವಾಗಿ ಅಲಂಕರಿಸುತ್ತಾರೆ. ಇಲ್ಲಿಯೇ ಅರಸನೂ ಅರಸಿಯೂ ಆಸ್ಥಾನದವರೂ ಕೂಡುವುದು.

ಗೋಮತೀ ಸಂಘಾರಾಮುದವರು, ಮಹಾಯಾನದವರೂ ಅರಸನಿಂದ ಹೆಚ್ಚು ಪುರಸ್ಕೃತರೂ ಆದುದರಿಂದ ಮೊದಲು ಉತ್ಸವಮಾಡುತ್ತಾರೆ. ಪಟ್ಟಣಕ್ಕೆ ಮೂರುನಾಲ್ಕು ಲೈ ದೂರದಲ್ಲಿ ನಾಲ್ಕು ಚಕ್ರದ ರಥವೊಂದನ್ನು ಮಾಡಿ, ಸಪ್ತರತ್ನಗಳಿಂದಲಂಕರಿಸುತ್ತಾರೆ. ರಥವು ಮುವ್ವತ್ತು ಅಡಿ ಎತ್ತರವಿದ್ದು, ಚಲಿಸುವ ಮಹಲಿನಂತಿರುತ್ತದೆ. ಅದಕ್ಕೆ ರೇಶಿಮೆಯ ಛತ್ರ ಬಾವುಟ ಪರದೆಗಳನ್ನು ಕಟ್ಟುತ್ತಾರೆ. ರಥದಲ್ಲಿನ ಮೂರ್ತಿಯ ಎಡಬಲಗಳಲ್ಲಿ ಎರಡು ಬೋಧಿಸತ್ವಗಳು; ಸುತ್ತ ದೇವತೆಗಳ ಊಳಿಗ; ಇವು ಚಿನ್ನಬೆಳ್ಳಿಯಲ್ಲಿ ಕೆತ್ತಿದವುಗಳಾಗಿ ಗಾಳಿಯಲ್ಲಿ ಹಾರಾಡುತ್ತ ಹೊಳೆಯುತ್ತಿರುತ್ತವೆ. ಉತ್ಸವವು ಹೆಬ್ಬಾಗಿಲಿಗೆ ನೂರುಹೆಜ್ಜೆ ದೂರದಲ್ಲಿರುವಾಗ, ಅರಸನು ಕಿರೀಟವನ್ನಿಳಿಸಿ, ಹೊಸ ಬಟ್ಟೆಯುಟ್ಟು, ಪೂಜೋಪಕರಣಗಳನ್ನು ತೆಗೆದುಕೊಂಡು ಬರಿಗಾಲಲ್ಲಿ ಹೊರಡುತ್ತಾನೆ. ಮೂರ್ತಿಯನ್ನು ಸಂಧಿಸಿ, ತಲೆವಾಗಿ, ಅದರ ಪಾದದಲ್ಲಿ ಹೂಚೆಲ್ಲಿ ಧೂಪವೆತ್ತುತ್ತಾನೆ. ನಗರ ಪ್ರವೇಶವಾಗುವಾಗ, ರಾಣಿಯೂ ಅಂತಃಪುರದವರೂ ಮೇಲಿನ ಹಂದರದಿಂದ ಹೂಮಳೆಗರೆಯುತ್ತಾರೆ. ಉತ್ಸವದ ಸೌರಣೆಯು ಅಷ್ಟು ಭವ್ಯವಾದುದು. ರಥಗಳು ಒಂದರಂತೆ ಇನ್ನೊಂದಿಲ್ಲ. ಒಂದೊಂದು ದಿವಸ ಒಂದೊಂದು ಸಂಘಾರಾಮುದ ಉತ್ಸವ ನಡೆದು, ಹದಿನಾಲ್ಕು ದಿನಕ್ಕೆ ಉತ್ಸವ ಕೊನೆಯಾಗುತ್ತದೆ. ಆಗಲು ಅರಸನೂ ಅರಸಿಯೂ ಅರಮನೆಗೆ ಮರಳುತ್ತಾರೆ.

ಪಟ್ಟಣದ ಪಶ್ಚಿಮಕ್ಕೆ ಏಳೆಂಟು ಲೈ ದೂರದಲ್ಲಿರುವ ಸಂಘಾರಾಮುವನ್ನು ಕಟ್ಟಿಮುಗಿಸಲು ಎಂಬತ್ತು ವರ್ಷ ಹಿಡಿಯಿತು; ಅಷ್ಟು ಹೊತ್ತಿಗೆ

ಮೂವರು ದೊರೆಗಳಾಳಿದ್ದರು. ಇದರ ಎತ್ತರ ಸುಮಾರು ೨೯೦ ಅಡಿ. ಇದರಲ್ಲಿ ಕೆತ್ತನೆಯ ಕೆಲಸ ಹೆಚ್ಚು. ಎಲ್ಲೆಲ್ಲಿಯೂ ಚಿನ್ನ ಬೆಳ್ಳಿ. ಛಾವಣಿಯಲ್ಲಿ ವಿವಿಧರತ್ನಗಳು ಮೆಟ್ಟಿ ದಿವ್ಯವಾಗಿದೆ. ಗೋಪುರದ ಹಿಂದೆ ಅತಿ ಸುಂದರವಾದ ತೇಜೋಮಯವಾದ ಬುದ್ಧನ ಹಜಾರವಿದೆ. ಅಲ್ಲಿಯ ತೊಲೆ, ಕಂಬ, ಬಾಗಿಲು, ಕಿಟಕಿಕಟ್ಟು ಎಲ್ಲಕ್ಕೂ ಚಿನ್ನದ ಮುಲಾಮು! ಅಲ್ಲದೆ, ಅಲ್ಲಿಯ ಸಂನ್ಯಾಸಿಗಳ ಕೊಠಡಿಗಳೂ ಬಹಳ ದಿವ್ಯವಾಗಿ ವರ್ಣನೆಗೆ ಮೀರಿದಂತಲಂಕೃತವಾಗಿವೆ. ಲಿಂಗ್‌ದೇಶದ ಪೂರ್ವದ ಆರು ದೇಶದರಸುಗಳೂ ಅನರ್ಘ್ಯವಾದ ಆಭರಣಗಳನ್ನು ಇಲ್ಲಿಗೆ ಸಮರ್ಪಿಸುತ್ತಾರೆ.

ಈ ಉತ್ಸವವಾದ ಮೇಲೆ ಫಾಹಿಯಾನನ ಜತೆಯ ಸಾಂಗ್-ಷಾ ಎಂಬವನು ಒಬ್ಬ ತಾರ್ತರ ಯಾತ್ರಿಕನೊಡನೆ ಕಾಶ್ಮೀರದ ಕಡೆಗೆ ಹೊರಟನು.

ತ್ಸೆ—ಹೊ

ಮಿಕ್ಕವರು ಫಾಹಿಯಾನನೊಡನೆ ತ್ಸೆ-ಹೊ ದೇಶವನ್ನು, ಇಪ್ಪತ್ತೈದು ದಿನ ನಡೆದು, ಸೇರಿದರು. ಇಲ್ಲಿಯ ದೊರೆಯು ಧರ್ಮಿ. ಇಲ್ಲಿಯ ಮಹಾಯಾನದವರು ಸಾವಿರದ ಮೇಲುಂಟು. ಇಲ್ಲಿ ಹದಿನೈದು ದಿನ ನಿಂತು, ಮುಂದೆ ದಕ್ಷಿಣದ ಕಡೆ ನಾಲ್ಕು ದಿನ ನಡೆದು, ತ್ಸುಂಗ್-ಲಿಂಗ್ ಪರ್ವತವನ್ನು ಹಾದು, ಯು-ಹ್ವೆನಲ್ಲಿ ಮತಧರ್ಮನಿಯತವಾದ ವಿಶ್ರಾಂತಿಯನ್ನು ಸಲಿಸಿದರು.

ಕೈ—ಷ

ಯಾತ್ರಿಕರು ಇಪ್ಪತ್ತೈದು ದಿವಸ ಮುಂದೆ ಸಾಗಿ, ಕೈ-ಷ ದೇಶಕ್ಕೆ ಬಂದು ಪುನಃ ಹ್ವುಯಿ-ಕಿಂಗ್ ಮುಂತಾದವರನ್ನು ಸೇರಿದರು.

ಈ ದೇಶದ ದೊರೆಯು ಪಂಚವಾರ್ಷಿಕ ಪರಿಷತ್ತನ್ನು ನಡೆಸುತ್ತಾನೆ. ಆ ಕಾಲದಲ್ಲಿ ನಾಲ್ಕು ಕಡೆಗಳಿಂದಲೂ ಸವಣರು ಮೇಘಗಳಂತೆ ಮುತ್ತಿ ಬರುತ್ತಾರೆ. ಎಲ್ಲರೂ ಸೇರಲು, ದೊರೆಯು, ಅವರ ಸಭಾರಂಗವನ್ನು ಶೃಂಗರಿಸಿ, ರೇಶಿಮೆ ಬಾವುಟವೆತ್ತಿ ಹಂದರ ಹಾಕುತ್ತಾನೆ; ಚಿನ್ನಬೆಳ್ಳಿಯ ತಾವರೆಗಳನ್ನೆರಚಿ, ಸಿಂಹಾಸನದ ಹಿಂದೆ ರೇಶಿಮೆ ಹರಡಿ ಆಚಾರ್ಯರ

ಪೀಠಗಳನ್ನು ಸಜ್ಜುಗೊಳಿಸುತ್ತಾನೆ. ಸಾಮಾನ್ಯವಾಗಿ ವಸಂತಕಾಲದಲ್ಲಿ ದೊರೆಯೂ ಮಂತ್ರಿಗಳೂ ಒಂದರಿಂದ ಮೂರು ತಿಂಗಳ ವರೆಗೂ ತಮ್ಮ ಭಕ್ತಿಯ ಅರ್ಪಣೆಗಳನ್ನು ಸಲ್ಲಿಸುತ್ತಿರುತ್ತಾರೆ.

ದೊರೆಯು, ತಾನೇರ್ಪಡಿಸಿದ ಸಭೆಯಾದನಂತರ, ತನ್ನ ಮಂತ್ರಿಗಳಿಗೆ ಅರ್ಪಿಸಲು ಹೇಳುತ್ತಾನೆ; ಅವರ ನಿವೇದನಗಳು ಐದು ದಿನಗಳ ಪರ್ಯಂತ ನಡೆಯುತ್ತವೆ. ಈ ಸಮರ್ಪಣೆಗಳು ಮುಗಿದ ಮೇಲೆ, ದೊರೆಯು ಸಜ್ಜಿತವಾದ ಕುದುರೆಯನ್ನೇರಿ, ಸವಣರು ಉಪಯೋಗಿಸುವ ಬಿಳಿಯ ರೇಶಿಮೆ ಮೊದಲಾದ ಸರ್ವವನ್ನೂ ಸವಣರಿಗೆ ಎರೆದು ಕೊಡುತ್ತಾನೆ. ಹೀಗೆ ಕೊಟ್ಟನಂತರದಲ್ಲಿ ಅವರು ಕೇಳಿದ ಬೆಲೆ ಸಲ್ಲಿಸಿ, ಅವನ್ನು ಮರಳಿ ಪಡೆಯುತ್ತಾನೆ.

ಈ ನಾಡು ಪರ್ವತಪ್ರದೇಶ. ಚಳಿ ಹೆಚ್ಚು. ಧಾನ್ಯಗಳಲ್ಲಿ ಗೋಧಿಯೊಂದಲ್ಲದೆ ವೈವಿಧ್ಯವಿಲ್ಲ. ಪ್ರತಿವರ್ಷವೂ ಆಚಾರ್ಯರಿಗೆ ಸಲ್ಲತಕ್ಕ ಭಾಗವು ಸಂದಮೇಲೆ, ಪ್ರಾತಃಕಾಲಗಳಲ್ಲಿ ಮಂಜುಬೀಳಲು ಮೊದಲಾಗುವುದು. ಅದಕ್ಕಾಗಿ ದೊರೆಯು ಪ್ರತಿವರುಷವೂ ಬೆಳೆಯಾಗಲನುಗ್ರಹಿಸಿದ ಮೇಲೆ ತಮ್ಮ ಭಾಗವನ್ನು ಸ್ವೀಕರಿಸುವಂತೆ ಆಚಾರ್ಯರನ್ನು ಒಪ್ಪಿಸುತ್ತಾನೆ.

ಈ ನಾಡಿನಲ್ಲಿ ಬುದ್ಧನದಾದ ಕಲ್ಲಿನ ಉಗಿಯುವ ಪಾತ್ರೆಯಿದೆ. ಇದರ ಬಣ್ಣವು ಅವನ ಭಿಕ್ಷಾಪಾತ್ರೆಯಂತಹದೇ. ಇಲ್ಲಿರುವ ಬುದ್ಧನ ಹಲ್ಲಿಗಾಗಿ ಜನರು ಸ್ತೂಪವೊಂದನ್ನೆತ್ತಿರುವರು. ಇಲ್ಲಿಯ ಆಚಾರ್ಯರ ಸಂಖ್ಯೆ ಸಾವಿರಕ್ಕೆ ಮೀರಿದೆ. ಎಲ್ಲರೂ ಹೀನಯಾನದವರು.

ಈ ಬೆಟ್ಟಗಳ ಪೂರ್ವದಲ್ಲಿ ಸಾಮಾನ್ಯ ಜನರು ಹಾಕುವ ಬಟ್ಟೆಗಳು ತ್ಸಿನ್ ನಾಡಿನವರದಂತೆ ಒರಟೊರಟು. ಇಲ್ಲಿಯ ಸವಣರ ಆಚಾರಗಳಲ್ಲಿ ವಿಪರೀತ ವೈವಿಧ್ಯವೂ ಆಧಿಕ್ಯವೂ ಇರುವ ಕಾರಣ ಅವುಗಳನ್ನಿಲ್ಲಿ ಬರೆಯುತ್ತಿಲ್ಲ. ಈ ನಾಡು ತ್ಸುಂಗ್-ಲಿಂಗ್ ಪರ್ವತಶ್ರೇಣಿಯ ನಡುವಿನಲ್ಲಿದೆ. ತ್ಸುಂಗ್-ಲಿಂಗಿನಿಂದಾಚೆ ಬಿದಿರು ದಾಳಿಂಬ ಕಬ್ಬು ಬಿಟ್ಟರೆ, ಗಿಡಗಳು ಮರಗಳು ಹಣ್ಣುಗಳು ಎಲ್ಲವೂ ಬೇರೆ.

ಉತ್ತರ ಹಿಂದೂದೇಶ

ಯಾತ್ರಿಕರು ಇಲ್ಲಿಂದ ಉತ್ತರ ಹಿಂದೂದೇಶಕ್ಕೆ ನಡೆದರು. ಒಂದು ತಿಂಗಳು ಹಾಗೂ ಹೀಗೂ ನಡೆದು ತ್ಸುಂಗ್-ಲಿಂಗನ್ನು ದಾಟಿದರು. ತ್ಸುಂಗ್-ಲಿಂಗಿನಲ್ಲಿ ಬೇಸಗೆ ಚಳಿಗಾಲಗಳೆರಡರಲ್ಲಿಯೂ ಹಿಮಬೀಳುತ್ತದೆ. ಅಲ್ಲದೆ ಇಲ್ಲಿ ವಿಷಸರ್ಪಗಳುಂಟು. ಇವು ದುರುದ್ದೇಶೋದ್ದೀಪ್ತಗಳಾದಾಗ ವಿಷ, ಗಾಳಿ, ಮಳೆ, ಹಿಮ, ಮರಳುಗಾಳಿ, ಜಲ್ಲಿಕಲ್ಲುಗಳನ್ನು ಕಾರುತ್ತವೆ. ಇವುಗಳಿಗೆ ಸಿಕ್ಕಿದ ಹತ್ತುಸಾವಿರದಲ್ಲಿ ಒಬ್ಬನೂ ಉಳಿಯುವುದಿಲ್ಲ.

ಈ ನಾಡಿಗರಿಗೆ ತುಷಾರರೆಂದು ಹೆಸರು. ತುಷಾರರೆಂದರೆ ಹಿಮ ಗಿರಿಯ ಜನರು.

ಯಾತ್ರಿಕರು ತ್ಸುಂಗ್-ಲಿಂಗನ್ನು ದಾಟಿ ಉತ್ತರ ಹಿಂದೂದೇಶಕ್ಕೆ ಬಂದರು. ಇಲ್ಲಿಯ ಹೊರಮೇರೆಯ ಟೊ-ಲಿ ಎಂಬಲ್ಲಿ ಹೀನಯಾನದ ಪಂಗಡವೊಂದಿದೆ. ಪೂರ್ವದಲ್ಲಿ ಇಲ್ಲೊಬ್ಬ ಅರ್ಹಂತನಿದ್ದ. ಅವನು, ತುಶಿತಸ್ವರ್ಗದಲ್ಲಿನ ಮೈತ್ರೇಯ ಬೋಧಿಸತ್ವದಂತೆ ಉದ್ದಗಲ ರಂಗು ರೇಖೆಗಳಲ್ಲಿ ಸಮನಾದ ಪ್ರತಿಮೆಯೊಂದನ್ನು ಮರದಲ್ಲಿ ಕಡೆಯಿಸಲಾಶಿಸಿ, ಚತುರ ರೂವಾರಿಯೊಬ್ಬನನ್ನು ತನ್ನ ಯಕ್ಷಿಣೀ ಶಕ್ತಿಯಿಂದ ತುಶಿತಕ್ಕೆ ಒಯ್ದಿದ್ದ. ಒಟ್ಟಿನಲ್ಲಿ, ಆ ರೂವಾರಿಯು ಅವಲೋಕನಕ್ಕಾಗಿ ಮೂರು ಸಲ ಮೇಲಕ್ಕೇರಿ ಕೊನೆಗೆ ಮೂರ್ತಿಯನ್ನು ಪೂರ್ತಿಗೊಳಿಸಿದ. ಅದರ ಉದ್ದ ೮೦ ಅಡಿ. ಅದರ ಮೇಲೆತ್ತಿದ ಕಾಲು ಎಂಟಂಗುಲ. ಉಪವಾಸ ದಿನಗಳಲ್ಲಿ ಅದು ದೇದೀಪ್ಯಮಾನವಾಗಿ ಬೆಳಗುತ್ತದೆ. ಇಲ್ಲಿಯ ಸುತ್ತಿನ ದೊರೆಗಳು ಇದಕ್ಕೆ ಮಾಡುವ ಪೂಜೆಯಲ್ಲಿ ಒಬ್ಬರನ್ನೊಬ್ಬರು ಮೀರಿಸಲು ಹೋರುತ್ತಾರೆ. ಮೂರ್ತಿಯು ಈಗಲೂ ಹಿಂದಿನಂತೆಯೆ ಅಲ್ಲಿಯೆ ಇದೆ.

ಅಲ್ಲಿಂದ ಹೊರಟು, ತ್ಸುಂಗ್-ಲಿಂಗ್ ಶ್ರೇಣಿಯಲ್ಲಿ ನೈಋತ್ಯದೆಡೆಗೆ ಹದಿನೈದು ದಿವಸ ಪ್ರಯಾಣಮಾಡಿದರು. ದಾರಿ ಬಹಳ ಪೆಡಸು. ಉದ್ದಕ್ಕೂ ಕಡಿದಾದ ಬಂಡೆಗಳು ಕಮರಿಗಳು. ಪರ್ವತಭಾಗವೆಂದರೆ ೧೦,೦೦೦ ಅಡಿಯೆದ್ದಿರುವ ಕಲ್ಲುಗೋಡೆ. ಕೆಳಗಡೆ ನೋಡಲು ಕಣ್ಣಿಗೆ ಕಪ್ಪು ಕವಿಯುವುದು. ಮುಂದೆ ಸಾಗಿದರೆ ಕಾಲಿಡಲೆಡೆಯಿಲ್ಲ. ಕೆಳಗಡೆ

ಸಿಂಧೂನದಿಯುಂಟು. ಹಿಂದಿನವರು ಈ ಕಲ್ಲಿನಲ್ಲಿ ದಾರಿತೆಗೆದು ಮೆಟ್ಟಲು ಕಡೆದರು. ಈ ಕಣಿವೆಯಲ್ಲಿ ಒಟ್ಟು ಏಳುನೂರು ಮೆಟ್ಟಲುಗಳಿವೆ. ಈ ಮೆಟ್ಟಲುಗಳನ್ನು ಕಳೆದರೆ ನೇತ ನೂಲುಸೇತುವೆಯ ಮೇಲೆ ನದಿಯನ್ನು ದಾಟಬಹುದು. ಈ ನದಿಯ ಪಾತ್ರವಿಸ್ತಾರ ಎಂಬತ್ತು ಹೆಜ್ಜೆಯಳತೆ.

ಇಲ್ಲಿಯ ಆಚಾರ್ಯರು "ಬುದ್ಧನ ಧರ್ಮವು ಪೂರ್ವದೆಡೆಗೆ ಹಬ್ಬಲು ಮೊದಲಾಯಿತೆಂದು?" ಎಂದು ಫಾಹಿಯಾನನನ್ನು ಕೇಳಿದರು. ಫಾಹಿಯಾನನು "ನಾನು ಆ ದೇಶದ ಜನರನ್ನು ಕೇಳಿದೆ. ಅವರೆಲ್ಲರೂ 'ಮೈತ್ರೇಯ ಬೋಧಿಸತ್ವದ ಸ್ಥಾಪನೆಯಾದಂದಿನಿಂದ' ಎಂಬ ಐತಿಹ್ಯವೊಂದನ್ನು ಹೇಳಿದರು." ಎಂದನು. ಬುದ್ಧನು ನಿರ್ವಾಣನಾದ ಸುಮಾರು ಮುನ್ನೂರು ವರ್ಷಗಳಮೇಲೆ, ಎಂದರೆ ಛೌ-ಪಿಂಗ್-ವಾಂಗನ ಕಾಲದಲ್ಲಿ ಈ ಮೂರ್ತಿಯ ಸ್ಥಾಪನೆಯಾದುದು. ಇದರ ಪ್ರಕಾರ, ಬೌದ್ಧಧರ್ಮ ಪ್ರಸಾರವು ಈ ಮೂರ್ತಿಯ ಕಾಲದಿಂದ ಮೊದಲಾಯಿತೆನ್ನಬಹುದು. ಹಾಗಲ್ಲದೆ ಮೈತ್ರೇಯಮಹಾಸತ್ವನು ಶಾಕ್ಯನ ಉತ್ತರಾಧಿಕಾರಿಯಾಗದಿದ್ದಿದ್ದರೆ, ಮಹಾರ್ಹಬುದ್ಧ, ಮಹಾರ್ಹಧರ್ಮ, ಮಹಾರ್ಹಸಂಘಗಳೆಂಬ ಮಹಾರ್ಹರತ್ನತ್ರಯಗಳನ್ನು ಎಲ್ಲೆಡಗೂ ಹರಡಿ, ಪ್ರಾಂತಜನರಲ್ಲಿಯೂ ಧರ್ಮವನ್ನು ಪ್ರಸರಿಸಿದವನಾರು? ಇಂತಹ ದಿವ್ಯಧರ್ಮಪ್ರಸಾರಣೆಯು ಮನುಷ್ಯಮಾತ್ರನಿಂದ ಸಾಧ್ಯವಲ್ಲವೆಂದು ಗೊತ್ತು; ಆದುದರಿಂದ ಹಾನ್-ಮಿಂಗ್ ಚಕ್ರವರ್ತಿಯ ಸ್ವಪ್ನಕ್ಕೆ ಕಾರಣವುಂಟು.

ಉದ್ಯಾನ

ಯಾತ್ರಿಕರು ಹೊಳೆಹಾಯ್ದು ಉದ್ಯಾನಕ್ಕೆ ಬಂದರು. ಉದ್ಯಾನ ದೇಶದಿಂದ ಉತ್ತರಹಿಂದೂದೇಶವು ಮೊದಲಾಗುವುದು. ಮಧ್ಯ ಹಿಂದೂದೇಶದ ಭಾಷೆಯೇ ಎಲ್ಲರಲ್ಲಿಯೂ ಬಳಕೆಯಲ್ಲಿದೆ. ಮಧ್ಯ ಹಿಂದೂದೇಶವನ್ನೇ ಇವರು ಮಧ್ಯದೇಶವೆನ್ನುವುದು. ಇಲ್ಲಿಯವರ ಬಟ್ಟೆಬರೆ ತಿಂಡಿತೀರ್ಥಗಳು ಮಧ್ಯದೇಶದವರಂತೆಯೇ. ಬೌದ್ಧಧರ್ಮವಿಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದೆ. ಇಲ್ಲಿರುವ ೫೦೦ ಸಂಘಾರಾಮಗಳಲ್ಲಿ ಒಬ್ಬರುಳಿಯ

ದಂತೆಲ್ಲರೂ ಹೀನಯಾನಾನುಯಾಯಿಗಳು. ಪರನಾಡಿನ ಭಿಕ್ಷುಗಳು ಬಂದರೆ, ಅವರಿಗೆ ಬೇಕಾದುದನ್ನೆಲ್ಲಾ ಮೂರುದಿನ ಸಲಿಸುತ್ತಾರೆ; ಮೂರು ದಿನಗಳಮೇಲೆ, ಅವರು ಅಲ್ಲಿಯೇ ನಿಲ್ಲಬೇಕಾದರೆ, ಬೇರೆಡೆಯನ್ನು ನೋಡಿ ಕೊಳ್ಳಬಹುದೆನ್ನುತ್ತಾರೆ.

ಪ್ರತೀತಿಯೊಂದಿಂತು: ಬುದ್ಧನು ಉತ್ತರಹಿಂದೂದೇಶಕ್ಕೆ ಬಂದಾಗ ಇಲ್ಲಿಗೂ ಬಂದಿದ್ದನು. ಬಂದಿಲ್ಲಿ ತನ್ನ ಪದಚಿಹ್ನವನ್ನು ಒಂದು ಗುರುತಾಗಿ ಬಿಟ್ಟುಹೋದನು. ಕಂಡು ತಿಳಿವವನ ಎದೆಯುಳತೆಯಂತೆ ಈ ಹೆಜ್ಜೆ ದೊಡ್ಡದಾಗಿರುವುದುಂಟು, ಚಿಕ್ಕದಾಗಿರುವುದೂ ಉಂಟು. ಈಗಲೂ ಸಹ ಹಾಗೆಯೆ ಇದೆ. ಅಲ್ಲದೆ ಬುದ್ಧನು ದುಷ್ಟಸರ್ಪವನ್ನು ಮಾರ್ಪಡಿಸಿದಲ್ಲಿಯ ಬಟ್ಟೆ ಒಣಗಿಸುವ ಕಲ್ಲು ಇನ್ನೂ ಉಳಿದಿದೆ. ಈ ಕಲ್ಲಿನ ಎತ್ತರ ಹದಿನಾಲ್ಕಡಿ; ಅಗಲ ಇಪ್ಪತ್ತಡಿ; ಒಂದು ಕಡೆ ನುಣ್ಣಗಿದೆ.

ಯಾತ್ರಿಕರಲ್ಲಿ ಹ್ವುಯಿ-ಕಿಂಗ್, ಟಾಒ-ಛಿಂಗ್, ಹ್ವುಯಿ-ಟ ಎಂಬ ಮೂವರು ಬುದ್ಧಛಾಯ ನಾಗರಹಾರದೆಡೆಗೆ ಸಾಗಿದರು. ಫಾಹಿಯಾನನೂ ಇತರರೂ ಮಳೆಗಾಲವನ್ನಲ್ಲಿಯೆ ಕಳೆದರು.

ಸೂ—ಹೊ—ಟೊ

ಮಳೆಗಾಲವನ್ನಲ್ಲಿ ಕಳೆದು, ದಕ್ಷಿಣದೆಡೆ ನಡೆದು ಸು-ಹೊ-ಟೊವಿಗೆ ಬಂದರು. ಇಲ್ಲಿ ಕೂಡ ಬೌದ್ಧಧರ್ಮವು ಅರಳುತ್ತಿದೆ.

ಬಲುಹಿಂದೆ, ದೇವಾಧಿಪನಾದ ಶಕ್ರನು ಬೋಧಿಸತ್ವನ ಸತ್ವಪರೀಕ್ಷೆಗಾಗಿ ಗಿಡುಗ ಪಾರಿವಾಳಗಳನ್ನು ಸೃಷ್ಟಿಸಿದುದೂ, ಪಾರಿವಾಳವನ್ನು ಕಾಯಲು ಬೋಧಿಸತ್ವನು ತನ್ನ ದೇಹದಿಂದ ಮಾಂಸವನ್ನು ಕತ್ತರಿಸಿದುದೂ ಇಲ್ಲಿಯೆ. ಬುದ್ಧನು ತನ್ನ ಧರ್ಮವನ್ನುಸಿರುವಾಗ ಶಿಷ್ಯರನ್ನು ಕುರಿತು "ನಾನು ಹಿಂದಿನ ಜನ್ಮದಲ್ಲಿ ಪಾರಿವಾಳವನ್ನು ಕಾಯಲು ನನ್ನ ಮೈಮಾಂಸವನ್ನು ಕತ್ತರಿಸಿದುದು ಇಲ್ಲಿಯೆ'' ಎಂದನು. ಜನರು ಇದನ್ನು ತಿಳಿದು ಅಲ್ಲಿ ಸ್ತೂಪವೊಂದನ್ನೆತ್ತಿ ಚಿನ್ನಬೆಳ್ಳಿಯಿಂದಲಂಕರಿಸಿದರು.

ಗಾಂಧಾರ

ಇಲ್ಲಿಂದ ಪೂರ್ವಕ್ಕೆ ಇಳಿದು, ಐದುದಿನ ನಡೆದು ಯಾತ್ರಿಕರು ಗಾಂಧಾರಕ್ಕೆ ಬಂದರು. ಈ ನಾಡಿನವರು ಬಹುವಾಗಿ ಹೀನಯಾನದವರು.

ಇದನ್ನು ಅಶೋಕನ ಮಗನಾದ ಧರ್ಮವರ್ಧನನು ಆಳಿದನು. ಬುದ್ಧನು ಬೋಧಿಸತ್ವನಾಗಿದ್ದಾಗ ತನ್ನ ಕಣ್ಣುಗಳನ್ನು ಧರ್ಮಾರ್ಥವಾಗಿ ಒಬ್ಬನಿಗೆ ಕೊಟ್ಟುದು ಇದೇ ನಾಡಿನಲ್ಲಿ. ಈ ಸ್ಥಳದಲ್ಲಿಯೂ ದೊಡ್ಡ ಸ್ತೂಪವೊಂದನ್ನೇರಿಸಿ ಚಿನ್ನಬೆಳ್ಳಿಗಳಿಂದಲಂಕರಿಸಿದರು.

ತಕ್ಷಶಿಲ

ಇಲ್ಲಿಂದ ಪೂರ್ವಕ್ಕೆ ಏಳುದಿವಸ ನಡೆದು, ಯಾತ್ರಿಕರು ತಕ್ಷಶಿಲೆಯನ್ನು ಮುಟ್ಟಿದರು. ಬುದ್ಧನು ಬೋಧಿಸತ್ವನಾಗಿದ್ದಾಗ, ಧರ್ಮಾರ್ಥವಾಗಿ ತನ್ನ ತಲೆಯನ್ನೊಬ್ಬನಿಗೆ ಕೊಟ್ಟನು. ಆದ್ದರಿಂದ ಆ ಹೆಸರು.

ಪುನಃ ಪೂರ್ವಕ್ಕೆ ಎರಡು ದಿವಸ ನಡೆದು, ಹಸಿವಿನಿಂದ ಸಾಯುತ್ತಿದ್ದ ಹುಲಿಗೆ ಬುದ್ಧನು ತನ್ನ ದೇಹವನ್ನು ಕೊಟ್ಟೆಡೆಗೆ ಬಂದರು. ಈ ಎರಡು ಸ್ಥಳಗಳಲ್ಲಿಯೂ ಅನರ್ಘವಾದ ರತ್ನಗಳಿಂದಲಂಕೃತವಾದ ಸ್ತೂಪಗಳನ್ನೆತ್ತಿದ್ದಾರೆ. ಸುತ್ತುಮುತ್ತಿನ ದೊರೆಗಳು, ಮಂತ್ರಿಗಳು, ಜನರು, ಎಲ್ಲರೂ ಅವಿಚ್ಛಿನ್ನವಾಗಿ ಹೂವೇರಿಸಿ ದೀಪಹತ್ತಿಸಿ ಪೂಜೆಯಲ್ಲಿ ಒಬ್ಬರನ್ನೊಬ್ಬರು ಮೀರಿಸಲು ಹೋರುತ್ತಾರೆ.

ಈ ಸ್ತೂಪಗಳನ್ನೂ ಮೊದಲು ಹೇಳಿದ ಎರಡನ್ನೂ ಇಲ್ಲಿಯವರು "ನಾಲ್ಕು ಮಹಾಸ್ತೂಪಗಳು'' ಎನ್ನುತ್ತಾರೆ.

ಪುರುಷಪುರ

ಯಾತ್ರಿಕರು ಗಾಂಧಾರದಿಂದ ನಾಲ್ಕುದಿನ ದಕ್ಷಿಣಕ್ಕೆ ನಡೆದು, ಪುರುಷಪುರ (ಪೆಷಾವರ)ಕ್ಕೆ ಬಂದರು.

ಹಿಂದೆ ಬುದ್ಧನು, ತನ್ನ ಶಿಷ್ಯರೊಡನೆ ಈ ನಾಡಿಗೆ ಬಂದಾಗ, ಆನಂದನನ್ನು ಕುರಿತು "ನನ್ನ ಪರಿನಿರ್ವಾಣಾನಂತರ ಕಾನಿಷ್ಕನೆಂಬ ದೊರೆಯು ಇಲ್ಲಿ ಸ್ತೂಪವೊಂದನ್ನೆತ್ತುವನು'' ಎಂದನು. ಕಾನಿಷ್ಕನೊಂದು ದಿನ ಹಾಗೆಯೇ ಸ್ಥಳಗಳನ್ನು ನೋಡುತ್ತ ಹೋಗುತ್ತಿದ್ದ. ಆಗ ಶಕ್ರನು, ಅವನ ಮನಸ್ಸಿನಲ್ಲಿ ಈ ಭಾವವನ್ನು ನೆಡಲು ಕುರುಬಹುಡುಗನಾಗಿ ಬಂದು ಹಾದಿಯ ಬಳಿಯಲ್ಲಿ ಒಂದು ಗೋಪುರ ಕಟ್ಟುತ್ತಿದ್ದ. ದೊರೆಯು ಅವನೇನು

ಮಾಡುತ್ತಿರುವನೆಂದು ಕೇಳಲು, ಹುಡುಗನು "ಬುದ್ಧಗೋಪುರವನ್ನೆತ್ತುತ್ತಿದ್ದೇನೆ" ಎಂದ. ದೊರೆಯು ಒಳ್ಳೆಯದೆಂದುಕೊಂಡು ಆ ಗೋಪುರದ ಮೇಲೆ ೪೦೦ ಅಡಿಗೂ ಮಿಕ್ಕ ಗೋಪುರವೊಂದನ್ನೆತ್ತಿ, ಅಮೂಲ್ಯ ವಸ್ತುಗಳಿಂದಲಂಕರಿಸಿದ. ಪ್ರಯಾಣಿಕರು ಕಂಡಿರುವ ಸ್ತೂಪದೇವಾಲಯಗಳಲ್ಲಿ ಇದರೊಡನೆ ರೂಪುಶಕ್ತಿಗಳಲ್ಲಿ ಸರಿತೂಗಬಲ್ಲುದಾವುದೂ ಇಲ್ಲ. ಇದು ಜಂಬೂದ್ವೀಪದ ಗೋಪುರಗಳಲ್ಲೆಲ್ಲ ಅತ್ಯುನ್ನತವಾದುದೆಂದು ಪ್ರತೀತಿ. ದೊರೆಯ ಗೋಪುರದ ಪಕ್ಕದಲ್ಲಿ ಆ ಚಿಕ್ಕಗೋಪುರವು ಮೂರು ಅಡಿಗಿಂತ ಎತ್ತರವಾಗಿ ನಿಂತುಕೊಂಡಿತು.

ಬುದ್ಧನ ಭಿಕ್ಷಾಪಾತ್ರೆ ಇನ್ನೂ ಈ ದೇಶದಲ್ಲಿದೆ. ಹಿಂದೆ ಯು-ಚಿ ದೇಶದ ದೊರೆಯು ಈ ಭಿಕ್ಷಾಪಾತ್ರೆಯನ್ನೆತ್ತಿಕೊಂಡು ಹೋಗಬೇಕೆಂದು ಈ ನಾಡಮೇಲೆ ದಂಡೆತ್ತಿಬಂದ. ದೇಶವನ್ನು ಸ್ವಾಧೀನಪಡಿಸಿಕೊಂಡ ದೊರೆಯು, ಬೌದ್ಧಧರ್ಮದಲ್ಲಿ ಗೌರವವಿದ್ದುದರಿಂದ, ಭಿಕ್ಷಾಪಾತ್ರೆಯನ್ನೊಯ್ಯಲಾಶಿಸಿ ಅದಕ್ಕೆ ಪೂಜೆಪುರಸ್ಕಾರಗಳನ್ನರ್ಪಿಸಿದ. ಮಹಾರ್ಹರತ್ನತ್ರಯಗಳಿಗೆ ಪೂಜೆಯಾದ ಮೇಲೆ, ದೊಡ್ಡ ಆನೆಯೊಂದನ್ನಲಂಕರಿಸಿ, ಅದರ ಮೇಲೆ ಆ ಪಾತ್ರೆಯಿಟ್ಟ. ಆನೆಯು ಮುಂದೆ ಸಾಗಲಾರದೆ ಕೆಳಗುರುಳಿತು. ಆಮೇಲೆ, ನಾಲ್ಕುಚಕ್ರದ ರಥದಲ್ಲಿ ಆ ಪಾತ್ರೆಯಿರಿಸಿ ಎಂಟು ಆನೆಗಳನ್ನು ಕಟ್ಟಿದರೂ ಎಳೆಯಲು ಸಾಧ್ಯವಾಗಲಿಲ್ಲ. ಪಾತ್ರೆಯು ತನ್ನದಾಗುವ ಕಾಲವಿನ್ನೂ ಬಂದಿಲ್ಲವೆಂದು ದೊರೆಗಾಗ ತಿಳಿಯಿತು. ಇದರಿಂದ ಲಜ್ಜಿತನೂ ದುಃಖಿತನೂ ಆಗಿ, ಅಲ್ಲಿ ಸ್ತೂಪ ಸಂಘಾರಾಮಗಳನ್ನು ಕಟ್ಟಿಸಿದುದಲ್ಲದೆ, ಪೂಜೋಪಕರಣಗಳನ್ನೂ ಸಿದ್ಧಮಾಡಿದನು.

ಇಲ್ಲಿರುವ ಸುಮಾರು ಏಳುನೂರು ಆಚಾರ್ಯರು, ನಡುವಗಲಾಗಲು ಭಿಕ್ಷಾಪಾತ್ರೆಯನ್ನು ಹೊರಕ್ಕೆ ತಂದು, ಉಪಾಸಕರೊಡನೆ ಅದಕ್ಕೆ ಪೂಜೆ ಮಾಡುತ್ತಾರೆ; ಅನಂತರ ತಮ್ಮ ಮಧ್ಯಾಹ್ನದ ಊಟಮಾಡುತ್ತಾರೆ. ಸಂಜೆಯೂ ಹೀಗೆಯೆ. ಈ ಪಾತ್ರೆಯು ಎರಡು ಕೊಳಗದಮೇಲೆ ಕೊಂಚ ಹಿಡಿಸುತ್ತದೆ. ಅದರ ಬಣ್ಣವು ಮಿಶ್ರವಾಗಿದ್ದರೂ ಕಪ್ಪು ಎದ್ದುಕಾಣುತ್ತದೆ. ಇದರಲ್ಲಿ ನಾಲ್ಕು ಭಾಗಗಳಾಗಿವೆ. ಇದರ ದಪ್ಪ ೩ ಅಂಗುಲ.

ಗಾಜಿನಂತೆ ಹೊಳೆಯುತ್ತದೆ. ಬಡವರು ಕೆಲವೇ ಪುಷ್ಪಗಳಿಂದ ಅದನ್ನು ತುಂಬುತ್ತಾರೆ. ಕೆಲವು ಹಣವಂತರು, ಅನೇಕ ಹೂಗಳಿಂದ ಅರ್ಚನೆ ಮಾಡಲೆಳಸುವರು, ಲಕ್ಷಲಕ್ಷಾಂತರ ಹೂಗಳಿಂದಲೂ ಅದನ್ನು ತುಂಬಲಾರರು.

ಪಾಒ-ಯುನ್ ಸಾಂಗ್-ಕಿಂಗರು ಪಾತ್ರೆಗೆ ಪೂಜೆಮಾಡಿ ಹಿಂದಿರುಗಿದರು. ಹ್ವುಯಿ-ಕಿಂಗ್, ಹ್ವುಯಿ-ಟ, ಟಾಒ-ಛಿಂಗರು ಬುದ್ಧನ ನೆರಳು ಹಲ್ಲು ತಲೆಯೆಲುಬುಗಳಿಗೆ ಪೂಜೆಮಾಡಲು ನಾಗರಹಾರಕ್ಕೆ ಹೋಗಿದ್ದರು ; ಹ್ವುಯಿ-ಕಿಂಗನು ಅಲ್ಲಿ ಕಾಯಿಲೆಬಿದ್ದ—ಟಾಒ-ಛಿಂಗನು ಅವನ ಶುಶ್ರೂಷೆಗೆ ನಿಂತ. ಹ್ವುಯಿ-ಟ ಮಾತ್ರ ಪುರುಷಪುರಕ್ಕೆ ಮರಳಿ, ಪಾಒ-ಯುನ್, ಸಾಂಗ್-ಕಿಂಗರೊಡನೆ ತ್ಸಿನ್ ದೇಶಕ್ಕೆ ಹೊರಟ. ಹ್ವುಯಿ-ಯಿಂಗನು ಬುದ್ಧನ ಭಿಕ್ಷಾಪಾತ್ರೆಯಿದ್ದ ದೇವಾಲಯದಲ್ಲಿ ಪ್ರಾಣಬಿಟ್ಟ. ಇಲ್ಲಿಂದ ಫಾಹಿಯಾನನೊಬ್ಬನೇ ಬುದ್ಧನ ತಲೆಯೆಲುಬಿನ ಸ್ಥಳಕ್ಕೆ ಸಾಗಿದ.

ನಾಗರಹಾರ

ಅಲ್ಲಿಂದ ಪಶ್ಚಿಮಕ್ಕೆ ಹದಿನಾರು ಯೋಜನ ಸಾಗಿ ನಾಗರದೇಶದ ಅಂಚಿನ ಹಿಡ್ಡಾಪಟ್ಟಣಕ್ಕೆ ಬಂದರು.

ಇಲ್ಲಿಯ ವಿಹಾರದಲ್ಲಿ ಬುದ್ಧನ ತಲೆಯೋಡಿನ ಎಲುಬಿದೆ. ಈ ವಿಹಾರವು ಚಿನ್ನದಿಂದಲೂ ಸಪ್ತರತ್ನಗಳಿಂದಲೂ ಅಲಂಕೃತವಾಗಿದೆ. ಈ ನಾಡೆರೆಯನಿಗೆ ಈ ಎಲುಬಿನಲ್ಲಿ ಬಹು ಗೌರವ. ಅದು ಕಳವಾದೀತೆಂದು ಹೆದರಿ, ರಾಜ್ಯದ ದೊಡ್ಡಮನೆತನದ ಎಣ್ಬರನ್ನು ಅದರ ಕಾವಲಿಗಾಯ್ದು, ಪ್ರತಿಯೊಬ್ಬರಿಗೂ ಒಂದು ಮುದ್ರೆ ಕೊಡುತ್ತಾನೆ. ಅವುಗಳಿಂದ ಆ ವಿಹಾರವನ್ನು ಮುದ್ರಿಸಿ, ಅವಶೇಷವದನ್ನು ಕಾಪಿಡುತ್ತಾರೆ. ಈ ಎಂಟು ಮಂದಿಯೂ ಮುಂಜಾನೆಯಲ್ಲಿ ಬಂದು, ತಮ್ಮತಮ್ಮ ಮುದ್ರೆಗಳನ್ನು ಪರೀಕ್ಷಿಸಿದನಂತರ ಬಾಗಿಲು ತೆರೆಯುತ್ತಾರೆ. ಆಮೇಲೆ, ಪರಿಮಳ ಜಲದಿಂದ ಕೈತೊಳೆದುಕೊಂಡು, ಆ ಮೂಳೆಯನ್ನು ವಿಹಾರದ ಹೊರಗಿನ ಉತ್ತಾಸನದಲ್ಲಿರಿಸುವರು. ಮೂಳೆಯ ಅಡಿಗಿರುವ ಕಾಲುಮಣೆಯು

ಸಪ್ತರತ್ನಗಳಿಂದಾದುದು. ಮೇಲೆ ಮಗುಚಿರುವ ಗಾಜಿನ ಬೋಗುಣಿಗೆ ಮುತ್ತಿನ ಕುಚ್ಚುಗಳು. ಎಲುಬಿನ ಬಣ್ಣ ಹಳದಿಯ ಮೇಲಿನ ಬಿಳುಪು. ಆಕಾರ ಅಸಂಪೂರ್ಣವೃತ್ತ. ಸುತ್ತಳತೆ ಹನ್ನೆರಡು ಅಂಗುಲ. ಮಧ್ಯ ಭಾಗ ಮೇಲೆದ್ದಿದೆ. ಪ್ರತಿದಿನವೂ ಅದನ್ನು ಹೊರಕ್ಕೆ ತಂದಮೇಲೆ, ವಿಹಾರದ ಕಾವಲರು ಎತ್ತರದ ಉಪ್ಪರಿಗೆಯನ್ನೇರಿ ನಗಾರಿಬಡಿದು, ಶಂಖ ವೂದಿ ತಾಮ್ರದ ತಾಳಕುಟ್ಟುತ್ತಾರೆ. ರಾಜನು ಇದನ್ನು ಕೇಳಿ, ವಿಹಾರಕ್ಕೆ ನಡೆದು ಧೂಪ ಪುಷ್ಪಾದಿಗಳ ನೈವೇದ್ಯವೊಪ್ಪಿಸುತ್ತಾನೆ. ಅನಂತರ ಅವನೂ ಅವನ ಪರಿವಾರದವರೂ ಒಬ್ಬೊಬ್ಬರಾಗಿ ಆ ಎಲುಬನ್ನು ಕ್ಷಣ ಕಾಲ ತಲೆಯಲ್ಲಿ ಧರಿಸುವರು. ಇವರು ವಿಹಾರವನ್ನು ಹುಗುವುದು ಪೂರ್ವದ್ವಾರದಿಂದ, ಬಿಡುವುದು ಪಶ್ಚಿಮದಿಂದ. ದೊರೆಯು ಪ್ರತಿ ಬೆಳಗ್ಗೆ ಪೂಜೆ ಸಲಿಸಿದನಂತರದಲ್ಲಿ ಆಡಳಿತದ ಕೆಲಸಗಳಿಗಾಗಿ ಸಭೆಹೂಡು ತ್ತಾನೆ. ವೈಶ್ಯರ ಮುಖಂಡರು ಕೂಡ ಮನೆಗೆಲಸಗಳಿಗೆ ಮನ ಕೊಡುವ ಮೊದಲು, ಪೂಜೆಯೊಪ್ಪಿಸುತ್ತಾರೆ. ಪ್ರತಿದಿನವೂ ಹೀಗೆಯೆ—ಈ ಪದ್ಧತಿ ಗೆಂದೂ ಕುಂದಿಲ್ಲ.

ಪೂಜೆ ಮುಗಿಯಲು, ಎಲುಬನ್ನು, ವಿಹಾರದಲ್ಲಿಯ ಸಪ್ತರತ್ನದ ವಿಮೋಕ್ಷಗೋಪುರಕ್ಕೆ ಮರಳಿಸುತ್ತಾರೆ. ಈ ಗೋಪುರವು ಕೆಲವುವೇಳೆ ತೆರೆದಿರುತ್ತದೆ, ಕೆಲವುವೇಳೆ ಮುಚ್ಚಿರುತ್ತದೆ. ಇದರ ಎತ್ತರ ಐದುಮೊಳ. ವಿಹಾರದ ಬಾಗಿಲೆದುರು ಹೂ ಧೂಪಗಳನ್ನು ಮಾರುವವರಿರುತ್ತಾರೆ; ಪೂಜೆ ಮಾಡುವವರು ಅವನ್ನು ಕೊಳ್ಳುತ್ತಾರೆ. ಇಲ್ಲಿಗೆ ನಾಡುನಾಡಿನ ರಾಜರು ತಮ್ಮ ದೂತರೊಡನೆ ಅರ್ಪಣೆಗಳನ್ನು ಎಡೆಬಿಡದೆ ಕಳುಹುತ್ತಿರು ತ್ತಾರೆ. ಈ ವಿಹಾರವಿರುವುದು ಮುವ್ವತ್ತು ಹೆಜ್ಜೆಗಳ ಚಾಕವೊಂದರಲ್ಲಿ. ಆಕಾಶವು ಬೀಳಲಿ, ಭೂಮಿ ಬಿರಿಯಲಿ, ಈ ಸ್ಥಳವು ಕದಲುವಂತಿಲ್ಲ.

ಇಲ್ಲಿಂದ ಉತ್ತರಕ್ಕೆ ಒಂದು ಯೋಜನ ನಡೆದು, ಫಾಹಿಯಾನನು ನಾಗರದ ರಾಜಧಾನಿಗೆ ಬಂದನು. ಹಿಂದೆ, ಬೋಧಿಸತ್ವನು ದೀಪಂಕರ ಬುದ್ಧನಿಗರ್ಪಿಸಲು ಹಣಕೊಟ್ಟು ಇಲ್ಲಿ ಐದು ಕುಸುಮಗಳನ್ನು ಕೊಂಡನು. ಈ ಪಟ್ಟಣದ ನಡುವೆ ಬುದ್ಧನ ಹಲ್ಲಿಗಾಗಿ ಎತ್ತಿದ ಗೋಪುರವಿದೆ. ಬುದ್ಧನ ತಲೆಯೆಲುಬಿಗೆ ನಡೆವಂತೆ ಇದಕ್ಕೂ ಪೂಜೆ ನಡೆಯುತ್ತದೆ.

ಇಲ್ಲಿಂದ ಈಶಾನ್ಯಕ್ಕೆ ಒಂದು ಯೋಜನ ನಡೆದು ಬುದ್ಧನ ದಂಡ ಕಾಷ್ಠಕ್ಕಾಗಿ ಎತ್ತಿದ ಗೋಪುರವಿರುವ ಕಣಿವೆಗೆ ಬಂದನು. ದಂಡವು ಗೋಶೀರ್ಷ ಚಂದನದ್ದು—ಹದಿನಾರು ಹದಿನೇಳು ಅಡಿ ಉದ್ದವಾದುದು. ಇದಕ್ಕೂ ಪೂಜೆಯುಂಟು. ಇದನ್ನು ಮರದ ಕೊಳಬೆಯಲ್ಲಿ ಇಟ್ಟಿದ್ದಾರೆ. ನೂರಲ್ಲ ಸಾವಿರ ಮಂದಿಯಾದರೂ ಇದನ್ನು ಎತ್ತಲಾರರು.

ಕಣಿವೆಯೊಳಹೊಕ್ಕು ಪಶ್ಚಿಮಕ್ಕೆ ತಿರುಗಲು ಬುದ್ಧನ ಸಂಘಾತಿಗಾಗಿ ಕಟ್ಟಿದ ವಿಹಾರವು ಸಿಕ್ಕಿತು. ಅನಾವೃಷ್ಟಿ ಕಾಲದಲ್ಲಿ, ಮಂದಿಯೊಂದಾಗಿ, ಈ ವಸನವನ್ನು ಹೊರತಂದು ಪೂಜಿಸುತ್ತಾರೆ; ತತ್‌ಕ್ಷಣ ಎಲ್ಲಿಲ್ಲದ ಮಳೆ ಸುರಿದು ಹೋಗುತ್ತದೆ.

ಪಟ್ಟಣದ ದಕ್ಷಿಣಕ್ಕೆ ಯೋಜನ ದೂರದಲ್ಲಿ, ನೈಋತ್ಯಕ್ಕೆ ಮುಖ ಮಾಡಿದ ಪರ್ವತದಲ್ಲಿ ಬುದ್ಧನು ತನ್ನ ನೆರಳನ್ನು ಬಿಟ್ಟ ಗುಹೆಯಿದೆ. ಹತ್ತು ಹೆಜ್ಜೆಗೆ ಹೆಚ್ಚಿನ ದೂರದಿಂದ ನೋಡಿದರೆ, ಅದು ತದ್ವತ್ ಬುದ್ಧನ ರೂಪದಂತೆ ಕಾಣುತ್ತದೆ. ಅದೇ ಹೊಂಬಣ್ಣದ ಮುಖಛಾಯೆ, ಅದೇ ಲಕ್ಷಣಗಳು. ಆದರೆ ಹತ್ತಿರ ಹೋದರೆ ಮಾತ್ರ ಅದು ಮಸಕಾಗಿ, ಕಲ್ಪನೆ ಕಡೆದ ಕೆತ್ತನೆಯೋ ಎಂಬ ಭ್ರಾಂತಿ ಬರುತ್ತದೆ. ಅಕ್ಕಪಕ್ಕದ ರಾಜರೆಲ್ಲ ಈ ಛಾಯೆಯ ಸ್ವರೂಪವನ್ನಿಳಿಸಲು ಚತುರ ಚಿತ್ರಶಿಲ್ಪಿಗಳನ್ನು ಕಳುಹಿದರೂ ಯಾರೂ ಸಫಲರಾಗಲಿಲ್ಲ. "ಸಾವಿರ ಬುದ್ಧರೆಲ್ಲರೂ ತಮ್ಮ ಛಾಯೆಗಳನ್ನು ಇಲ್ಲಿ ಬಿಟ್ಟೇ ತೀರಬೇಕು" ಎಂಬ ಪ್ರತೀತಿಯೊಂದು ಆ ನಾಡಿಗರಲ್ಲುಂಟು.

ಈ ನೆರಳಿನ ಪಶ್ಚಿಮಕ್ಕೆ ನಾನೂರು ಹೆಜ್ಜೆಗಳಿಗೆ ಮೀರಿದ ದೂರದಲ್ಲಿ ಒಂದೆಡೆಯಿದೆ. ಬುದ್ಧನಿಲ್ಲಿಗೆ ಬಂದಿದ್ದಾಗ ತನ್ನ ಕೂದಲು ಉಗುರುಗಳನ್ನು ಕತ್ತರಿಸಿ, ತನ್ನ ಶಿಷ್ಯರೊಡನೆ ೭೦-೮೦ ಮೊಳದೆತ್ತರದ ಗೋಪುರವನ್ನೆತ್ತಿದನು— ಮುಂದೆ ಕಟ್ಟುವ ಗೋಪುರಗಳಿಗೆ ಮಾದರಿಯಾಗಿರಲೆಂದೆತ್ತಿದನು. ಅದು ಈಗಲೂ ನಿಂತಿದೆ. ಇದರ ಪಕ್ಕದ ಮಠದಲ್ಲಿ ಏಳುನೂರಕ್ಕೆ ಮಿಕ್ಕ ಸಂನ್ಯಾಸಿಗಳಿದ್ದಾರೆ. ಈ ಸ್ಥಳದಲ್ಲಿಯ ಅರ್ಹತರ ಮತ್ತು ಪ್ರತ್ಯೇಕ ಬುದ್ಧರ ಸಂಖ್ಯೆ ಸಾವಿರದಷ್ಟಾಗುತ್ತದೆ.

ಮಧ್ಯದೇಶಕ್ಕೆ ಬರುವನಕ

ಇಲ್ಲಿ ಚಳಿಗಾಲದ ಮೂರು ತಿಂಗಳು ಕಳೆವವರೆಗೂ ತಂಗಿದ್ದು, ಫಾಹಿಯಾನನೂ ಇನ್ನಿಬ್ಬರೂ ದಕ್ಷಿಣದೆಡೆ ಅಡಿಯೆತ್ತಿ, ಸಫೇದ್ ಕೊ ಎಂಬ ಚಿಕ್ಕ ಹಿಮಗಿರಿಯನ್ನು ದಾಟಿದರು. ಇಲ್ಲಿ ಬೇಸಗೆ ಚಳಿಗಾಲವೆನ್ನದೆ ಹಿಮ ತುಂಬಿರುತ್ತದೆ. ಯಾತ್ರಿಕರು, ಗಿರಿಯ ಉತ್ತರಭಾಗದಲ್ಲಿ ಬಂದ ಚಳಿಯಿಂದ ನಡುಕಹತ್ತಿಕೊಂಡು ಮಾತನಾಡದಾದರು. ಹ್ವಯಿ-ಕಿಂಗನು ಮುಂದೆ ನಡೆಯಲಾರದಾದ. ಬಾಯಲ್ಲಿ ನೊರೆಕಚ್ಚಿ "ನಾನು ಇನ್ನು ಬದುಕಲಾರೆ. ನೀನು ಬೇಗ ಮುಂದೆ ಸಾಗು. ನಾವೆಲ್ಲರೂ ಇಲ್ಲಿ ಸಾಯುವುದು ಬೇಡ" ಎಂದು ಫಾಹಿಯಾನನಿಗೆ ಹೇಳಿ ಪ್ರಾಣಬಿಟ್ಟ. ಫಾಹಿಯಾನನು ಮೃತದೇಹವನ್ನು ತಡವಿ "ನಮ್ಮ ಎಣಿಕೆಯು ಮುರಿಯಿತು. ಎಲ್ಲ ದೈವೇಚ್ಛೆ. ನಾವೇನು ಮಾಡಲಾದೀತು" ಎಂದು ಹುಯ್ಯಲಿಟ್ಟು ಹಾಗೆಯೇ ಧೈರ್ಯತಂದುಕೊಂಡ.

ಅವರಿಬ್ಬರೂ ಹಾಗೆ ಹೀಗೆ ಮಾಡಿ ದಕ್ಷಿಣಶ್ರೇಣಿಯನ್ನು ಹಾಯ್ದು ಆಫ್ಘನ ಸ್ಥಾನಕ್ಕೆ ಬಂದರು. ಇಲ್ಲಿ ಮಹಾಯಾನ ಹೀನಯಾನಗಳಿಂದ ಒಟ್ಟು ಮುನ್ನೂರು ಸಂನ್ಯಾಸಿಗಳಿದ್ದರು. ಮಳೆಗಾಲವನ್ನಿಲ್ಲಿ ಕಳೆದರು.

ಇಲ್ಲಿಂದ ದಕ್ಷಿಣಕ್ಕೆ ತಿರುಗಿ, ಹತ್ತುದಿನಗಳಲ್ಲಿ ಫಲಾನ ರಾಜ್ಯಕ್ಕೆ ಬಂದರು. ಇಲ್ಲಿ ಹೀನಯಾನದವರು ಮುನ್ನೂರು ಮಂದಿಯಿದ್ದರು. ಇಲ್ಲಿಂದ ಮೂರುದಿನ ನಡೆದು ಸಿಂಧುವನ್ನು ದಾಟಿದರು. ಸಿಂಧುವಿನ ಇರ್ಕಡೆಗಳಲ್ಲಿಯೂ ನಾಡು ತಗ್ಗಾಗಿ ಸಮವಾಗಿತ್ತು.

ನದಿಯನ್ನು ದಾಟಲು ಭಿಡಾದೇಶವು ಸಿಕ್ಕಿತು. ಬೌದ್ಧಧರ್ಮವಿಲ್ಲಿ ಹೊಂಗುತ್ತಿತ್ತು. ಇಲ್ಲಿಯ ಸಂನ್ಯಾಸಿಗಳಲ್ಲಿ ಮಹಾಯಾನ ಹೀನಯಾನಗಳೆರಡೂ ಬಳಕೆಯಲ್ಲಿದ್ದುವು. ಸ್ತಿನ್ ನಾಡಿನ ತಮ್ಮ ಧರ್ಮದವ್ವರನ್ನು ಇಷ್ಟು ದೂರದಲ್ಲಿ ಕಂಡು ಕನಿಕರಗೊಂಡು ಸೌಹಾರ್ದದಿಂದ "ಪ್ರಾಂತನಾಡಿನ ನೀವು ಸಂನ್ಯಾಸಿಗಳಾಗಿ ವಿನಯಪಿಟಕವನ್ನರಸುತ್ತ ಇಷ್ಟುದೂರ ಬಂದಿರೆಂತು!" ಎಂದು, ಅವರಿಗೆ ಬೇಕಾದುದನ್ನೆಲ್ಲ ಒದಗಿಸಿ, ಮತಧರ್ಮಕ್ಕನುಸಾರವಾಗಿ ಅವರನ್ನು ಉಪಚರಿಸಿದರು.

ಅಜ್ಜಯ್ಯನ ಅಭ್ಯಂಜನ

ಮಲೆನಾಡಿನ ಜೀವನವನ್ನು ಸಾಮಾನ್ಯವಾಗಿ ನಿರುದ್ವಿಗ್ನ ಎಂದು ಕರೆಯಬಹುದು. ನಗರಗಳಲ್ಲಿರುವಂತೆ ದ್ರುತಪದ ಸಂಚಾರವಿಲ್ಲ; ಮೋಟಾರು ಮೊದಲಾದ ಆತುರದ ಯಾನಗಳ ಗಡಿಬಿಡಿಯಿಲ್ಲ; ಸಿನಿಮಾ ನಾಟಕಶಾಲೆಗಳ ಉದ್ವೇಗವಿಲ್ಲ; ಚಿತ್ರವಿಚಿತ್ರವಾದ ವರ್ತಮಾನ ಸಂಕುಲದಿಂದ ಸಮಾಚ್ಛನ್ನವಾಗಿ ಶಾಂತಿಭಂಗಕಾರಿಗಳಾಗಿರುವ ಚಿತ್ರ ಗುಪ್ತನ ದಪ್ತರದಾತಿರುವ ಪತ್ರಿಕೆಗಳ ಗಲಭೆಯಂತೂ ಬಹಳಮಟ್ಟಿಗೆ ಸೊನ್ನೆ. ಸಾಯಂಕಾಲದಲ್ಲಿ ದಿವದ ಬೇಸರವನ್ನು ಪರಿಹರಿಸಿಕೊಳ್ಳ ಲೆಂದು ಉಪನ್ಯಾಸಮಂದಿರಗಳಿಗೆ ಹೋಗಿ ನೀರಸವಾದ ಭಾಷಣ ಗಳನ್ನು ಕೇಳಿ ಬೇಜಾರಿಗೆ ಬದಲಾಗಿ ಅಶಾಂತಿಯನ್ನು ತುಂಬಿಕೊಂಡು ಗೊಣಗುತ್ತ ಹಿಂತಿರುಗುವ ಪ್ರಸಂಗಗಳಂತೂ ಒದಗುವುದೇ ಇಲ್ಲ. ಅಲ್ಲಿರುವುದು ಕೇವಲ ಶಾಂತಿ; ವನ್ಯವಾದರೂ ಅನಾಗರಿಕವಲ್ಲದ ಶಾಂತಿ. ಸುತ್ತ ನೋಡಿದರೆ ಮಾಲೆಮಾಲೆಯಾದ ಮಲೆಗಳು, ದಟ್ಟ ವಾದ ಕಾಡುಗಳು; ಅಲ್ಲಿ ಮೌನವನ್ನೇ ಮುಲಗಿಸುವ ಜೋಗುಳದಂತಿ ರುವ ಹಕ್ಕಿಗಳ ಸವಿದನಿ. ಮೇಲೆ ತಲೆಯೆತ್ತಿ ನೋಡಿದರೆ ಆಕಾಶ, ನೀಲಾಕಾಶ; ಅನಂತ, ಅಪಾರ, ಪ್ರಶಾಂತ. ಅಲ್ಲಿ ಸುತ್ತುವ ಬೆಳ್ಮುಗಿ ಲಿನ ತುಂಡುಗಳೂ ಕೂಡ ಮೆಲ್ಲಗೆ ಚಲಿಸುತ್ತ ಜಗತ್ತನ್ನು ಸ್ವಪ್ನದಿಂದ ಹೊದಿಸುವಂತೆ ತೋರುವುವು. ದಾರಿಯಲ್ಲಿ ತೊರೆಗಳೇನೋ ಬಂಡೆ ಯಿಂದ ಇಳಿದು ಜಾರಿ ಹರಿಯುತ್ತಿರುವುವು. ಆದರೆ ಆ ಹರಿದಾಟದಲ್ಲಿ ತತ್ತ್ವಜ್ಞನ ಔದಾಸೀನ್ಯವಿರುವುದು; ಯೋಗಿಯ ನಿಷ್ಕಾಮಕರ್ಮ ವಿರುವುದು. ಜನಗಳ ನಿತ್ಯಜೀವನದಲ್ಲಿ ಹಲಕೆಲವು ಕ್ಷುದ್ರ ಕ್ಷುದ್ರ ಉದ್ವೇಗಗಳಿರಬಹುದು. ಬಡಸಂಸಾರದ ಸಾಲದ ಶೂಲೆ; ಮನೆಯಲ್ಲಿ ಮಗುವಿಗೆ ಜ್ವರ; ಒಂದು ಎತ್ತನ್ನು ಹುಲಿ ಹಿಡಿದುದರಿಂದ ಈ ಸಾರಿ ಉಳಲು ಒಂದು ಎತ್ತು ಸಾಲದು; ಮಳೆಗಾಲಕ್ಕೆ ಬೇಕಾದ ಕಟ್ಟಿಗೆ

ಇನ್ನೂ ಮನೆಗೆ ಬಂದಿಲ್ಲ; ಕೋರ್ಟಿನಲ್ಲಿ ಕೇಸು; ದನಕರುಗಳಿಗೆ ಜಕ್ಕಿಣಿಯ ಕಾಟ—ಇತ್ಯಾದಿ.

ಇಂತಹ ಶಾಂತಿಪ್ರಪಂಚದಲ್ಲಿಯೂ ಕ್ರಾಂತಿಕಾಲಗಳಿವೆ. ಜನನ ಸಮಯದಲ್ಲಿ, ಮರಣ ಸಮಯದಲ್ಲಿ, ವಿವಾಹ ಕಾಲದಲ್ಲಿ, ಬೇಟೆಯಲ್ಲಿ ಮನೆಯ ಜನಗಳೆಲ್ಲ ತುಂಬ ಚಟುವಟಿಕೆಯಿಂದಿರುತ್ತಾರೆ. ಪೋಲಿಸರ ಕಾಟ, ಜಮಾಬಂದಿಯ ಊಟ ಇವುಗಳನ್ನು ಉತ್ಕ್ರಾಂತಿಗಳ ಗುಂಪಿಗೆ ಸೇರಿಸಬಹುದು. ಇವುಗಳ ವಿಚಾರವಾಗಿ ಮುಂದೆ ಹೇಳುತ್ತೇನೆ. ಮೇಲೆ ಹೇಳಿದ ವಿಷಯಗಳನ್ನು ಬಿಟ್ಟರೆ ಇನ್ನೊಂದು ಕ್ರಾಂತಿವಿಷಯವಿದೆ. ಅದು ಯಾವುದೆಂದು ಊಹಿಸಬಲ್ಲಿರೇನು? ಇಲ್ಲ; ನಿಮ್ಮಿಂದಾಗುವುದಿಲ್ಲ. ನೀವು ಬಯಲು ಸೀಮೆಯವರು. ಐದೇ ನಿಮಿಷದಲ್ಲಿ ಸ್ನಾನಮಾಡಿ ಎರಡೇ ನಿಮಿಷದಲ್ಲಿ ಊಟಮಾಡುವ ಜಾತಿಗೆ ಸೇರಿದವರು! ಹೋಗಲಿ ನೀವು ಊಹಿಸಲಾಗದಿದ್ದರೆ ನಾನೇ ಹೇಳಿಬಿಡುತ್ತೇನೆ—ಅಭ್ಯಂಜನ! ಬೆರಗಾಗಬೇಡಿ. ನಿಮಗೆ ಗೊತ್ತಿಲ್ಲ. ಮಲೆನಾಡಿನಲ್ಲಿ ಅಭ್ಯಂಜನನೆಂದರೆ ಮಹಾ ಕಾರ್ಯ. ಅಭ್ಯಂಜನದ ದಿನ ಯಾರು ಸಾಯುತ್ತಾರೆ? ಯಾರು ಉಳಿಯುತ್ತಾರೆ? ಯಾರು ಮೂರ್ಛೆ ಬೀಳುತ್ತಾರೆ? ಹೇಳುವುದೇ ಕಷ್ಟ. ಆ ದಿನ ಮನೆಯಲ್ಲಿ ಗಲಭೆಯೋ ಗಲಭೆ!

ನಾನು ಚಿಕ್ಕವನಾಗಿದ್ದಾಗ–ಏಕೆಂದರೆ ಈಗ ನಾಗರಿಕತೆ ಬಂದುದರಿಂದ ಹಿಂದಿನ ಆಚಾರಗಳೆಲ್ಲ ಪರಿವರ್ತನೆಯಾಗಿ ಹೋಗಿವೆ—ನಾನು ಚಿಕ್ಕವನಾಗಿದ್ದಾಗ ನಮ್ಮ ಮನೆಯಲ್ಲಿ 'ಅಭ್ಯಂಗ' ಎಂದರೆ ನಮಗೆಲ್ಲ ಜನನ, ಮರಣ, ವಿವಾಹ, ಪೋಲಿಸರ ಕಾಟ, ಜಮಾಬಂದಿ ಎಲ್ಲವೂ ಒಟ್ಟಿಗೆ ಬಂದಹಾಗೆ ಅನುಭವವಾಗುತ್ತಿತ್ತು. ನಾವಾಗ ವಿದ್ಯಾರ್ಥಿಗಳಷ್ಟೆ? ಐಗಳು ನಮ್ಮ ಮನೆಯಲ್ಲಿಯೇ ಕೂಲಿ ಕೆಲಸ ಮಾಡುತ್ತಿದ್ದರು. ನಮಗೆ ಅವರು ಮೇಷ್ಟರಾದರೂ ನಮ್ಮ ಹಿರಿಯರಿಗೆ ಅವರು ಕೂಲಿಯಾಳು. ಐಗಳು ನಮಗೆ ಅ ಆ ಇ ಈ ಹೇಳಿಕೊಡುವುದರ ಜೊತೆಗೆ ಎಣ್ಣೆ ಹಚ್ಚುವುದು, ಸ್ನಾನಮಾಡಿಸುವುದು; ಸಮಯಬಿದ್ದರೆ ಬಿಟ್ಟಿ ಒಗೆದುಕೊಡುವುದು, ಪ್ರಸಂಗ ಒದಗಿದರೆ ಗುಡಿಸುವುದು,

ಸನ್ನಿವೇಶ ಪ್ರಾಪ್ತವಾದರೆ ಯಜಮಾನರ ಕೂಸನ್ನು ಆಡಿಸುವುದು; ಅವರ ವೃತ್ತಿಯಲ್ಲಿ ಅದೂ ಒಂದು ಭಾಗವಾಗಿದ್ದುದರಿಂದ ಆಳು ಲೆಕ್ಕ ಇಡುವುದು, ಪುಣ್ಯಕಾರ್ಯವಾದ್ದರಿಂದ ದೇವರ ಪೂಜೆ ಮಾಡುವುದು; ಇತ್ಯಾದಿ ಇತ್ಯಾದಿ ಚಿಲ್ಲರೆ ಕೆಲಸಗಳನ್ನು ಸಾಂಗವಾಗಿ ನೆರವೇರಿಸುತ್ತಿದ್ದರು. ನಮಗೆ ಭಾನುವಾರ ರಜಾ; ಜೊತೆಗೆ ಅಭ್ಯಂಜನದ ಸಜಾ. ಆ ದಿನ ಎಲ್ಲಿಯಾದರೂ ತಿರುಗಾಡಿ ಹಣ್ಣುಗಿಣ್ಣು ಕಿತ್ತು ಮರಗಿರ ಹತ್ತಿ ಕಲ್ಲುಗಿಲ್ಲು ಹೊಡೆದು ತಲೆಗಿಲೆ ಒಡೆದು ಏನಾದರೂ ಒಂದು ಸಾಹಸಗೀಹಸ ಮಾಡಿ ಬೇಜಾರು ಕಳೆದುಕೊಳ್ಳೋಣ ಎಂದರೆ ಹಾಳು ಅಭ್ಯಂಜನ ಬಂದು ನಮಗೆಲ್ಲ ಬಹಳ ತೊಂದರೆಯಾಗುತ್ತಿತ್ತು. ಬೆಳಗಿನ ಆರು ಗಂಟೆಯಿಂದ ರಾತ್ರಿ ಎಂಟುಗಂಟೆಯುವರೆಗೂ ಎಣ್ಣೆ ಸ್ನಾನದ ತೀರ್ಥಯಾತ್ರೆ! ಅದೇನು ಒಬ್ಬರೇ? ಇಬ್ಬರೇ? ಮನೆಯ ಮಂದಿಗೆಲ್ಲ 'ಅಭ್ಯಂಗ'!

ಅದರಲ್ಲಿಯೂ ನಮ್ಮ ಅಜ್ಜಯ್ಯನ ಅಭ್ಯಂಗವೇ ಅರ್ಧ ದಿನವನ್ನು ಆಪೋಶನಮಾಡುತ್ತಿತ್ತು. ಅವರು ವಯಸ್ಸಾದವರು, ದೇವರಲ್ಲಿ ಬಹಳ ಭಕ್ತಿ; ಕಳ್ಳನ್ನು ಬಹಳ ಮಿತವರಿತು ತೀರ್ಥದಂತೆ ಪಾನಮಾಡುತ್ತಿದ್ದರು. ಅನ್ನಕ್ಕಿಂತಲೂ ಅಭ್ಯಂಜನವೇ ಶ್ರೇಷ್ಠ ಎನ್ನುವುದು ಅವರ ಧ್ಯೇಯೋಕ್ತಿಯಾಗಿತ್ತು. ಅಭ್ಯಂಜನ ಮಾಡಿ ಮಾಡಿ ದೇಹ ಸ್ವಲ್ಪ ಸ್ಥೂಲತೆಯ ಕಡೆಗೆ ಒಲೆದಿತ್ತು. ವಾರಕ್ಕೊಂದು ಅಭ್ಯಂಜನ ಮಾಡುತ್ತಿದ್ದರೆ ಅಮೃತತ್ವವು ಲಭಿಸುವುದೆಂದು ಅವರು ತಿಳಿದಿದ್ದಂತೆ ತೋರುತ್ತದೆ. ಆದರೆ, ಪಾಪ, ಕೆಲವು ವರುಷಗಳ ಹಿಂದೆ ಅವರು ತೀರಿಕೊಂಡೇಬಿಟ್ಟರು. ಅವರು ಸ್ವರ್ಗಕ್ಕೆ ಹೋದರು ಎಂದು ನಾನು ತಿಳಿದಿದ್ದೇನೆ. ಅಲ್ಲೇನು ಕಡಿಮೆ! ಎಣ್ಣೆ, ಸೀಗೆಕಾಯಿ, ನೀರು, ಬೆಂಕಿ ಬೇಕಾದಷ್ಟಿದೆ! ಅಪ್ಸರಿಯರೂ ಮುಂದೆ ಮುಂದೆ ಇದ್ದಾರೆ. ಅಭ್ಯಂಜನ ಮಾಡಿದ್ದೇ ಮಾಡಿದ್ದು! ಅವರೇನು ಸ್ವರ್ಗದಲ್ಲಿ ದಿನಕ್ಕೆ ಇಪ್ಪತ್ತನಾಲ್ಕುಸಾರಿ ಅಭ್ಯಂಜನಮಾಡುತ್ತಾರೋ ಏನೋ! ಮಾಡಲಿ; ಪಾಪ, ಬೇಕಾದಷ್ಟು ಮಾಡಲಿ! ಮಾನವನ ಈಶ್ವರಪ್ರೇಮಕ್ಕೆ ಅಷ್ಟಾದರೂ ಪ್ರತಿಫಲ ಬೇಡವೇ? ಒಂದಿಷ್ಟು ಅಭ್ಯಂಜನವನ್ನು ಕೊಡಲಾರದ ದೇವರು ಅಮೃತತ್ವವನ್ನು ಕೊಡಬಲ್ಲನೇ?

ನಮ್ಮ ಮನೆಯಲ್ಲಿ ಸ್ನಾನದ ಇಲಾಖೆಯೇ ಪ್ರತ್ಯೇಕವಾಗಿತ್ತು. ಯಾರಿಗೋ ಸಂಬಳಕೊಡಬೇಕೆಂದು ಇಲಾಖೆ ನಿರ್ಮಿತವಾಗಿರಲಿಲ್ಲ; ಪರಂಪರೆಯಿಂದ ಬಂದುದು. ಮಾಮೂಲನ್ನು ತಪ್ಪದೆ ನಡೆಯುತ್ತಿದ್ದ ನಮ್ಮವರು ಬರುವ ಆದಾಯವು ತನ್ನ ಮಾಮೂಲನ್ನು ತಪ್ಪಿ ನಡೆದರೂ ಅಭ್ಯಂಜನದ ಮಾಮೂಲನ್ನು ಮಾತ್ರ ಬಿಟ್ಟಿರಲಿಲ್ಲ. 'ಬಚ್ಚಲು ಮನೆ'ಯೇ ಬೇರೆ. (ಇದೇನು? ಕಣ್ಣು ಕಣ್ಣು ಬಿಡುತ್ತಿದ್ದೀರಿ? ನಾನು ಮೊನ್ನೆ ಹೇಳಿದ್ದನ್ನು ಮರೆತಂತಿದೆ! ನೀವು ಹೀಗೆಲ್ಲ ಮರೆತರೆ ನನ್ನ ಹರಟೆ ತುಂಡುಗಡಿದು ಹೋಗುತ್ತದೆ. ನಮ್ಮ ಕಡೆ ಸ್ನಾನದ ಮನೆಗೆ "ಬಚ್ಚಲು" ಎಂದು ಕರೆಯುತ್ತಾರೆ.) ಬಚ್ಚಲಿನಲ್ಲಿ ಒಂದು ದೊಡ್ಡ ಒಲೆ. ಕಬ್ಬಿಣವನ್ನು ಬೇಕಾದರೂ ಕರಗಿಸಬಹುದು. ಅದರಲ್ಲಿ ಆ ಒಲೆಯ ಬಾಯಿ ಮೂರು ಅಡಿ ಎತ್ತರ ಮೂರು ಅಡಿ ಅಗಲ. ಒಲೆಯ ಮೇಲೆ ಎರಡು ದೊಡ್ಡ ಹಂಡೆಗಳನ್ನು ಹೂಳಿರುತ್ತಾರೆ. ಅವುಗಳನ್ನು ತೂತು ಬೀಳುವ ವರೆಗೂ ತೆಗೆಯುವಂತಿಲ್ಲ. ಹೊರಗೆ ತೆಗೆಯಬೇಕಾದರೆ ಅರ್ಧ ಒಲೆಯನ್ನೇ ಕೀಳಬೇಕು. ಆ ಹಂಡೆಗಳ ತುಂಬಾ ನೀರು ಹಾಕಿ ಕಾಯಿಸುತ್ತಾರೆ ನೋಡಿ, ತಕಪಕ ತಕಪಕ ಕುದಿಯುವವರೆಗೆ. ಅಕ್ಕಿ ಹಾಕಿದರೆ ತಕ್ಷಣ ಅನ್ನ ಆಗಿಹೋಗುತ್ತೆ. ಆ ಒಲೆಯ ಬೆಂಕಿಯೇ, ನೂರು ನಾಲ್ಕು ಹೆಣಗಳನ್ನು ಆರೇಳು ನಿಮಿಷಗಳಲ್ಲಿ ಸುಟ್ಟು ಬೂದಿಮಾಡಿ ಬಿಡಬಹುದು! ಕಟ್ಟಿಗೆಗೇನು ಮಲೆನಾಡಿನಲ್ಲಿ? ನಾನು ನೀವೂ ಇಬ್ಬರೇ ಹೊರಟರೆ ಹತ್ತೇ ನಿಮಿಷಗಳ ಒಳಗೆ ಏನು ಕಡಿಮೆ ಎಂದರೂ ಒಂದು ಗಾಡಿ ಕಟ್ಟಿಗೆ ಒಟ್ಟು ಮಾಡಬಹುದು. ಸಣ್ಣ ಕಡ್ಡಿಗಳನ್ನಲ್ಲ; ಮೈಸೂರಿನ ಬೀದಿಯ ಸಾಲುಮರಗಳಲ್ಲಿ ಕತ್ತಿದೋಟಿಯಿಂದ ಕ್ಷಯರೋಗಹಿಡಿದ ಗಿಡಗಳ ತುದಿಯ ಕೊಂಬೆಗಳನ್ನು ಮುರಿದು ತೆಗೆದುಕೊಂಡು ಹೋಗುತ್ತಾರಲ್ಲಾ ಅಂಥಾ ಕಡ್ಡಿಗಳನ್ನಲ್ಲ; ದೊಡ್ಡ ದೊಡ್ಡ "ಕುಂಟೆ"ಗಳನ್ನು! ನಮ್ಮ ಬಚ್ಚಲುಮನೆಯ ಬೆಂಕಿ ಎಂದರೆ ಏನೆಂದು ತಿಳಿದಿದ್ದೀರಿ, ಸ್ವಾಮಿ? ಬಡಬಾಗ್ನಿಯ ಮರಿ! ಸಾಕ್ಷಾತ್ ಬಡಬಾಗ್ನಿಯ ಮರಿ!

ಭಾನುವಾರ ಅಭ್ಯಂಜನ ಎಂದರೆ ಅರ್ಧಡಬ್ಬ ಹರಳೆಣ್ಣೆ ಎರಡು

ಬುತ್ತಿ ಸೀಗೆಪುಡಿ ಮನೆಲೆಕ್ಕಕ್ಕೆ ಖರ್ಚು. ನಾವು ಏಳೆಂಟುಜನ ಹುಡುಗರು ನಮ್ಮ ಮನೆಯ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು. ನಮ್ಮ ಪ್ರಿನ್ಸಿಪಾಲರೆ ನಮ್ಮಲ್ಲಿ ಎಣ್ಣೆಸವರಿಕೊಳ್ಳು ವುದಕ್ಕೂ ಬರದ ಅಂಡರ್ ಗ್ರಾಜುಯೇಟ್‌ಗಳಿಗೆ ಎಣ್ಣೆಹಚ್ಚುವುದು. ಉಪಾಧ್ಯಾಯರು ವಿದ್ಯಾರ್ಥಿಗಳೆಂದರೆ ಹಾಗಿರಬೇಕು. ಏನು ಮೈತ್ರಿ! ಏನು ಸೇವೆ? ಎಷ್ಟು ಕರುಣೆ! ಈಗ ಎಲ್ಲಿಯೂ ವಿದ್ಯಾರ್ಥಿಗಳಿಗೂ ಉಪಾಧ್ಯಾಯರುಗಳಿಗೂ ಸಂಬಂಧ ಹೋಯಿತು ಎಂದು ಕೂಗಿಕೊಳ್ಳು ತ್ತಿದ್ದಾರೆ. ನಮ್ಮ ಮನೆಯ ವಿಶ್ವವಿದ್ಯಾನಿಲಯವನ್ನು ಉದಾಹರಣೆ ಯಾಗಿಟ್ಟುಕೊಂಡರೆ ನಮ್ಮ ಈ ಸನಾತನ ಪುರಾತನ ಪವಿತ್ರ ಪುಣ್ಯ ಭೂಮಿಯಾದ ಭಾರತವರ್ಷದ ಮಾತಂತಿರಲಿ ಸಮಗ್ರ ಜಗತ್ತಿಗೇ ಕ್ಷೇಮ ಉಂಟಾಗುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ! ನಗಬೇಡಿ, ಸ್ವಾಮಿ; ನಗಬೇಡಿ! ನನ್ನ ಮಾತಿನ ಅಂತರರ್ಥವನ್ನು ಗ್ರಹಿಸಿನೋಡಿ. ಆಗ ವಿಷಯ ಗೊತ್ತಾಗುವುದು. ಹುಡುಗರ ಜೊತೆಗೆ ದೊಡ್ಡವರು: ಅಪ್ಪಯ್ಯ, ಚಿಕ್ಕಪ್ಪಯ್ಯ, ಸಣ್ಣ ಚಿಕ್ಕಯ್ಯ, ದೊಡ್ಡ ಕಕ್ಕಯ್ಯ, ಅಣ್ಣಯ್ಯ, ಅಜ್ಜಯ್ಯ ಇತ್ಯಾದಿ! ಎರಡು ಆಳುಗಳಿಗೆ ಎಣ್ಣೆ ತಿಕ್ಕೀ ತಿಕ್ಕೀ ಸಾಕಾಗಿ ಹೋಗಬೇಕು. ಎಷ್ಟೋಸಾರಿ ಅವರು ಮರುದಿನವೇ ಜ್ವರ ಬಂದು ಹಾಸಿಗೆ ಹಿಡಿದಿದ್ದಾರೆ ಅಂದರೆ! ಇನ್ನೆರಡು ಆಳುಗಳು ನೀರು ಸರಿಮಾಡುವುದು.

ಹಾಗೆಂದರೆ ಏನು ಅನ್ನುವಿರೋ? ಹೇಳುತ್ತೇನೆ! ಲಾಲಿಸ ಬೇಕು! ಎರಡು ಹಂಡೆಗಳಲ್ಲಿ ನೀರು ಕುದಿಯುವುದು ಒತ್ತಟ್ಟಿಗಿರಲಿ. ಅದು ನೀರಿನ ಉಗ್ರಾಣವಾಯ್ತು. ಅಲ್ಲಿಂದ ನೀರನ್ನು ತೆಗೆದು ಬೇರೆ ಕಡಾಯಿಗಳಿಗೆ ಹಾಕಿ ತಣ್ಣೀರು ಬೆರೆಸಿ ಹದಮಾಡುವರು. ನೀರು ಬೆರೆಸಲು ಒಂದು ದೊಡ್ಡ ಅಗಲವಾದ ಬಾಯಿ ಇರುವ ಕಡಾಯಿ ಇರುವುದು. ಅಲ್ಲದೆ ಒಂದು ದೋಣಿಯಿರುವುದು. ಸುಮಾರು ಹನ್ನೆರಡು ಹದಿಮೂರು ಅಡಿಗಳಷ್ಟುದ್ದದ್ದು. ಆ ದೋಣಿ ಏಕೆ ಎನ್ನುವಿರೋ? ಎಣ್ಣೆ ಹಚ್ಚಿಕೊಂಡು ಮೈ ಚೆನ್ನಾಗಿ ನೆನೆದಮೇಲೆ ಅದರಲ್ಲಿ ಮಲಗಿಕೊಳ್ಳುವುದು ಅಭ್ಯಂಜನದ ಒಂದು ಮುಖ್ಯವಾದ

ಅಂಗ. ಆ ನೀರು ಬಿಸಿಬಿಸಿಯಾಗಿರುವುದು. ಅದನ್ನು ಬಿಸಿನೀರು ಎಂದರೆ ತಪ್ಪಾಗಬಹುದು. ಅದರಿಂದ ಸುಡುನೀರು ಎನ್ನುವುದೇ ಉತ್ತಮ ಮತ್ತು ಸತ್ಯಕ್ಕೆ ಹೆಚ್ಚು ಸಮೀಪ. ಅಭ್ಯಂಜನದಲ್ಲಿ ಬಿಸಿ ನೀರನ್ನು ಉಪಯೋಗಿಸುವುದೇ ಇಲ್ಲ; ಎಲ್ಲ ಸುಡುನೀರೆ! ಎಷ್ಟೋ ಸಾರಿ ಹುಡುಗರನ್ನು ಬಲಾತ್ಕಾರದಿಂದ ಎಳೆದುಕೊಂಡುಹೋಗಿ ಅದರಲ್ಲಿ ಅದ್ದಿದಾಗ ಅವರು ಕಿಟ್ಟನೆ ಕಿರಿಚಿಕೊಂಡು ಕೆಳಗೆ ಹಾರಿ ಕಲ್ಲಿನ ಮೇಲೆ ಬಿದ್ದು ಗಾಯವಾಗಿದೆ ಅಂದರೆ! ಇಷ್ಟೊಂದು ವಿಧವಿಧವಾದ ಪಾತ್ರೆಗಳಿಗೆ ನೀರು ಹಾಕುವುದು ಇಬ್ಬರಾಳುಗಳಿಗೆ ಸಾಕುಸಾಕಾಗಿ ಹೋಗುತ್ತದೆ.

ಅತ್ತ ಆಳುಗಳು ಅಭ್ಯಂಜನದ ನಾಟಕಕ್ಕೆ ಬೇಕಾದ ಸಲಕರಣೆಗಳನ್ನು ಸಿದ್ಧಮಾಡುತ್ತಿರಲು, ಇತ್ತ ಪಾತ್ರಧಾರರು ಎಣ್ಣೆ ಹಚ್ಚಿಕೊಳ್ಳುತ್ತಿರುವುದೊಂದು ಸುಮನೋಹರ ದೃಶ್ಯ. ಮಸಿಯಲ್ಲಲ್ಲ ಹರಳೆಣ್ಣೆಯಲ್ಲಿ. ಅದನ್ನು ಬರೆದರೂ ಆ ವರ್ಣನೆಯು ಸರಿಯಾಗಿ ಆವಿರ್ಭವಿಸುವುದು ಅಸಾಧ್ಯ. ಪ್ರಿನ್ಸಿಪಾಲರಾದ ನಮ್ಮ ಐಗಳು ಕಿರಿಯರಿಗೆ ಎಣ್ಣೆ ಹಚ್ಚಿ ಹಚ್ಚಿ ಬಿಡುತ್ತಿರುವರು. ಅದೊಂದು ದೊಡ್ಡ ಗೋಳು. ತಿಮ್ಮು ಎಣ್ಣೆ ಹಚ್ಚಿಸಿಕೊಳ್ಳುತ್ತಾ ಕಿಟ್ಟನೆ ಕೂಗಿಕೊಂಡನು. ಏಕೆ ಎಂದರೆ, ಮೊನ್ನೆ ಮಾವಿನ ಮರದಿಂದ ಕೆಳಗೆ ಹಾರಿದಾಗ ಬಿದ್ದು ಗಾಯವಾಗಿದ್ದನ್ನು ಯಾರಿಗೂ ಹೇಳದೆ ಮುಚ್ಚಿಟ್ಟಿದ್ದನು. ಐಗಳು ಅದನ್ನು ಅರಿಯದೆ ಕುದುರೆ ಮಾಲೀಸು ಮಾಡುವಂತೆ ಎಣ್ಣೆ ತಿಕ್ಕಿಯೇ ತಿಕ್ಕಿದರು. ಹಾಗೆ ಮಾಡುವಾಗ ಕೀತುಹೋದ ಗಾಯವು ಹಿಸಿದುಕೊಂಡು ಇದ್ದಕ್ಕಿದ್ದಂತೆ ದೃಗ್ಗೋಚರವಾಯ್ತು. ಅಂತೂ ಗಾಯದ ನೋವಿಗೋ ಗುಟ್ಟು ಬಯಲಾಯಿತಲ್ಲಾ ಎಂದೋ ಗೊಳೋ ಎಂದು ಅಳುತ್ತಿದ್ದಾನೆ. ಅವನನ್ನು ಸಮಾಧಾನ ಮಾಡಿದ್ದೇ ತಡ, ವಾಸು ಕೂಗುತ್ತಿದ್ದಾನೆ. ಏನು? ತಲೆಗೆ ಹಾಕಿದ ಎಣ್ಣೆಯು ಶಿವನ ತಲೆಯ ಜಡೆಗಳಿಂದ ಹೊರಟ ಶ್ರೀಮದ್ ಗಂಗೆಯಂತೆ ಮೆಲ್ಲನೆ ಕೇಶ ರಾಶಿಗಳಿಂದ ಉಚ್ಚಳಿಸಿ ಲಲಾಟದ ಮಾರ್ಗವಾಗಿ ಭ್ರೂಮಧ್ಯೆ ಇಳಿದು ಕಮಲನಯನಗಳನ್ನು ಪ್ರವೇಶಿಸಿಬಿಟ್ಟಿತು! ನೆಗೆನೆಗೆದು ಬಿದ್ದು

ಬಿದ್ದು ಕಿರಿಚಿಕೊಳ್ಳುತ್ತಿದ್ದಾನೆ. ಸರಿ; ಐಗಳು ಓಬುಗೆ ಎಣ್ಣೆ ಹಚ್ಚು ವುದನ್ನು ನಿಲ್ಲಿಸಿ ವಾಸುವಿನ "ರಿಲೀಫ್ ವರ್ಕ್"ಗೆ ಹೊರಟರು. ಬಟ್ಟೆ ಯಿಂದ ಕಣ್ಣು ಜಜ್ಜಿಹೋಗುವಂತೆ ಒರಸಿದ್ದಾಯಿತು. ಆದರೆ ಆ ಗಲಾಟೆಯಲ್ಲಿ ತಲೆಯಲ್ಲಿದ್ದ ಕಜ್ಜಿಯ ಜ್ಞಾಪಕವೇ ಅವರಿಗಾಗಲಿಲ್ಲ. ಅದನ್ನು ಎಡಗೈಯಿಂದ ಬಲವಾಗಿ ಅದುವಿದ್ದರಿಂದ ಅವನು ಮತ್ತೂ ಕುಣಿದು ಕೂಗತೊಡಗಿದನು. ಅಲ್ಲಿ ನೋಡಿ! ಅಲ್ಲಿ ನೋಡಿ! ಮಾನು ಎಣ್ಣೆಯ ಕುಡಿಕೆಯನ್ನೇ ಮಗುಚಿಹಾಕಿದನು! ಅವನಿಗೂ ಭೂದೇವಿ ಗೂ ಸ್ಪರ್ಧೆ ತೊಡಗಿದೆ. ಭೂದೇವಿಯು ತೈಲವನ್ನು ಪಾನಮಾಡಲು ಯತ್ನಿಸುತ್ತಿದ್ದಾಳೆ; ಮಾನು ಆದಷ್ಟನ್ನು ಬಳಿದು ಬಳಿದು ಮೈಗೆ ಬಳಿಯುತ್ತಿದ್ದಾನೆ. ಆ ಭರದಲ್ಲಿ ಮಣ್ಣೆಲ್ಲಾ ಮೈಗಾಗಿಹೋಗಿದೆ! ಈ ಅನಾಹುತವನ್ನು ನೋಡಿದ ಚಿಕ್ಕಯ್ಯ ರೇಗಿ ಎದ್ದು ಮಾನುಗೆ ದಿಡ್ ಎಂದು ಒಂದು ಗುದ್ದು ಕೊಟ್ಟರು. ಅವನು ಮೌನವಾಗಿ ರೋದಿಸುತ್ತ ಮೂಲೆ ಸೇರಿ ಪೊರಕೆಯಾಗಿಬಿಟ್ಟನು. ಹುಡುಗರ ಗುಂಪಿನಲ್ಲಿ ಹೀಗೆ ಘಟನೆಗಳ ಮೇಲೆ ಘಟನೆಗಳು ಪ್ರಾಪ್ತವಾಗುತ್ತಿರ ಲಾಗಿ ದೊಡ್ಡವರ ಮೈಗೆ ಆಳುಗಳು ಎಣ್ಣೆ ಉಜ್ಜುತ್ತಿದ್ದಾರೆ. ಕೆಲ ವರು ಗರಡಿಯಲ್ಲಿ ಕಸರತ್ತು ಮಾಡುವರಂತೆ ಹುಂ ಉಸ್ ಹುಂ ಉಸ್ ಎನ್ನುತ್ತಿದ್ದಾರೆ. ಅಜ್ಜಯ್ಯ ದೂರದಲ್ಲಿ ಕುಳಿತು ಎಣ್ಣೆ ಉಜ್ಜಿಸಿಕೊ ಳ್ಳುತ್ತಿದ್ದಾರೆ. ಅವರ ಮೈಯೆಲ್ಲ ತೈಲಮಯ. ಆಳು ತಲೆಗೆ ಎಣ್ಣೆಹಾಕಿ ಪಟ್ ಪಟ್ ಎಂದು ಮದ್ದಲೆ ಬಡಿಯುವಂತೆ ಬಿಡುವಿಲ್ಲದೆ ಬಡಿಯು ತ್ತಿದ್ದಾನೆ. ಆ ಏಟಿಗೆ ಅಭ್ಯಾಸವಿಲ್ಲದವರಾಗಿದ್ದರೆ ಮೆದುಳು ಕದಡಿ ಹೋಗುತ್ತಿದ್ದರು. ಆದರೆ ಅಜ್ಜಯ್ಯ ಅಚಲದಂತೆ ಧೀರವಾಗಿ ಕುಳಿ ತಿದ್ದಾರೆ. ಈ ಮಧ್ಯೆ ಅವರು ಎಣ್ಣೆ ಹಚ್ಚಿಕೊಳ್ಳುವುದನ್ನು ಪ್ರಾರಂ ಭಿಸುವಾಗ ಮಾಡುವ ಕರ್ಮಕ್ರಿಯೆಗಳನ್ನು ಹೇಳಿದರೆ ಅಪ್ರಕೃತ ವಾಗದು. ಅಲ್ಲಿ ನೋಡಿ! ಅವರ ಮುಂದೆ ನೆಲದ ಮೇಲೆ ಬೆರಳಿನಿಂ ದಿಟ್ಟ ಏಳು ಎಣ್ಣೆಯ ಚುಕ್ಕಿಗಳಿವೆ. ಅವು ಅಶ್ವತ್ಥಾಮ ಹನುಮಂತ ಮೊದಲಾದ ಪುರಾಣಪ್ರಸಿದ್ಧರಾದ ಸಪ್ತಚಿರಂಜೀವಿಗಳ ಸ್ಮಾರಕತೈಲ ಬಿಂದುಗಳು. ಅದಾದಮೇಲೆ ಅವರು ಏನೇನೋ ಬಾಯಲ್ಲಿ ಮಟ

ಗುಟ್ಟುತ್ತ ಬಂಗಾಳದ ವೈಷ್ಣವರು ನಾಮಗಳನ್ನು ಬಳಿದುಕೊಳ್ಳುವಂತೆ ಎದೆ, ಹೊಟ್ಟೆ, ತೋಳು, ಬೆನ್ನು ಮೊದಲಾದ ಕಡೆ ಎಣ್ಣೆಯ ಬಟ್ಟುಗಳನ್ನು ಇಟ್ಟುಕೊಂಡು ಆಳಿಗೆ ಎಣ್ಣೆ ಉಜ್ಜಲು ಅಪ್ಪಣೆ ಕೊಡುವರು. ಈ ಪ್ರಾರಂಭೋತ್ಸವವನ್ನು ನಾವು ಬಹಳ ಭಯಭಕ್ತಿಗಳಿಂದ ದೇವರಿಗೆ ಮಾಡುವ ಮಂಗಳಾರತಿಯನ್ನು ನೋಡುವಂತೆ ನೋಡುತ್ತಿದ್ದೆವು.

ಇಷ್ಟು ಹೊತ್ತಿಗೆ ದೊಡ್ಡ ಬೋಗುಣಿಯಲ್ಲಿ ಪಾನಕವು ಸಿದ್ಧವಾಗುವುದು. ಎಣ್ಣೆ ಹಚ್ಚಿ ಆಯಾಸಪಟ್ಟವರಿಗಲ್ಲ; ಹಚ್ಚಿಸಿಕೊಂಡು ಆಯಾಸಪಟ್ಟವರಿಗೆ. ಅಲ್ಲದೆ ಅಭ್ಯಂಜನದ ನಡುವೆ ಬಿಸಿನೀರು ಮಿಂದು ಶಕ್ತಿಗುಂದಿದವರಿಗೂ ಪಾನಕ ಕೊಟ್ಟು ಪುನಃ ಸಶೇಷವಾದ ಸ್ನಾನವನ್ನು ಪೂರ್ತಿಯಾಗಿ ಪೂರೈಸಲು ಶಕ್ತಿಬರುವಂತೆ ಮಾಡುವುದು ರೂಢಿಯಾಗಿತ್ತು. ಅಷ್ಟು ಬಿಸಿಬಿಸಿಯಾದ ಸುಡುನೀರನ್ನು ಹೇಗೆ ಮೀಯುತ್ತಿದ್ದೆವೋ ನಾನರಿಯೆ. ಈಗ ಅದನ್ನು ನೆನೆದರೆ ಸಾಕು ನನಗೆ ಜೆವರುಬರುವ ಹಾಗೆ ಆಗುತ್ತದೆ! ಆ ಬಿಸಿನೀರಿನ ದೋಣಿಯಲ್ಲಿ ಅರ್ಧಗಂಟೆ ಮಲಗಿ ಅಲ್ಲಿಂದ ಕೆಳಗೆ ಇಳಿಯಲು ಶಕ್ತಿಸಾಲದೆ ಇತರರ ಸಹಾಯದಿಂದ ಕೆಳಗಿಳಿದರೆ, ಕೂಡಲೇ ಕಡಾಯಿಯಲ್ಲಿ ಸಿದ್ಧವಾಗಿದ್ದ ಸುಡುನೀರನ್ನು ತಲೆಯ ಮೇಲೆ ರಫ್‌ರಫ್ ಎಂದು ಹಾಕುವರು. ಶಿಥಿಲವಾಗಿದ್ದ ಜೀವವು ಮತ್ತೂ ಶಿಥಿಲವಾಗಿ ನಿಲ್ಲಲಾರದೆ ಕೊಳದ ಕಲ್ಲಿನ ಮೇಲೆ ಕುಳಿತರೆ ಒಬ್ಬರಲ್ಲ ಇಬ್ಬರು ಸೀಗೆಯಿಂದ ಮೈಯುಜ್ಜಲು ತೊಡಗುವರು. ಅವರ ತಿಕ್ಕಾಟ ಎಳೆದಾಟದಲ್ಲಿ ಮೂರ್ಛೆಬರುವಷ್ಟಾಗುವುದು. ಆಮೇಲೆ ತಲೆಯಲ್ಲಿದ್ದ ಹರಳೆಣ್ಣೆಯು ಸಂಪೂರ್ಣವಾಗಿ ಹೋಗುವಂತೆ ತಲೆಯುಜ್ಜುವರು. ಆ ಸಮಯದಲ್ಲಿ ಅಳದೆ ಇರುವ ಹುಡುಗರೇ ಇಲ್ಲ. ಕಣ್ಣನ್ನು ಎಷ್ಟು ಬಲವಾಗಿ ಮುಚ್ಚಿದರೂ ಸೀಗೆಯ ನೀರು ಹೇಗಾದರೂ ಮಾಡಿ ಒಳಗೆ ನುಗ್ಗಿಯೇ ನುಗ್ಗುವುದು. ಸ್ನಾನ ಮುಗಿಯುವಷ್ಟರಲ್ಲಿ ಮೈಯೆಲ್ಲ ಹಣ್ಣಾಗಿ ಹುಣ್ಣಾಗಿ ಕಣ್ಣೆನಂತೆಯೇ ಕೆಂಪಾಗಿ ನಿಲ್ಲಲಾರದಷ್ಟು ಶಕ್ತಿಗುಂದದೆ ಇದ್ದರೆ ಅದು ನಿಜವಾದ ಅಭ್ಯಂಜನ ಅಲ್ಲವೇ ಅಲ್ಲ ಎಂದು ನಮ್ಮ

ವರ ನಂಬುಗೆ. ಸ್ನಾನ ಮುಗಿಯಿತು. ಐಗಳು ಹುಡುಗನನ್ನು ಮೆಲ್ಲನೆ ಕೈಹಿಡಿದು ನಡೆಯಿಸಿಕೊಂಡು ಹೋಗಿ ಸಿದ್ಧವಾಗಿದ್ದ ಹಾಸುಗೆಯ ಮೇಲೆ ಮಲಗಿಸುವರು. ಚೆನ್ನಾಗಿ ಬೆವರಲಿ ಎಂದು ಶಾಲು, ಕಂಬಳಿ, ರಗ್ಗು ಎಲ್ಲವನ್ನೂ ಮುಖಮುಚ್ಚಿ ಹೊದಿಸುವರು. ಒಳಗೆ ಪ್ರಾಣಿಯು ಬೆವತೂ ಬೆವತೂ ಹಾಸಿಗೆಯೆಲ್ಲ ತೊಯ್ದುಹೋಗುವುದು. ಹೀಗೆ ಹುಡುಗರನ್ನು ಒಬ್ಬೊಬ್ಬರನ್ನಾಗಿ ಹಣ್ಣುಹಣ್ಣುಮಾಡಿ ಹಾಸುಗೆಗೆ ತಳ್ಳಿದ ಮೇಲೆ ದೊಡ್ಡವರ ಸ್ನಾನ ಪ್ರಾರಂಭವಾಗುವುದು. ಕಡೆಯಲ್ಲಿ ನಮ್ಮ ಅಜ್ಜಯ್ಯನವರ ಅಭ್ಯಂಜನ. ಎಲ್ಲರಿಗೂ ಹೆದರಿಕೆ!

ಅಜ್ಜಯ್ಯಗೆ ಎಲ್ಲರಿಗಿಂತಲೂ ಹೆಚ್ಚು ಬಿಸಿಯಾದ ನೀರು ಬೇಕು. ಅವರು ಮೀಯುವ ನೀರಿಗೆ ನಾವು ಕೈಯಿಟ್ಟರೆ ಫಕ್ಕನೆ ಹೊರಗೆ ಎಳೆದುಕೊಳ್ಳುವಂತಾಗುತ್ತಿತ್ತು. ಅಭ್ಯಂಜನದ ಕಾಲದಲ್ಲಿ ಅವರು ಎರಡುಮೂರುಸಾರಿಯಾದರೂ ಮೂರ್ಛೆಹೋಗದೆ ಇರುತ್ತಿರಲಿಲ್ಲ. ಅಷ್ಟೊಂದು ಬಿಸಿಯಾದ ನೀರನ್ನು ಮಿಂದರೆ ಯಾರಿಗೆ ತಾನೇ ಮೂರ್ಛೆಬರುವುದಿಲ್ಲ? ಅದರಲ್ಲಿಯೂ ಸ್ವಲ್ಪ ವಯಸ್ಸು ಹೋದವರು. ಅವರು ದೋಣಿಯಲ್ಲಿ ದೀರ್ಘಕಾಲ ಮಲಗುವರು. ಏಳುವಾಗ ಒಂದು ಲೋಟ ಪಾನಕ ಕುಡಿಯುವರು. ಆ ಮೇಲೆ ಕೊಳದಲ್ಲಿ ಕುಳಿತು ತಲೆಯ ಮೇಲೆ ಸುಡುನೀರು ಹಾಕಿಸಿಕೊಳ್ಳುವರು. ಒಬ್ಬರಲ್ಲ ಇಬ್ಬರು, ಚೊಂಬುಗಳಲ್ಲಿ ಕಡಾಯಿಯಿಂದ ಮೊಗೆಮೊಗೆದು ಎಡೆಬಿಡದೆ ನೀರನ್ನು ಎತ್ತರದಿಂದಲೇ ರಫ್‌ರಫ್ ಎಂದು ನೆತ್ತಿಗೆ ಹೊಡೆಯುವರು. ಈ ದ್ವಿತೀಯ ಕರ್ಮವಾದ ಮೇಲೆ ಒಂದು ಲೋಟ ಪಾನಕ ಖರ್ಚಾಗುತ್ತಿತ್ತು. ಆಮೇಲೆ ಆಳುಗಳು ಮೈಕೈಗಳನ್ನೂ ತಲೆಯನ್ನೂ ಸೀಗೆಯಿಂದ ಗಸಗಸ ಉಜ್ಜುವರು. ಪುನಃ ಸುಡುನೀರು ಜಲಪಾತದಂತೆ ತಲೆಯ ಮೇಲೆ ಬೀಳುತ್ತಿತ್ತು. ಇಷ್ಟು ಹೊತ್ತಿಗೆ ಮೂರ್ಛೆಹೋಗಿ ಕೊಳದ ಕಲ್ಲಿನ ಮೇಲೆ ಮಲಗಿಬಿಡುತ್ತಿದ್ದರು. ಆಗ ಹಾಹಾಕಾರವೆದ್ದು ಜನಗಳು ಹಿಂದೆಮುಂದೆ ಓಡಾಟ ಮಾಡುವುದೇ ಕಾರ್ಯದಕ್ಷತೆಯ ಚಿಹ್ನೆ ಎಂದು ತಿಳಿದುಕೊಂಡಂತೆ ತೋರುತ್ತಿತ್ತು. ಒಳಗಿನಿಂದ ಅಜ್ಜಮ್ಮನೂ ಬರುತ್ತಿದ್ದರು. ಕೆಲವರು

ಪಾನಕ ಕುಡಿಸುವರು; ಕೆಲವರು ತಣ್ಣೀರನ್ನು ತಲೆಗೆ ತಟ್ಟುವರು; ಕೆಲವರು ಗಾಳಿಬೀಸುವರು; ಕೆಲವರು ತೋಟದಾಚೆಯ ಭೂತರಾಯನಿಗೆ ಅಡ್ಡಬಿದ್ದು ಅಜ್ಜಯ್ಯನನ್ನು ಸಂರಕ್ಷಿಸುವಂತೆ ಅಂಗಲಾಚಿ ಬೇಡುವರು. ಅಂತೂ ಸ್ವಲ್ಪಹೊತ್ತಿಗೆ ಅಜ್ಜಯ್ಯನ ಮೂರ್ಛೆಯು ಕೊನೆಗಂಡು 'ಅಮ್ಮಯ್ಯ' 'ನಾರಾಯಣ' ಮೊದಲಾದ ಶಬ್ದಗಳು ಅವರ ಬಾಯಿಯಿಂದ ಹೊರಬಿದ್ದು ಎಲ್ಲರಿಗೂ ಧೈರ್ಯವನ್ನುಂಟು ಮಾಡುತ್ತಿದ್ದುವು. ಸರಿ; ಮತ್ತೆ ಜಳಕ! ಮತ್ತೆ ಮೂರ್ಛೆ! ಹೀಗಾಗಿ ಕೊನೆಗೆ ಸ್ನಾನ ಕೊನೆಗಾಣುವುದು. ಅವರಿಗೆ ನೀರೆರೆವವರು ಕೈಗಳನ್ನು ಆಗಾಗ ತಣ್ಣೀರಿನಲ್ಲಿ ಅದ್ದಿ ತಂಪುಮಾಡಿಕೊಂಡರೂ ಆ ಬಿಸಿ ನೀರಿನ ತಾಪವು ಶಮನವಾಗುತ್ತಿರಲಿಲ್ಲ; ಅಷ್ಟು ಬಿಸಿ ಅವರು ಮಿಸಾಯುವ ನೀರು! ಅಜ್ಜಯ್ಯನ ಸ್ನಾನ ಕೊನೆಗಾಣುವಾಗ ಅವರು ಗಂಗೆ ಯಮುನೆ ಮೊದಲಾದ ಪುಣ್ಯನದಿಗಳ ಹೆಸರಿನ ಪಟ್ಟಿಯೊಂದನ್ನು ಗಟ್ಟಿಯಾಗಿ ಉಚ್ಚರಿಸಿ ನಾಲ್ಕು ದಿಕ್ಕುಗಳಿಗೂ ಕೈಮುಗಿಯುತ್ತಿದ್ದರು. ಇಬ್ಬರು ಅವರ ಎರಡು ಕೈಗಳನ್ನು ಹಿಡಿದು ಹಾಸಿಗೆಗೆ ಕರೆದೊಯ್ಯುತ್ತಿದ್ದರು. ಹೋಗುವಾಗ ಅವರ ಮೈ ಹೊಗೆಯಾಡುವಂತೆ ಕಾಣುತ್ತಿತ್ತು. ಅಲ್ಲಿ ಸಿದ್ಧವಾಗಿದ್ದ ಕಂಬಳಿ ಮೊದಲಾದುವುಗಳನ್ನು ಮೈತುಂಬಾ ಹೊದೆದುಕೊಂಡು ಮಲಗಿ ಬೆವರಿಸಿಕೊಳ್ಳುತ್ತಿದ್ದರು. ಅವರು ಆ ದಿನ ರಾತ್ರಿ ಊಟಮಾಡುತ್ತಿರಲಿಲ್ಲ. ಬರಿಯ ಹಾಲನ್ನೇ ಕುಡಿದು ಮಲಗಿಬಿಡುವರು.

ಅವರ ಕಾಲವು ಆಗಿಹೋಯಿತು. ಅವರೊಡನೆ ಆ ಅಭ್ಯಂಜನದ ಮಹೋತ್ಸವವೂ ಮರೆತುಹೋಯಿತು.

ಬೈರಾಗಿ

ಮೊನ್ನೆ ಶಿವರಾತ್ರಿ ದಿನ, ಗುಡ್ಡದ ಮೇಲೆ ವಿರೂಪಾಕ್ಷೇಶ್ವರನ ಪೂಜೆ ಸರಿಯಾಗಿ ನಡೆಯಲಿಲ್ಲ. ವರ್ಷ ವರ್ಷವೂ ಆ ದಿನ ಈಶ್ವರನಿಗೆ ಏಕಾದಶವಾರ ಅಭಿಷೇಕ, ರಾತ್ರಿ ಅಲ್ಲೇ ಜಾಗರಣೆ, ಮಾರನೆಯ ಬೆಳಗ್ಗೆ ಪಾರಣೆ ಇಷ್ಟೂ ಮುಗಿಸಿಕೊಂಡು ಊರಿನವರೆಲ್ಲರೂ ಹಿಂತಿರುಗುವ ಪದ್ಧತಿ. ಇದಕ್ಕೆ ತಗಲುವ ಖರ್ಚೆಲ್ಲಾ ತಿಪ್ಪಯ್ಯನವರೇ ವಹಿಸುತ್ತಿದ್ದರು. ಅವರಿಗೆ ಬಹಳ ದಿನಗಳವರೆಗೂ ಮಕ್ಕಳಾಗಲಿಲ್ಲವಂತೆ; ಅದರಿಂದ, ತಮಗೆ ಒಂದಾದರೂ ಗಂಡು ಮಗುವಾದರೆ ಪ್ರತಿ ವರ್ಷವೂ ಹಾಗೆ ಸೇವೆ ಮಾಡುವುದಾಗಿ ವಿರೂಪಾಕ್ಷೇಶ್ವರನಿಗೆ ಹರಸಿಕೊಂಡಿದ್ದರಂತೆ; ಆ ಹರಕೆಯಿಂದ ಹುಟ್ಟಿದವನೇ ಸಾಂಬಮೂರ್ತಿ.

ಎಂದಿನಂತೆ ಈ ವರ್ಷವೂ ಶಿವರಾತ್ರಿಯಲ್ಲಿ ದೇವಸ್ಥಾನದ ತುಂಬ ಜನರು ತುಂಬಿದ್ದರು. ಬೆಳಗಿನಿಂದಲೂ ಅಭಿಷೇಕಾದಿಗಳು ನಡೆದಿದ್ದುವು. ಬ್ರಾಹ್ಮಣರ ವೇದಮಂತ್ರಗಳು ದೇವಸ್ಥಾನದಲ್ಲಿ ಸೆಲೆಗೊಡುತ್ತಿದ್ದುವು. ಕಾಯಿ ಕರ್ಪೂರಗಳ ತೆರಿಗೆಯಂತೂ ಲೆಕ್ಕವಿಲ್ಲದಷ್ಟು. ಆ ದಿನ ಉಪವಾಸದ ಹಬ್ಬವಾದ ಕಾರಣ ಊಟ ಉಪಚಾರಗಳ ಸಡಗರವಷ್ಟೇನೂ ಇರಲಿಲ್ಲ. ಅದರಿಂದ ಎಲ್ಲರೂ ಬೇರೊಂದು ಯೋಚನೆಯಿಲ್ಲದೆ ಒಳಗಡೆಯೇ ಕುಳಿತಿದ್ದರು.

ಸಾಂಬಮೂರ್ತಿಯು ಆ ದಿನ ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಿದ್ದ. ತಾನು ವರಪ್ರಸಾದದಿಂದ ಹುಟ್ಟಿದವನು, ದೇವದೇವನ ಭಕ್ತ, ತನ್ನ ಸೇವೆಯಿಂದ ಈಶ್ವರನಿಗೆ ಪರಮ ಪ್ರೀತಿ ಎಂಬ ಒಂದು ತರದ ಹೆಮ್ಮೆಯೂ ಅವನಲ್ಲಿರುವಂತೆ ತೋರುತ್ತಿತ್ತು. ಈ ಹುರುಪಿನಿಂದ ಶ್ರಮ ಲಕ್ಷ್ಯವಿಲ್ಲದೆ ಒಳಗಿನ ಮತ್ತು ಹೊರಗಿನ ಕೆಲಸಗಳನ್ನು ಆದಷ್ಟು ಮುಗಿಸಿಕೊಂಡು ಸಾಯಂಕಾಲದ ಪೂಜೆಯಾಗುವ

ಹೊತ್ತಿಗೆ ದೇವಾಲಯದಲ್ಲಿ ಕೆಲಹೊತ್ತು ನಿಂತ. ಮುಂಜಾನೆಯಿಂದಲೂ ಮಾಡಿದ ಕಾಯಕಷ್ಟದ ಪರಿಣಾಮವು ಆಗಾಗ ತನ್ನಲ್ಲಿ ತೋರುತ್ತಿತ್ತು. ಮೈಕೈಗಳಲ್ಲಿ ಸ್ವಲ್ಪ ನೋವು; ದೇಹವೆಲ್ಲವೂ ಬಿಸಿಯಾಗಿ ಬೆವರುವುದು; ವಿಶ್ರಾಂತಿಯ ಬಯಕೆಯನ್ನು ಸೂಚಿಸುವ ಆಕಳಿಕೆ; ಆದರೂ ರಾತ್ರಿಯೆಲ್ಲಾ ಜಾಗೃತನಾಗಿರಬೇಕೆಂಬ ಇಚ್ಛೆ. ಹೀಗೆ ಹಿಂದು ಮುಂದಾಡುತ್ತ ಇರುವಾಗ ಮಂಗಳಾರತಿಗೆ ಮೊದಲಾಯಿತು; ಎಲ್ಲರೂ ಎದ್ದು ನಿಂತರು. ಮೊದಲೇ ಸಾಕಷ್ಟು ಗಾಳಿಯಾಡದ ಮಂದಿರ; ಜನಸಂದಣಿ ಹೆಚ್ಚು; ಎಲ್ಲರೂ ನಿಂತ ಮೇಲಂತೂ ಹೇಳುವ ಹಾಗೇ ಇಲ್ಲ; ಉಬ್ಬೆಯ ಮನೆಯಲ್ಲಿ ಹಾಕಿದಂತಾಯಿತು. ಮಂತ್ರಪುಷ್ಪ ಮುಗಿಯುವ ಹತ್ತು ನಿಮಿಷಗಳಲ್ಲಿ ತೊಟ್ಟಿದ್ದ ಬಟ್ಟೆಯೆಲ್ಲವೂ ನೆನೆಯುವಷ್ಟು ಸೆಕೆಯಾಗ ತೊಡಗಿತು. ದಣಿದಿದ್ದ ಮೂರ್ತಿಗೆ ತಲೆನೋವಿಗಾರಂಭವಾಗಿತ್ತು; ಆದರಿಂದ, ಈ ಸ್ಥಳವನ್ನು ಸದ್ಯಕ್ಕೆ ಯಾವಾಗ ಬಿಟ್ಟೇನು ಎಂದು ಆತುರಪಡುತ್ತಿದ್ದು ಮಂಗಳಾರತಿ ಕೊಟ್ಟ ಗಳಿಗೆಯೇ ಹೊರಕ್ಕೆ ಬಂದ.

ಹೊರಗಡೆ ಶೀತಲವಾದ ಗಾಳಿ ಸೋಕಿದೊಡನೆ ಉದ್ಧಾರದ ಒಂದು ದೀರ್ಘ ನಿಶ್ವಾಸವನ್ನು ಬಿಟ್ಟು ಸುತ್ತಲೂ ನೋಡಿದ. ತಮ್ಮ ಮಂಟಪಕ್ಕೆ ಹೋಗಿ, ತಲೆನೋವು ಇಳಿಯುವವರೆಗೂ ಸ್ವಲ್ಪ ಹೊತ್ತು ಮಲಗಬೇಕೆನ್ನಿಸಿತು. ಹಾಗೆಯೇ ನಿದ್ರೆ ಬಂದು ಜಾಗರಣೆ ಕೆಟ್ಟೀತೆಂಬ ಭಯದಿಂದ ಹಾಗೆ ಮಾಡಲಿಲ್ಲ. ಅಲ್ಲಿಂದ, ತಂಗಾಳಿಯಲ್ಲಿ ಕೊಂಚ ತಿರುಗಾಡಿದರೆ ಮೇಲೆಂದು ತಿಳಿದು ಗುಡಿಯನ್ನು ಬಿಟ್ಟು ಮುಂದೆ ಕಾಣುತ್ತಿದ್ದ ಕೊಳದ ಕಡೆಗೆ ಹೊರಟ.

ಕೊಳವು ಪ್ರಾಕಾರದಾಚೆ ಸುಮಾರು ಮೂವತ್ತು ಗಜದಷ್ಟು ದೂರದಲ್ಲಿದೆ. ಅಷ್ಟೇನೂ ದೊಡ್ಡದಲ್ಲ. ಮಟ್ಟಸವಾಗಿ, ಚೌಕನಾಗಿ, ಅಚ್ಚುಕಟ್ಟಾಗಿದೆ. ಮೂರ್ತಿಯು ಅತ್ತಕಡೆ ಹೋಗುವಾಗ್ಗೆ ಆಗಲೇ ಮುಸಕು ಕತ್ತಲೆ. ದಾರಿಯೂ, ಕೊಳದ ಸೋಪಾನಗಳೂ ಸರಿಯಾಗಿ ಕಾಣುತ್ತಿರಲಿಲ್ಲ. ಗಾಢವಾದ ಯಾವುದೂ ಯೋಚನೆಯಿಲ್ಲದೆ ಶಾಂತವಾದ, ತಿಳಿಯಾದ ಮನಸ್ಸಿನಿಂದ ಮೂರ್ತಿಯು ಆಕಾಶದ ಕಡೆ

ಗೊಮ್ಮೆ, ಅತ್ತಿತ್ತ ದೂರದಲ್ಲಿ ಕಾಣುವ ಕಾಡುಮರಗಳ ಕಡೆಗೊಮ್ಮೆ ಎದುರಿನ ಕೊಳದ ಕಡೆಗೊಮ್ಮೆ ತನ್ನ ನೋಟವನ್ನು ತಿರುಗಿಸುತ್ತಾ ಆಡುವ ನಡಿಗೆಯಿಂದ ಕೊಳದ ತಡಿಗೆ ಬಂದು ಅಗಲವಾಗಿದ್ದ ಹಾಸು ಬಂಡೆಯೊಂದರ ಮೇಲೆ ಕುಳಿತುಕೊಂಡ. ಹಗಲು ಬಿಸಿಲು ಹೆಚ್ಚಾಗಿ ಕಾದಿಲ್ಲದ ಕಾರಣ ಆಗಲೇ ಬಂಡೆಯು ತಣ್ಣಗಿದ್ದಿತು; ಜೊತೆಗೆ ತಂಪಾದ ಗಾಳಿ ಬೇರೆ— ದಣಿದ ದೇಹವನ್ನು ತಣಿಸಲು ಸಹಕಾರಿ.

ಆ ಕಲ್ಲಿನ ಮೇಲೆ ಕುಳಿತು ಮೂರ್ತಿಯು ಸುತ್ತಲೂ ನೋಡುತ್ತಿದ್ದ. ಕೊಳದ ಆಚೆಯ ತಡಿಯಲ್ಲಿ ಸೋಪಾನಗಳ ಮೇಲೆ ಯಾರೋ ಕುಳಿತಿರುವಂತೆ ಕಂಡಿತು. ಕತ್ತಲೆಯಾದುದರಿಂದ ಯಾರೆಂದು ಕಾಣಿಸದು. ತನ್ನಂತೆಯೇ ಗಾಳಿ ಸೇವನೆಗಾಗಿ ಯಾರೋ ಬಂದಿರಬಹುದೆಂದು ತಿಳಿದು 'ಯಾರದು' ಎಂದು ಕೂಗಿದ; ಉತ್ತರ ಬರಲಿಲ್ಲ. ಮತ್ತೆ ಕೂಗಿದ; ಈಗಲೂ ನಿರುತ್ತರ. ಇದರಿಂದ ಅವನ ಕುತೂಹಲ ಹೆಚ್ಚಿತು. ಅಲ್ಲಿ ಕುಳಿತವರು ಮನುಷ್ಯರಾಗಿದ್ದರೆ ತನಗೆ ಪ್ರತ್ಯುತ್ತರವೇಕೆ ಕೊಡಬಾರದು? ಮೂರ್ತಿಗೇಕೋ ಸ್ವಲ್ಪ ಅನುಮಾನವಾಯಿತು. ಅಮಾವಾಸ್ಯೆಯ ಹಿಂದಿನ ದಿನ; ಕತ್ತಲೆಯ ಹೊತ್ತು; ತಾನಿರುವುದು ಒಂಟಿಗನಾಗಿ; ಅಂತಹ ಕೊಳಗಳ ವಿಚಾರವಾಗಿ ಎಷ್ಟೋ ಕಥೆಗಳನ್ನು ಬೇರೆ ಕೇಳಿದ್ದ; ಇವೆಲ್ಲಾ ನೋಡಿದರೆ ತಾನು ಇಲ್ಲಿಗೆ ಬರಬಾರದಾಗಿತ್ತು ಎಂದುಕೊಂಡ. ಆದರೆ ಜನಿವಾರವಿದೆ, ಭಯವಿಲ್ಲ; ಅರುಣಮಂತ್ರ ಕೂಡ ಬಾಯಿಗೆ ಬರುತ್ತೆ; ಇಷ್ಟಕ್ಕೂ ಗಾಯತ್ರಿ ಪುನಶ್ಚರಣೆ ಮಾಡುತ್ತಿದ್ದರೆ ನನ್ನ ಹತ್ತಿರಕ್ಕೆ ಬರುವವರು ಯಾರು, ಎಂಬ ಧೈರ್ಯ. ಇಷ್ಟು ಯೋಚನೆಗಳೂ ನಿಮಿಷ ಮಾತ್ರದಲ್ಲಿ ಮಿಂಚಿನ ವೇಗದಿಂದ ಮನಸ್ಸಿನಲ್ಲಿ ಹೊಳೆದುವು. ಈ ಸಮಯಕ್ಕೆ, ಯಾರೋ ಲಾಂದ್ರವೊಂದನ್ನು ಹಿಡಿದುಕೊಂಡು ದೇವಾಲಯದೊಳಕ್ಕೆ ಪ್ರವೇಶ ಮಾಡಿದರು, ಆ ಲಾಂದ್ರದ ಬೆಳಕು ಅಲ್ಲಿ ಕುಳಿತಿದ್ದ ವ್ಯಕ್ತಿಯ ಮೇಲೆ ಬೀಳಲು ಮೂರ್ತಿಯ ಸಂಶಯವು ನಿವೃತ್ತಿಯಾಯಿತು. ಅಲ್ಲಿದ್ದಾತನು ಕಾವಿಬಟ್ಟೆಯನ್ನುಟ್ಟ ಯಾರೋ ಒಬ್ಬ ಮನುಷ್ಯ.

ವ್ಯಕ್ತಿಯ ಸ್ಥೂಲ ಪರಿಚಯವಾದೊಡನೆಯೇ ಮೂರ್ತಿಯು ಮೇಲಕ್ಕೆದ್ದು ಆತನಿದ್ದ ಸ್ಥಳಕ್ಕೆ ಹೋದನು. ಆತನೊಬ್ಬ ಬೈರಾಗಿ. ಕಾವಿ ಬಟ್ಟೆಗಳ ಉಡುಗೆ, ತಲೆಯಮೇಲೆ ಗಂಟುಹಾಕಿದ ಜಟೆ, ಬಲದ ಕೈಯಲ್ಲಿ ತ್ರಿಶೂಲ, ಇಷ್ಟೂ ಅವನ ಭೂಷಣಗಳು. ಬೈರಾಗಿಯು ಎಡದ ಕೈಮೇಲೆ ತಲೆಹೊತ್ತು ಮುಂಡಿಗೆ ಊರೆಗೊಟ್ಟು ಸೋಪಾನದ ಮೇಲೆ ಕುಳಿತಿದ್ದ. ಮೂರ್ತಿಯು ಹತ್ತಿರಹೋಗಿ ನಿಂತರೂ ಸಹ ತಿರುಗಿ ನೋಡಲಿಲ್ಲ. ಕೊಳದ ಕರಿನೀರಿನಲ್ಲಿ ಪ್ರತಿಬಿಂಬಿತವಾದ ಒಂದು ನಕ್ಷತ್ರವನ್ನು ನಟ್ಟ ದೃಷ್ಟಿಯಿಂದ ನೋಡುತ್ತಿದ್ದ. ಆತನು ಅಪರಿಚಿತ; ಅಲ್ಲದೆ ಆಗ್ಯೆ ಸ್ವಲ್ಪ ಹೊತ್ತಿನೊಳಗೇ ಅಲ್ಲಿಗೆ ಬಂದಂತೆ ತೋರಿತು. ಹಗಲಿನಲ್ಲಂತೂ ಅಲ್ಲಿ ಕಂಡಿರಲಿಲ್ಲ. ಸಂಜೆಯಲ್ಲಿ ಬಂದವನು ದೇವಾಲಯಕ್ಕೂ ಬರದೆ, ಮತ್ತಾವುದಾದರೂ ಬೀಡಾರಕ್ಕಾದರೂ ಹೋಗಿ ಸೇರಿಕೊಳ್ಳದೆ ಇಲ್ಲಿ ಇದೇಕೆ ಹೀಗೆ ಕುಳಿತಿರುವನೆಂಬುದು ಮೂರ್ತಿಗೆ ಅರ್ಥವಾಗಲಿಲ್ಲ. ಇನ್ನೇನು, ಇತ್ತಕಡೆ ತಿರುಗಿ ನೋಡಿಯಾನು ಎಂದು ಒಂದೆರಡು ನಿಮಿಷ ಕಾದನು; ಪ್ರಯೋಜನವಾಗಲಿಲ್ಲ. ಕೊನೆಗೆ ತಾನೇ ಎಚ್ಚರಿಸಬೇಕೆಂದುಕೊಂಡ. ಅಷ್ಟರಲ್ಲಿ, ಬೈರಾಗಿಯದೊಂದು ನಿಟ್ಟುಸಿರು ಕೇಳಿಸಿತು; ಅದು ಚಿಕ್ಕದು, ಆದರೂ, ಹೃದಯಭೇದಕವಾದುದು. ನೊಂದ ಹೃದಯದಲ್ಲಿ ಉರಿಯುತ್ತಿರುವ ದಾವಾನಲದಿಂದ ಹೊರಚಿಮ್ಮಿದ ಒಂದು ಸಣ್ಣ ಕಿಡಿಯಂತದು. ಈಗಲಾದರೂ ಬೈರಾಗಿಯು ತನ್ನ ಕಡೆ ನೋಡಬಹುದು ಎಂದು ಮೂರ್ತಿಯು ಆಲೋಚಿಸಿದ; ಅದೂ ನಿರರ್ಥಕ.

ನಿರೀಕ್ಷಿಸಿ ಮೂರ್ತಿಗೆ ಬೇಸರವಾಗಿ ತನ್ನ ಇರವನ್ನು ತಿಳಿಸುವಂತೆ ಒಮ್ಮೆ ಕೆಮ್ಮಿ 'ಯಾರು ನೀವು' ಎಂದು ಮಾತನಾಡಿಸಿದನು. ಇದನ್ನು ಕೇಳಿ ಬೈರಾಗಿಯು ಕುಳಿತ ಹಾಗೆಯೇ ತಲೆ ತಿರುಗಿಸಿ ಮೂರ್ತಿಯನ್ನು ನೋಡಿ ಪುನಃ ಮೊದಲಿನಂತೆಯೇ ಕುಳಿತ; ಒಂದು ಮಾತನ್ನೂ ಆಡಲಿಲ್ಲ. ಮಾತನಾಡಲು ಇಷ್ಟವಿಲ್ಲದಂತೆ ತೋರಿತು.

ಸ್ವಲ್ಪ ಹೊತ್ತಾದ ಮೇಲೆ ಮೂರ್ತಿಯು ಪುನಃ 'ಯಾರು

ನೀವು' ಎಂದು ಕೇಳಿದ. ಬೈರಾಗಿಗೆ ಈ ಪ್ರಶ್ನೆಯಿಂದ ಜುಗುಪ್ಸೆಯಾದಂತೆ ಕಂಡಿತು. ಅಸ್ಪಷ್ಟವಾಗಿ ಏನೇನೋ ಗೊಣಗಿಕೊಳ್ಳುತ್ತಾ ಆ ಸ್ಥಳವನ್ನೇ ಬಿಟ್ಟು ಹೊರಡಬೇಕೆಂದು ಮೇಲಕ್ಕೆದ್ದ. ತನ್ನ ಪ್ರಶ್ನೆಗೆ ತಕ್ಕ ಉತ್ತರ ಬಾರದುದನ್ನು ಕಂಡ ಮೂರ್ತಿಗೂ ಸ್ವಲ್ಪ ಅಸಮಾಧಾನವಾಯಿತು. ಆದರೂ ಅವನಾರೆಂಬುದನ್ನು ತಿಳಿಯದೆ ಬಿಡಕೂಡದೆಂಬ ಸಂಕಲ್ಪವಿರುವವನಂತೆ ಬೈರಾಗಿಯ ಎದುರಿಗೆ ಬಂದು ನಿಂತ; ನಿನ್ನನ್ನು ಹೋಗಗೊಡದೆ ದಾರಿಗೆ ಅಡ್ಡಗಟ್ಟುವೆನೆಂದು ಅದರ ಅರ್ಥ. ಹೊರಟವನಿಗೆ ಇದು ತಿಳಿಯಿತು.

'ನಾನು ಯಾರಾದರೆ ನಿಮಗೇನು ಸ್ವಾಮಿ? ನಾನೊಬ್ಬ ಪರದೇಶಿ.'

'ಅದು ಸರಿಯಾದ ಉತ್ತರವಲ್ಲ.'

'ಹಾಗಾದರೆ ನಾನೊಬ್ಬ ಬೈರಾಗಿ.'

'ಬೈರಾಗಿಯೆಂದು ನಿಮ್ಮ ವೇಷದಿಂದಲೇ ತಿಳಿಯುವುದು. ಆದರೆ....'

'ಏನು?'

'ಬಹಳ ಹೊತ್ತಿನಿಂದಲೂ ನೋಡುತ್ತಿದ್ದೇನು. ನೀವು ಯಾವುದೋ ಚಿಂತೆಯಲ್ಲಿ, ಯಾವುದೋ ವ್ಯಸನದಲ್ಲಿರುವಂತೆ ಕಾಣುವುದಲ್ಲ!'

'ನಿಜ್ಜ!'

'ಬೈರಾಗಿಯಾದವರಿಗೆ ಚಿಂತೆಯೂ, ವ್ಯಸನವು, ಇರುತ್ತದೆಯೇ!

ಬೈರಾಗಿಯು ಮಾತನಾಡಲಿಲ್ಲ; ಮತ್ತೊಂದು ನಿಟ್ಟುಸಿರು ಮಾತ್ರ ಬಿಟ್ಟ. ಇದನ್ನು ಕಂಡು ಮೂರ್ತಿಯು ಪುನಃ ಹೇಳಿದ—

'ನನ್ನ ಈ ಪ್ರಶ್ನೆಯಿಂದ ತಮಗೆ ಖೇದವುಂಟಾಯಿತೋ ಏನೋ. ಹೋಗಲಿ; ಅದನ್ನು ದಯವಿಟ್ಟು ಮರೆತುಬಿಡಿ. ಈಗ ಕತ್ತಲಾಗಿದೆ; ಇಷ್ಟು ಹೊತ್ತಿನಲ್ಲಿ ಇನ್ನೆಲ್ಲಿಗೂ ಹೋಗಲಾರಿರಿ. ಬನ್ನಿ, ದೇವಾಲಯದ ಹತ್ತಿರಕ್ಕೆ ಹೋಗೋಣ.'

'ಸ್ವಾಮಿ ತಾವು ಬಹಳ ಕರುಣಾಳುಗಳು. ನಾನು ನಿರ್ಭಾಗ್ಯ; ನನಗೆ ಯಾವ ಆಲಯವೂ ಬೇಡ. ಇಲ್ಲಿಯೇ ಇರುತ್ತೇನೆ. ನನ್ನ ಮನಸ್ಸು ಈ ದಿನ ಸರಿಯಾಗಿಲ್ಲ.'

'ನಿಮಗೆ ಸಮಾಧಾನವಾಗುವಂತೆ ನಾನೇನಾದರೂ ಉಪಕಾರ ಮಾಡಬಲ್ಲೆನೆ?'

'ದೇವರು ಕೈಬಿಟ್ಟವನನ್ನು ಮನುಷ್ಯರು ಎತ್ತಲಾರರು.'

'ಬೈರಾಗಿಗಳೇ!...........'

'ನನ್ನನ್ನು ಹಾಗೆ ಕರೆಯಬೇಡಿ. ತಿಮ್ಮನೆನ್ನಿ.'

'ಆಗಲಿ, ತಿಮ್ಮಯ್ಯ! ಗುಡಿಯೊಳಗೆ ಹೋಗೋಣ ಬನ್ನಿ. ದೇವರಿಗೆ ಅಭಿಷೇಕವೇದಿನ. ಈಗ ರಾತ್ರಿಯಾಮಗಳ ಪೂಜೆಗಳಾಗುತ್ತಿವೆ. ದೇವರನ್ನು ನೋಡಿ ತೀರ್ಥಪ್ರಸಾದ ಗ್ರಹಣಮಾಡಿದರೆ ದುಃಖ ಕಡಿಮೆಯಾಗುತ್ತದೆ.'

'ಸ್ವಾಮಿ! ನನಗೆ ನಿಮ್ಮ ದೇವರು ಬೇಡ. ನನ್ನ ದೇವರನ್ನು ಮನಸಾರ ನಾನೇ ಪೂಜೆಮಾಡುತ್ತಿದ್ದೆ. ಆ ದೇವರು ತಪ್ಪಿಸಿಕೊಂಡು ಹಾರಿಹೋಯಿತು. ಆದನ್ನೇ ಮನದಲ್ಲಿ ಕೂರಿಸಿ ಕಣ್ಣೀರಿನಿಂದ ಅಭಿಷೇಕ ಮಾಡಿದೆ. ದೇವರಿಗೆ ಬಹಳ ದಾಹನೆಂದು ಕಾಣುವುದು; ಮೇಲೆಹಾಕಿದ ನೀರನ್ನೇ ಕುಡಿದು, ಸುರಿಸುತ್ತಿದ್ದ ಕಣ್ಣಲ್ಲಿ ಸಹ ನೀರುಬರದಂತೆ ಮಾಡಿದ. ಅಂತಹ ದೇವರು ತೀರ್ಥವನ್ನು ನನಗೆ ಉಳಿಸಿರುತ್ತಾನೆಯೆ? ನಿಮ್ಮ ತೀರ್ಥಪ್ರಸಾದಗಳೆನಗೆ ಬೇಡ. ನಿಮ್ಮ ರುಣಿಯಾದ ನಿಮ್ಮ ದೇವರಿಗೆ ನಾನು ಮಾಡಿದ ತಪ್ಪುನೋಡಿ! ಎಲ್ಲವನ್ನೂ ಹೇಳಿಬಿಡುತ್ತೇನೆ. ನನ್ನ ಅಪರಾಧಕ್ಕೆ ಇದು ತಕ್ಕ ಶಿಕ್ಷೆಯೇ? ದೇವರಲ್ಲಿ ನ್ಯಾಯವಿದೆಯೆ? ಎಂದು ನೀವು ಹೇಳಿ. ಇಲ್ಲಿ ನಿಮ್ಮಮುಂದೇ ಅಲ್ಲ ಹೀಗೆನ್ನುವುದು; ಯಮನಮುಂದೆ ನನ್ನನ್ನು ನಿಲ್ಲಿಸಿದಾಗಲೂ ಇದೇ ಮಾತೇ; ಆ ಕಣ್ಣಿಲ್ಲದ ದೇವರನ್ನು ಮೊದಲು ವಿಚಾರಿಸಿ ಆನಂತರ ನನಗೆ ಶಿಕ್ಷೆ ವಿಧಿಸಲಿ.'

ಅಲ್ಲಿಂದ ಇಬ್ಬರೂ ಸೋಪಾನಗಳ ಮೇಲೆ ಕುಳಿತುಕೊಂಡರು. ಬೈರಾಗಿಯು ತನ್ನ ಕತೆಯನ್ನು ಹೇಳತೊಡಗಿದನು.

೨

''ಸ್ವಾಮಿ! ನಾನು ಹುಟ್ಟಿದುದು ಭೂಪಸಂದ್ರದಲ್ಲಿ. ನಮ್ಮ ತಂದೆ ಕರಿಯಣ್ಣ ಆ ಊರಿನಲ್ಲಿ ಆರಂಬ ಮಾಡಿಕೊಂಡು ಜೀವಿಸುತ್ತಿದ್ದ.

ಚಿಕ್ಕದೊಂದು ಮನೆ, ಪುಟ್ಟಸಂಸಾರ, ಅದಕ್ಕೆ ಸಾಕಾಗುವಂತೆ ೪–೫ ಎಕರೆ ಹೊಲ, ಇಷ್ಟೇ ನಮ್ಮಪ್ಪನ ಆಸ್ತಿ. ಇದ್ದುದರಲ್ಲಿಯೇ ತೃಪ್ತಿಪಟ್ಟುಕೊಂಡು ಸಂಸಾರ ನಡೆಸಿಕೊಳ್ಳುತ್ತಾ ಸಂತೋಷವಾಗಿಯೇ ಕಾಲ ಕಳೆಯುತ್ತಿದ್ದನಂತೆ. ಮೊದಲು ಮೊದಲು ನಮ್ಮ ತಾಯಿಗೆ ಹುಟ್ಟಿದ ಮಕ್ಕಳೆಲ್ಲವೂ ಸತ್ತು ಕೊನೆಗೆ ನಾನು ಮತ್ತು ನಮ್ಮಕ್ಕ ಇಬ್ಬರೇ ಉಳಿದೆವು. ನಮ್ಮ ತಂದೆಯ ಜ್ಞಾಪಕ ನನಗೆ ಅಷ್ಟಿಲ್ಲ; ಆತನು ಸಾಯುವಾಗ ನಾನು ಬಹಳ ಚಿಕ್ಕಹುಡುಗನಾಗಿದ್ದೆ. ಆದರೂ, ನನ್ನನ್ನು ಬಹು ಪ್ರೀತಿಯಿಂದ ಸಾಕುತ್ತಿದ್ದನೆಂದು ಮಾತ್ರ ಗೊತ್ತು. ಒಂದು ದಿನ ಯಾವುದೋ ಮಾತಿಗೆ ನನ್ನನ್ನು ನಮ್ಮ ತಾಯಿಯು ಎರಡು ಪೆಟ್ಟು ಹೊಡೆದುದಕ್ಕೆ ಮನೆಯಲ್ಲಿ ಅದೇ ಒಂದು ರಗಳೆಯಾದದ್ದು ಇನ್ನೂ ನೆನಪಿದೆ.

ನಮ್ಮೂರಿನಲ್ಲಿ, ನಮ್ಮ ಮನೆಗೆ ಸ್ವಲ್ಪ ದೂರದಲ್ಲಿ ಸಿಂಗಣ್ಣನ ಮನೆಯಿದೆ. ನಮ್ಮ ತಂದೆಗೂ ಆತನಿಗೂ ಬಹು ಸ್ನೇಹವಿತ್ತು. ಒಬ್ಬರೊಬ್ಬರಿಗೆ ಭೇದವೇ ಇರಲಿಲ್ಲವಂತೆ. ಈ ಸ್ನೇಹದ ಜೊತೆಗೆ ಬಾಂಧವ್ಯದ ಕಟ್ಟನ್ನೂ ಕಟ್ಟಿದರೆ ಇನ್ನೂ ಚೆನ್ನವೆಂದು ಅಂದುಕೊಳ್ಳುತ್ತಿದ್ದರು. ಹೀಗೆಯೇ ಒಂದು ದಿನ ಮಾತನಾಡುತ್ತ ಇರುವಾಗ 'ನಿನಗೆ ಹೆಣ್ಣು ಮಗುವಾದರೆ ನಮ್ಮ ತಿಮ್ಮನಿಗೆ ಕೊಡಬೇಕು ಸಿಂಗಾ' ಎಂದನಂತೆ ನಮ್ಮಪ್ಪ. ಆತನು ಸಹ 'ಆಗಲಿ' ಎಂದು ಒಪ್ಪಿಕೊಂಡ. ಸಿಂಗಣ್ಣನಿಗೆ ಹೆಣ್ಣುಮಗುವಾದುದನ್ನು ನಮ್ಮ ತಂದೆ ನೋಡಲೇ ಇಲ್ಲ; ಅಷ್ಟರಲ್ಲಿಯೇ ಕಣ್ಣುಮುಚ್ಚಿಕೊಂಡ. ಆದರೂ ಆದಿನ ಆಡಿದ ಮಾತು ನಿಂತುಹೋಯಿತು.

ಸಿಂಗಣ್ಣನು ಕ್ರಿಯಾವಂತ; ತನ್ನ ಸ್ನೇಹಿತನು ತೀರಿಹೋದರೂ ನಮ್ಮ ಮೇಲಿನ ಮಮತೆ ಕಡಿಮೆ ಮಾಡಲಿಲ್ಲ. ಪಾಪ, ಹೆಣ್ಣು ಹೆಂಗಸೊಬ್ಬಳು ಇಬ್ಬರು ಚಿಕ್ಕ ಮಕ್ಕಳನ್ನು ಕಟ್ಟಿಕೊಂಡು ಹೇಗೆ ಸಂಸಾರ ಮಾಡಬೇಕು ಎಂದು ತಿಳಿದು ಬಹುಮಟ್ಟಿಗೆ ಸಹಾಯ ಮಾಡುತ್ತಿದ್ದ. ಆತನ ಉಪಕಾರವನ್ನು ಈ ಹೊತ್ತಿನಲ್ಲಿ ನೆನೆಯಬೇಕು. ಆತನಿಲ್ಲದಿದ್ದರೆ ನಮ್ಮ ತಾಯಿಯ ಅವಸ್ಥೆಯೂ ನಮ್ಮಗಳ ಗತಿಯೂ

ಏನಾಗುತ್ತಿತ್ತೋ ಏನೋ! ಅಷ್ಟೇ ಅಲ್ಲ, ತಾನು ನಮ್ಮ ತಂದೆಗೆ ಹೇಳಿದ ಮಾತನ್ನೂ ಉಳಿಸಿಕೊಂಡ.

ನಮ್ಮ ಮನೆಗಳಲ್ಲಿ ತೊಟ್ಟಿಲುತಾಳಿಯೆಂದು ಕಟ್ಟುವ ವಾಡಿಕೆಯುಂಟು. ಹೆಣ್ಣು ಮಗುವು ಹುಟ್ಟುತ್ತಲೇ ಮುಂದೆ ಅದನ್ನು ಇಂತಹವರಿಗೇ ಕೊಟ್ಟು ಮದುವೆಮಾಡಬೇಕೆಂಬ ಸಂಕಲ್ಪವಿದ್ದರೆ ಆ ಹುಡುಗನಿಂದ ಶಿಶುವು ಮಲಗಿರುವ ತೊಟ್ಟಿಲಿಗೆ ತಾಳಿ ಕಟ್ಟಿಸುತ್ತಾರೆ. ಇದರಿಂದ ಮದುವೆಯಾದಹಾಗೇನೂ ಆಗಲಿಲ್ಲ. ಆದರೆ, ಇಬ್ಬರೂ ಬೇರೆ ಸಂಬಂಧ ಮಾಡಕೂಡದು. ನಿಂಗಣ್ಣನೂ ಹೀಗೆ ತಾಳಿ ಕಟ್ಟಿಸಬೇಕೆಂದು ಹೇಳಿದ; ನಮ್ಮ ತಾಯಿಗೆ ಅದೊಂದೂ ಬೇಕಿರಲಿಲ್ಲ; ಗಂಡನು ಹೇಳಿದ್ದ ಮಾತನ್ನು ನೆರವೇರಿಸುವುದಕ್ಕಾಗಿ ಹೂಗುಟ್ಟಿದಳು. ಆ ಶಾಸ್ತ್ರವೂ ಮುಗಿಯಿತು. ಈಗ ಅದೊಂದೂ ಜ್ಞಾಪಕವಿಲ್ಲ. ಅವರಿವರು ಹೇಳುತ್ತಿದ್ದ ಮಾತುಗಳಿಂದ ತಿಳಿದುದು, ಅಷ್ಟೇ. ಅದೇ ದಿನವೇ ಹುಡುಗಿಗೆ ಲಕ್ಷ್ಮಿಯೆಂದು ಹೆಸರಿಟ್ಟುದು.

ನಾನು ನಮ್ಮ ಮನೆಯಲ್ಲಿಯೂ, ಲಕ್ಷ್ಮಿಯು ತನ್ನ ತಂದೆಯ ಮನೆಯಲ್ಲಿಯೂ, ಬೆಳೆಯುತ್ತ ಬಂದೆವು. ನಾನು ನಿತ್ಯವೂ ಬಹಳ ಹೊತ್ತು ಅವರ ಮನೆಯ ಹತ್ತಿರವೇ ಆಡಿಕೊಂಡಿರುತ್ತಿದ್ದೆನು. ನಮ್ಮ ಬೆಳವಣಿಗೆಯ ಜೊತೆಗೆ ನಮ್ಮ ಪ್ರೀತಿಯೂ ಹೆಚ್ಚುತ್ತಿತ್ತು. ೭-೮ ವರ್ಷದವನಾಗಿದ್ದಾಗ ನಾನು ದನಗಳನ್ನು ಹೊಡೆದುಕೊಂಡು ಕಾಯಲು ಹೋಗುತ್ತಿದ್ದೆ. ಅಲ್ಲಿ ಗಿಡದ ಕೆಳಗೆ ಬಿದ್ದಿದ್ದ ಒಂದು ಬಿಕ್ಕೆಯ ಹಣ್ಣುಕಂಡರೂ ಸಹ ಅದನ್ನು ಲಕ್ಷ್ಮಿಗಾಗಿ ತರುತ್ತಿದ್ದೆ. ಕಾಡುಮಲ್ಲಿಗೆ, ಕಾಡು ಜಾಜಿ ಹೂಗಳಂತೂ ಎಷ್ಟೋ ದಿನ ತಂದು ಕೊಟ್ಟಿದೇನೆ. ಈ ತೆರದ ನನ್ನ ವಾತ್ಸಲ್ಯವನ್ನು ಕಂಡು ಅವರಿವರು ಕುಚೋದ್ಯಮಾಡುತ್ತಿದ್ದರು, 'ನೋಡಿದೆಯೋ! ಹೆಂಡತಿಯೆಂದರೆ ಈಗಾಗಲೇ ಎಷ್ಟು ವಿಶ್ವಾಸ' ಎಂದು. ಆದರೆ, ಆಗ, ನನಗೆ ಹೆಂಡತಿಯೆಂದರೇನೆಂಬುದೇ ತಿಳಿಯದು. ಆಕೆಯು ನನ್ನ ಆಟದ ಗೆಳತಿ ಎಂದಷ್ಟೇ ನಾನು ಅರಿತಿದ್ದುದು. ನಾನು ಹೊರಗೆ ನಾಲ್ಕು ಕಡೆ ತಿರುಗಬಲ್ಲೆ, ಅನುಭವಿಸಬಲ್ಲೆ; ಇನ್ನೂ ಪುಟ್ಟವಳಾದ, ಮುದ್ದು

ಹುಡುಗಿಯಾದ ಆ ನನ್ನ ಗೆಳತಿಯೂ ಇವೆಲ್ಲವನ್ನೂ ಎಲ್ಲಿ ಪಡೆದಾಳೆಂಬುದಷ್ಟೇ ನನ್ನ ಭಾವನೆ.

ಅವು ಸರಳವಾದ, ನಿಷ್ಕಪಟವಾದ, ಕಲ್ಮಷವಿಲ್ಲದ ಮನಸ್ಸಿನ ದಿನಗಳು; ಕೇವಲ ಬಾಲ್ಯ. ಗೆಳೆತನದಲ್ಲಿಯೇ, ಆಟದಲ್ಲಿಯೇ ನಮ್ಮ ಸ್ವರ್ಗ; ಸ್ವರ್ಗವೊಂದಿರುವುದೆಂಬ ಅರಿವು ಸಹ ಇಲ್ಲದೆ ಅದರ ಸುಖವನ್ನು ಆಗ ಅನುಭವಿಸುತ್ತೇವೆ. ಕೋಪತಾಪಗಳಿಲ್ಲ; ರಾಗದ್ವೇಷಗಳಿಲ್ಲ. ಆ ದಿನಗಳನ್ನು ನೆನೆಸಿಕೊಂಡರೆ, ದೇವರೇ! ಯಾವಾಗಲೂ ನಮ್ಮನ್ನು ಬಾಲಕರನ್ನಾಗಿಯೇ ಇಡಬಾರದಾಗಿತ್ತೆ; ನಮ್ಮನ್ನು ಮುಂದಕ್ಕೆ ತಳ್ಳಿ ಹೆಜ್ಜೆಹೆಜ್ಜೆಗೂ ಎಡಹುವಂತೆ ಮಾಡಿ ನೋಡುತ್ತಿದ್ದರೆ ಅದು ನಿನಗೆ ಸಮ್ಮತವೆ, ಎನಿಸುತ್ತದೆ.

ವರ್ಷಗಳು ಕಳೆದ ಹಾಗೆಲ್ಲ ನಮ್ಮ ಸ್ನೇಹವೂ ಹೆಚ್ಚಾಗುತ್ತ ಬಂದಿತು. ಲಕ್ಷ್ಮಿಯು ೮-೯ ವರ್ಷದಲ್ಲಿ ಒಂದೊಂದುದಿನ ನನ್ನೊಡನೆ ದನಗಳನ್ನು ಹೊಡೆದುಕೊಂಡು ಬರುತ್ತಿದ್ದಳು. ಹೊಲಗಳಲ್ಲಿ ಕೆಲಸ ಮಾಡುವಾಗ ಇಬ್ಬರೂ ಜೊತೆಯಲ್ಲೇ ಇರುತ್ತಿದ್ದೆವು. ಹುಲ್ಲು ತರುವಾಗ ತನ್ನ ಕೈಯಲ್ಲಾಗದೆ ಸೋತರೂ ಸಹ ನನ್ನ ಮೇಲೆ ಪೈಪೋಟಿಗೆ ಬರುತ್ತಿದ್ದಳು. ಹಾಗೆ ಸೋತಾಗಲೆಲ್ಲ ನನ್ನ ಮೇಲೆ ಸ್ವಲ್ಪ ಮುನಿಸಾಗುತಿತ್ತು; ಸ್ವಲ್ಪ ಹೊತ್ತು. ಹಿಂದೆಯೇ ಇಬ್ಬರೂ ಒಂದಾಗುತ್ತಿದ್ದೆವು. ಇದಲ್ಲದೆ ಇನ್ನೂ ಕೆಲವು ಚಿಕ್ಕ ಪುಟ್ಟವಿಷಯಗಳಿಗೆ ನಾವು ಜಗಳವಾಡುತ್ತಿದ್ದುದುಂಟು. ಆಗ ಒಬ್ಬರಿಗೊಬ್ಬರು ಮಾತನಾಡುತ್ತಿರಲಿಲ್ಲ. ಹಾಗೆ ಎಷ್ಟು ಕಾಲ ಇರಲಾದೀತು? ಏನಾದರೂ ಒಂದು ನೆಪಮಾಡಿಕೊಂಡು ಪುನಃ ಮಾತನಾಡಿಸುವುದು; ಹಿಂದಿನ ಕೋಪದದೆಸೆಯಿಂದ ಮೊದಲಿಗಿಂತಲೂ ಹೆಚ್ಚಾಗಿ ಪ್ರೀತಿಸುವುದು. ಒಂದೊಂದು ವೇಳೆ ಹೀಗೆ ನಾವೇ ಸಮಾಧಾನಕ್ಕೆ ಬರಲಾರದಾಗ ನಾನು ಹೋಗಿ ನಿಂಗಣ್ಣನ ಮುಂದೆ ಚಾಡಿಹೇಳುವುದು; ಲಕ್ಷ್ಮಿಯು ತನ್ನ ತಾಯಿಯ ಬಳಿ ದೂರುವುದು. ಆಗ ಇಬ್ಬರೂ ಸಹ 'ಈಗಾಗಲೆ ಹೀಗೆ ಕಚ್ಚಾಡಿ ಕಡಿದಾಡಿದರೆ ನೀವಿಬ್ಬರೂ ಮುಂದೆ ಹೇಗೆ ಸಂಸಾರಮಾಡುತ್ತೀರೋ ತಿಳಿಯದು' ಎನ್ನುತ್ತಿದ್ದರು. ಅಲ್ಲಿಂದ

ಇಬ್ಬರನ್ನೂ ಕರೆದು ತಿಂಡಿ ಕೊಟ್ಟು ರಾಜಿಮಾಡಿಕಳಿಸುತ್ತಿದ್ದರು. ಹೀಗೆ ನಾವು ನಮ್ಮ ಬಾಲ್ಯ ಕಳೆದುದು.

ನನ್ನ ಇಪ್ಪತ್ತನೆಯ ವರ್ಷದಲ್ಲಿ ನನಗೆ ಲಕ್ಷ್ಮಿಯನ್ನು ಕೊಟ್ಟು ಮದುವೆಯಾಯಿತು. ನನ್ನ ತಂದೆಯ ಮೇಲಿದ್ದ ವಿಶ್ವಾಸದಿಂದಲೋ ಏನೋ ಸಿಂಗಣ್ಣನು ನಮ್ಮಿಂದ ಆಗಾವು, ತೆರ, ಮುಂತಾದುವಾವು ವನ್ನೂ ತೆಗೆದುಕೊಳ್ಳಲಿಲ್ಲ. ಬೇರೆ ಕಡೆ ಮದುವೆಯಾಗಿದ್ದರೆ ಅದಕ್ಕೇ ನೂರಾರು ರೂಪಾಯಿ ಕೊಡಬೇಕಾಗಿತ್ತು. ಇದಲ್ಲದೆ, ಲಕ್ಷ್ಮಿಗೆ ನನ್ನಲ್ಲಿ ಅತ್ಯಂತ ಪ್ರೀತಿಯಿದ್ದುದರಿಂದ ವೀಳ್ಯಶಾಸ್ತ್ರವಾಗುವಾಗ ಸಮಯಕಾದು ನನ್ನನ್ನು ಕರೆದು 'ಮದುವೆಗಾಗಿ ಸಾಲವನ್ನೇನೂ ಮಾಡಬೇಡಿ. ಒಡವೆಗಳು ಎಷ್ಟಿದ್ದರಷ್ಟೇ ಸಾಕು' ಎಂದು ಹೇಳಿ ದಳು. ಮನೆಯವರ ಮುಂದೆಯೂ ಇದನ್ನೇ ಸೂಚಿಸಿದ್ದಳೋ ಏನೋ; ಆದರಿಂದಲೇ ಒಡವೆಗಳ ಖರ್ಚು ಹೆಚ್ಚು ಬೀಳಲಿಲ್ಲ; ಸುಲಭವಾ ಗಿಯೇ ಮದುವೆಯಾಯಿತು.

ಮೊದಲೇ ಸುಖಸಂತೋಷಗಳಿಂದ ಕೂಡಿದ್ದ ನಮ್ಮ ಮನೆ ಯನ್ನು ಲಕ್ಷ್ಮಿಯು ತನ್ನ ಪ್ರೇಮದಿಂದ, ಲಾವಣ್ಯದಿಂದ, ಮಾಧುರ್ಯ ದಿಂದ ಬೆಳಗುತ್ತಿದ್ದಳು. ಮನೆಯ ಹೊರಗೆ, ಮನೆಯೊಳಗೆ, ಅಡವಿ ಗೆಲಸಗಳಲ್ಲಿ ಮತ್ತು ಗೃಹಕಾರ್ಯಗಳಲ್ಲಿ ಎಲ್ಲೆಲ್ಲಿಯೂ ನನಗೊಂದು ಭುಜವು ಹೆಚ್ಚಿದಂತಾಗಿತ್ತು. ಪ್ರೇಮನಿಧಿಯಾದ ಮಡದಿಯು ತನ್ನ ಪ್ರಿಯನ ಸೌಖ್ಯಕ್ಕಾಗಿ ಏನುಮಾಡಬಲ್ಲಳೆಂಬುದು ಈಗ ತಿಳಿಯು ತ್ತಿದೆ; ಆಗ ಅದನ್ನು ಗಮನಿಸಲಾಗಲಿಲ್ಲ. ಏಕೆಂದರೆ, ಅದರಲ್ಲಿಯೇ ನಾನು ಮುಳುಗಿ ತೇಲುತ್ತಿದ್ದೆನು. ಲಕ್ಷ್ಮಿಯು ಬಂದಮೇಲೆ ಚಿಕ್ಕಂದಿನಿಂದಲೂ ಬಹಳ ದುಡಿದಿದ್ದ ನನ್ನ ತಾಯಿಗೂ ವಿಶ್ರಾಂತಿ ದೊರೆತಂತಾಯಿತು. ನನ್ನ ತಾಯಿಯು ಸುಮ್ಮನೆ ಕೂಡುವ ಸ್ವಭಾವ ದವಳಲ್ಲವಾದರೂ ಲಕ್ಷ್ಮಿಯು ಆಕೆಯನ್ನು ಏನೂ ಮಾಡಗೊಡುತ್ತಿರ ಲಿಲ್ಲ. ಇದೂ ನಮ್ಮ ನಾಟಕದಲ್ಲಿನ ಒಂದು ದೃಶ್ಯ; ಸಂಸಾರಸಾಗರ ದಲ್ಲಿ ಸುಖಕರವಾದ ಒಂದು ಅಲೆ.

ಆ ಅಲೆಯಲ್ಲಿ ನಾವಿಬ್ಬರೂ ತೇಲುತ್ತಿರುವಾಗ ನಡೆದ ಒಂದು

ಅಂಶವು ಇನ್ನೂ ಮನಸ್ಸಿನಲ್ಲಿ ಚಿತ್ರಿತವಾಗಿದೆ. ಒಂದು ದಿನ ಬೆಳಗ್ಗೆ ಸುಮಾರು ಒಂಬತ್ತು ಗಂಟೆಯಲ್ಲಿ ನಾನು ನಮ್ಮ ಹೊಲದೊಳಗೆ ಹುಲ್ಲು ಕೊಯ್ಯುತ್ತಿದ್ದೆ. ಲಕ್ಷ್ಮಿಯು ಆಗತಾನೇ ಬುತ್ತಿ ತಂದವಳು ಸ್ವಲ್ಪ ದೂರದಲ್ಲಿದ್ದ ಬೇಟೆಯ ಮರದ ಕೆಳಗೆ ಕುಳಿತಿದ್ದು ಇದ್ದಕ್ಕಿದ್ದಹಾಗೇ 'ಹಾವು, ಹಾವು' ಎಂದು ಕೂಗಿಕೊಂಡಳು. ಇದೇನೆಂದು ನಾನು ತಿರುಗಿನೋಡುವಷ್ಟರಲ್ಲಿ ಯಾವುದೋ ಒಂದು ಚಿಕ್ಕ ಹಾವು ನನ್ನ ಕಾಲನ್ನು ಕಚ್ಚಿ ಹೊರಟುಹೋಗುತ್ತಿತ್ತು. ಕೈಯಲ್ಲಿದ್ದ ಕುಡು ಗೋಲಿನಿಂದ ಹಾಗೆಯೇ ಅದಕ್ಕೆ ಎರಟು ಪೆಟ್ಟು ಹಾಕಿದೆ. ಅದುವರೆಗೆ ಲಕ್ಷ್ಮಿಯು ನನ್ನ ಹತ್ತಿರಕ್ಕೆ ಬಂದಿದ್ದಳು. ಕಾಲನ್ನು ಹಿಡಿದುಕೊಂಡು ನಾನು ಹಾಗೆಯೇ ಕುಳಿತೆ. ಕಚ್ಚಿದ ಸ್ಥಳದಿಂದ ರಕ್ತ ಸುರಿಯು ತ್ತಿತ್ತು. ಲಕ್ಷ್ಮಿಯೂ ಕುಳಿತಳು; ಗಾಯಗೊಂಡ ಭಾಗವನ್ನು ಅತ್ತಿತ್ತ ತನ್ನ ಬೆರಳುಗಳಿಂದ ಅದುಮಿ ಹಿಡಿದಳು; ಏನು ಮಾಡುವ ಳೆಂದು ನಾನು ನೋಡುವುದರೊಳಗಾಗಿ ಆಕೆಯ ಬಾಯಿಯು ಗಾಯದ ಮೇಲಿತ್ತು. ಇದನ್ನು ಕಂಡು 'ಬೇಡ, ಬೇಡ' ಎಂದು ಕೂಗಿಕೊಂಡೆ; ಅವಳು ಬಿಡಲಿಲ್ಲ. 'ನನಗೇನೂ ಆಗದು, ಸುಮ್ಮ ನಿರಿ' ಎಂದು ಹೇಳಿ ಆ ವಿಷದ ರಕ್ತವನ್ನು ಹೀರತೊಡಗಿದಳು. ಸ್ವಾಮಿ! ತನ್ನ ಜೀವದಮೇಲೆ ಕೂಡ ಮಮತೆಯಿಲ್ಲದ ಹೆಂಡತಿ ಯವಳು; ಆ ದಿನ ಆಕೆಯು ಹಾಗೆ ಧೈರ್ಯಮಾಡದಿದ್ದರೆ ನಾನು ಉಳಿಯುತ್ತಿರಲಿಲ್ಲ; ನನ್ನ ಸಾವಿನ ದುಃಖದಲ್ಲಿ ಖಂಡಿತ ಆಕೆಯೂ ಉಳಿಯುತ್ತಿರಲಿಲ್ಲ. ಇದನ್ನು ಕೇಳಿದಮೇಲಂತೂ ಊರಿಗೆ ಊರೇ ಲಕ್ಷ್ಮಿಯನ್ನು ಕೊಂಡಾಡುತ್ತಿದ್ದರು.

ಹೀಗೆ ದಿನಗಳು, ತಿಂಗಳುಗಳು, ವರ್ಷಗಳು ನಮ್ಮ ಗಮನಕ್ಕೆ ಬರದಂತೆ ಹಾರಿಹೋಗುತ್ತಿದ್ದುವು. ಕಾಲಪುರುಷನಿಗೆ ವೇಗ ಹೆಚ್ಚಿ ನಾಲ್ಕಾರು ವರ್ಷಗಳು ಆಡುತಾಡುತ ಕಳೆದುಹೋದುವು. ನನ್ನ ತಾಯಿಗೆ ಒಂದು ಆಶೆಯಿತ್ತು; ಸೊಸೆಯ ಹೊಟ್ಟೆಯಲ್ಲಿ ಹುಟ್ಟಿದ ಒಂದು ಮಗುವನ್ನು ನೋಡಿ, ಅದನ್ನೆತ್ತಿ ಮುದ್ದಾಡಿದರೆ ಸಾಕೆನ್ನು

ವುದು. ಆ ಆಶೆಯು ಪೂರ್ಣವಾಗಲಿಲ್ಲ. ನಮ್ಮ ಮುಂದಿನ ಜೀವನ ವನ್ನು ಆಕೆಯು ನೋಡಲಿಲ್ಲ. ಭಾಗ್ಯವಂತೆ.

೩

ಮಕ್ಕಳಿಲ್ಲವೆಂಬ ಕೊರತೆಯು ಮೊದಲು ಮೊದಲು ನಮಗೆ ಅಷ್ಟಾಗಿ ಇರಲಿಲ್ಲ. ಬರಬರುತ್ತ, ಲಕ್ಷ್ಮಿಯು ತನ್ನೋರಗೆಯ ಗೆಳತಿ ಯರು ಮಕ್ಕಳನ್ನು ಹೆತ್ತು ಅವನ್ನು ಮುದ್ದಿಕ್ಕುತಿರುವುದು ಕಂಡು ತನಗೂ ಮಕ್ಕಳಾಗಬಾರದಾಗಿದ್ದಿತೆ ಎಂದುಕೊಳ್ಳುವಳು. ಯಾವು ದಾದರೂ ನೆಪವೊದಗಿದಾಗ ಅದನ್ನು ವ್ಯಕ್ತಪಡಿಸುವಳು. ದಾರಿಯಲ್ಲಿ ಹೋಗುವ ಮಕ್ಕಳನ್ನೆಲ್ಲಾ ಎತ್ತಿಕೊಂಡು ಬಂದು ತಿಂಡಿಕೊಟ್ಟು ಮುದ್ದಾಡುವಳು. ದೇವರಿಗೆ ನಮಸ್ಕರಿಸುವಾಗಲೆಲ್ಲ ಎಂತಹುದಾ ದರೂ ಒಂದು ಕಂದನನ್ನು ಕರುಣಿಸು ಎಂದು ಪ್ರಾರ್ಥಿಸುವಳು. ನಾನು ಸಹ ಕಂಡಕಂಡ ದೇವರಿಗೆಲ್ಲ ಹರಕೆ ಹೊತ್ತೆ; ಕೈಲಾದ ಸೇವೆಯನ್ನೆಲ್ಲಾ ಮಾಡಿದೆ; ನಿಷ್ಫಲವಾಯಿತು. ನಮಗೆ ಮಕ್ಕಳಾಗ ಲಾರದೆಂಬ ಅನುಮಾನವು ದೃಢವಾಯಿತು. ಆದರಿಂದ, ಕೊನೆಗೆ ಯಾವುದಾದರೂ ಒಂದು ಮಗುವನ್ನು ಸಾಕಿಕೊಂಡು ಇರೋಣ ವೆಂದು ಲಕ್ಷ್ಮಿಯೊಂದಿಗೆ ಆಲೋಚಿಸಿದೆ; ನನ್ನ ಮಾತಿಗೆ ಅವಳು ಎಂದಿಗೂ ಪ್ರತಿ ಹೇಳಿದವಳಲ್ಲ; ಇನ್ನು ಇದಕ್ಕೆ ಹೇಳುವಳೇ? ನಾವಿಬ್ಬರೂ ವಿಮರ್ಶೆಮಾಡಿ ನನ್ನ ಅಕ್ಕನ ಮಗುವೊಂದನ್ನು ಕರೆತರ ಬೇಕೆಂದು ನಿರ್ಧರಿಸಿದೆವು.

ಅಕ್ಕನ ಗಂಡನೂರು ನಮ್ಮ ಹಳ್ಳಿಗೆ ೮-೯ ಮೈಲಿ ದೂರ. ಒಂದು ದಿನ ಬೆಳಗ್ಗೆ ಹೊರಟು ಅಲ್ಲಿಗೆ ಹೋಗಿ ಈ ಪ್ರಸ್ತಾಪವೆತ್ತಿದೆ. ಆಕೆಗೇನೋ ಸಂಪೂರ್ಣವಾಗಿ ಇಷ್ಟ; ಆದರೆ ಗಂಡನು ಒಪ್ಪುವುದು ಸ್ವಲ್ಪ ಕಷ್ಟವಾಯಿತು; ಆತನದು ಸ್ವಲ್ಪ ಸಿಡುಕು ಪ್ರಕೃತಿ; ಸ್ವಭಾವ ಸರಳವಾದುದಲ್ಲ. ಆತನ ಮೇಲಿನ ದ್ವೇಷದಿಂದ ಈ ಮಾತಾಡುತ್ತಿಲ್ಲ; ವಸ್ತುತಃ ಆತನ ಗುಣವೇ ಅಂತಹದು. ಎಷ್ಟೆಷ್ಟೋ ಆಕ್ಷೇಪಣೆ ಗಳನ್ನು ತಂದೊಡ್ಡಿದ. ಅವೆಲ್ಲಕ್ಕೂ ನಮ್ಮಕ್ಕನೇ ಸಮಾಧಾನ ಹೇಳಿ ದಳು. ಮಗುವನ್ನು ಮರುದಿನವೇ ಕರೆದುಕೊಂಡು ಬಂದೆ.

ಆ ಮಗುವನ್ನು ನಮ್ಮ ಮನೆಗೆ ತಂದುದೇ ಇಷ್ಟಕ್ಕೂ ಮೂಲ. ತಾನು ಕೆಟ್ಟುದಲ್ಲದೆ ನಮ್ಮನ್ನೂ ಕೆಡಿಸಿತು. ನಾನು ಕರೆತಂದಾಗ ಅದಕ್ಕಾಗಲೇ ನಾಲ್ಕು ವರ್ಷ ತುಂಬಿದ್ದಿತು. ಲಕ್ಷ್ಮಿಗೆ ಅದನ್ನು ಕಂಡರೆ ಏನೋ ದೊಡ್ಡ ಸಿರಿ. ನಾವೇನೋ ಬಡವರೇ ಹೌದು; ಆದರೆ ಭಾಗ್ಯವಂತರ ಮಕ್ಕಳಿಗೆ ನಮ್ಮ ಮಗುವಿಗಿಂತಲೂ ಹೆಚ್ಚು ಸೌಖ್ಯವಿನ್ನೇನಿರುವುದೋ ಕಾಣೆ; ಲಕ್ಷ್ಮಿಯು ಅದನ್ನು ತನ್ನ ಕಣ್ಣಲ್ಲೇ ಇಟ್ಟು ಮುಚ್ಚಿಟ್ಟುಕೊಳ್ಳುತ್ತಿದ್ದಳು; ನನ್ನ ಅಕ್ಕನ ಮಗುವಾದುದರಿಂದ, ನನ್ನ ಕಡೆಯ ಬಳಗಕ್ಕೆ ಸೇರಿದುದರಿಂದ, ಆದರಲ್ಲಿ ಇನ್ನೂ ಪ್ರೀತಿ ಹೆಚ್ಚು. ಮಗುವು ಕೂಡ ಬಹಳ ಚಾಲೂಕಾದದ್ದು; ಬಂದ ಹಲವು ದಿನಗಳಲ್ಲಿಯೇ ಪಳಕೆಯಾಗಿಬಿಟ್ಟಿತು. ಆದರೆ ತುಂಟತನ ಹೆಚ್ಚು. ಅದರ ತುಂಟತನವು ಸಹ ಲಕ್ಷ್ಮಿಗೆ ಸಂತೋಷವೇ. ಅದು ಚೇಷ್ಟೆ ಮಾಡಿದಷ್ಟೂ ತಾನು ಹಿಗ್ಗುತ್ತಿದ್ದಳು. ಹೆಚ್ಚೇನು ಆ ಮಗುವೇ ತನ್ನದೆಂದು ಭಾವಿಸಿ ತನಗೆ ಮಕ್ಕಳಾಗಲಿಲ್ಲವೆಂಬ ವ್ಯಸನವನ್ನು ಬಹುಮಟ್ಟಿಗೆ ಮರೆತಳು. ‘ಮಕ್ಕಳು ಯಾರಾದರೇನು? ನನ್ನ ಹೊಟ್ಟೆಯಲ್ಲಿ ಹುಟ್ಟದ ಮಾತ್ರಕ್ಕೆ ಇದು ಮಗುವಲ್ಲವೆ? ಸಾಕಿದರೆ ಇದೇ ನನ್ನ ಮಗುವಾಗುವುದು’ ಎಂದು ಹೇಳುತ್ತಿದ್ದಳು.

ಮಗುವಿನ ತಂದೆ, ನನ್ನ ಭಾವ, ಆಗಾಗ್ಯೆ ಬಂದು ನೋಡಿಕೊಂಡು ಹೋಗುತ್ತಿದ್ದ. ಒಂದು ದಿನ ಆತನು ಬಂದಾಗ ಮಗುವು ಅಳುತ್ತ ಇತ್ತಂತೆ. ನಾನು ಮನೆಯಲ್ಲಿರಲಿಲ್ಲ; ಹೊಲದ ಹತ್ತಿರ ಇದ್ದೆ. ಬೆಳಗಿನಿಂದಲೂ ಏತಕ್ಕೋ ರಗಳೆ ಮಾಡುತಿದ್ದ ಮಗುವು ಲಕ್ಷ್ಮಿಯ ಹಿಂದೆ ಹಿಂದೆ ತಿರುಗುತ್ತಾ ಅಡಕಲು ಸಾಲಿನ ಕೋಣೆಗೆ ಹೋಯಿತಂತೆ. ಅಲ್ಲಿ ಅದು ಏನು ಮಾಡಿತೋ ಏನೋ, ಒಂದು ಸಾಲಿನಲ್ಲಿ ಪೇರಿಸಿಟ್ಟಿದ್ದ ೪-೫ ಗಡಿಗೆಗಳು ಉರುಳಿಕೊಂಡು ಒಡೆದು, ಅವುಗಳಲ್ಲಿದ್ದ ಕಾಳುಕಡ್ಡಿಯೆಲ್ಲಾ ಚೆಲ್ಲಾಪಿಲ್ಲಿಯಾಯಿತಂತೆ. ಆದರಿಂದ ಸ್ವಲ್ಪ ಸಿಟ್ಟುಬಂದು ಗದರಿಸಿ ಒಂದು ಪೆಟ್ಟು ಹಾಕಿದುದಕ್ಕೇ ಮಗುವು ಅಷ್ಟು ಅಳುತ್ತಿತ್ತು. ಅಲ್ಲದೆ, ನನ್ನ ಭಾವ ಬರುವ ಹೊತ್ತಿಗೆ ಲಕ್ಷ್ಮಿಯು ತಮ್ಮ ಪುಟ್ಟರಂಗನು ಹತ್ತಿರ ನಿಂತಿದ್ದವನು ‘ನಿನಗೆ

ಹಾಗೇ ಆಗಬೇಕು' ಎನ್ನುತ್ತಿದ್ದ; ಒಳಗಿನಿಂದ ಲಕ್ಷ್ಮಿಯು 'ಬಿಡೋ. ಅವನ ಹತ್ತಿರವೇನು, ಕೆಟ್ಟ!' ಎನ್ನುತ್ತಿದ್ದಳು. ಇದನ್ನು ಭಾವನು ತಪ್ಪು ಅಭಿಪ್ರಾಯಮಾಡಿಕೊಂಡ. ಲಕ್ಷ್ಮಿಗೆ ಆ ಮಗುವಿನ ಮೇಲೆ ವಿಶ್ವಾಸವಿಲ್ಲವೆಂದು ಭಾವಿಸಿದ. ನಾನೂ, ಇತರರೂ, ಸಮಾಧಾನ ಹೇಳದಿದ್ದರೆ ಆ ದಿನವೇ ಮಗುವನ್ನು ಹಿಂದಕ್ಕೆ ಕರೆದುಕೊಂಡು ಹೋಗುತ್ತಿದ್ದ. ಹಾಗೆ ಹೋಗಿದ್ದರೂ ಚೆನ್ನಾಗಿದ್ದಿತೆಂದು ಈಗೆನಿಸುತ್ತದೆ.

ಇಂದಿಗೆ ಸರಿಯಾಗಿ ಎರಡು ವರ್ಷಗಳಾಯಿತು; ಇದೇ ಶಿವರಾತ್ರಿಯ ದಿನ; ಬೆಳಗ್ಗೆ ಬಿಲ್ವಪತ್ರೆಯನ್ನು ಬಿಡಿಸಿಕೊಂಡು ಬರುವುದಕ್ಕೆಂದು ನಾನು ಶ್ಯಾನುಭೋಗರ ತೋಟದಕಡೆ ಹೋಗಿದ್ದೆ. ಲಕ್ಷ್ಮಿಯು ಕುಡಿಯುವ ನೀರಿಗೆಂದು ನದಿಯ ಬಳಿಗೆ ಹೋದಳು. ಮಗುವು ಸಹ ಅವಳನ್ನು ಹಿಂಬಾಲಿಸಿತು; ಬೇಡವೆಂದರೆ ಕೇಳಲಿಲ್ಲ. ನದಿಯ ಬಳಿಯಲ್ಲಿ ಎಷ್ಟೋ ಹುಷಾರಾಗಿದ್ದಳು ಲಕ್ಷ್ಮಿ. 'ಹತ್ತಿರ ಬರಬೇಡ' ಎಂದು ಕೂಗಿಕೊಳ್ಳುತ್ತಿದ್ದಳು. ಆದರೆ ತುಂಟ ಹುಡುಗ ಕೇಳಲಿಲ್ಲ. ಅವಳು ನೀರುತುಂಬಿಕೊಂಡು ಬರುವುದರೊಳಗಾಗಿ ತಾನೂ ನೀರೊಳಕ್ಕೆ ಓಡಿಬಂದುಬಿಟ್ಟ. ಬಂದ ರಭಸದಲ್ಲಿ ಕಾಲು ಜಾರಿತು; ಹಿಂದೆಯೇ ನದಿಯ ಪಾಲಾದ. ಕೂಡಲೆ ಲಕ್ಷ್ಮಿಯು ಸಹಾಯಕ್ಕೆಂದು ಕೂಗಿಕೊಂಡಳು. ಮಗುವು ಪ್ರವಾಹದಲ್ಲಿ ಹೊಡೆದುಕೊಂಡು ಹೋಗುತ್ತಿರುವುದು ಕಂಡಿತು; ಅಳುತ್ತಾ ಒಮ್ಮೆ ಕೈಯೆತ್ತಿತಂತೆ; ಅದು ತಡೆಯಲಾಗಲಿಲ್ಲ; ಹೇಗಾದರೂ ಮಾಡಿ ಅದನ್ನುಳಿಸಬೇಕೆಂದು ಹಿಂದುಮುಂದು ನೋಡದೆ ತಾನೂ ನೀರಿನಲ್ಲಿ ಧುಮುಕಿದಳು. ಸ್ವಲ್ಪ ಮಟ್ಟಿಗೆ ಈಜು ಸಹ ಬರುತ್ತಿತ್ತು; ನದಿಯಲ್ಲಿ ಈಜುವ ಮಟ್ಟಿಗೆ ತಿಳಿದಿರಲಿಲ್ಲ.

ಲಕ್ಷ್ಮಿಯು ಕೂಗಿಕೊಂಡುದನ್ನು ಕಂಡು ಅಲ್ಲಲ್ಲಿ ಸಮೀಪದಲ್ಲಿದ್ದವರು ಓಡಿಬಂದರು. ಅವರಲ್ಲಿ ಕೆಲವರು ಬೇಗನೆ ನೀರಿನಲ್ಲಿ ಧುಮುಕಿ ಪ್ರವಾಹದಲ್ಲಿ ಪ್ರಜ್ಞೆತಪ್ಪಿದ್ದ ಆಕೆಯನ್ನು ಎಳೆತಂದರು. ಮಗುವು ಮಾತ್ರ ಸಿಕ್ಕಲಿಲ್ಲ. ಬಹುದೂರ ಹೊರಟುಹೋಗಿದ್ದಿತು.

ಈ ಸಮಾಚಾರ ನನಗೆ ತಿಳಿಯುತ್ತಲೇ ನಾನು ಸಿಟ್ಟಿಲ್ಲದವನಂತೆ ನದಿಯ ಬಳಿಗೆ ಓಡಿಹೋದೆ; ಸ್ವಲ್ಪ ಶುಶ್ರೂಷೆ ಮಾಡಿದ ಮೇಲೆ ಲಕ್ಷ್ಮಿಗೆ ಎಚ್ಚರಿಕೆಯಾಯಿತು. ಕಣ್ಣುತೆಗೆದ ಒಡನೆಯೇ 'ಮಗು ವೆಲ್ಲಿ' ಎಂದು ಕೇಳಿದಳು. ನಾನೇನು ಹೇಳಲಿ ಅದಕ್ಕೆ?

ಮಗುವು ಹೋದ ದಿನದಿಂದಲೂ ಮನೆಯಲ್ಲಿನ ಸಂತೋಷವು ಹಾಳಾಯಿತು. ಲಕ್ಷ್ಮಿಯು ಬಾರಿಬಾರಿಗೂ 'ಅಯ್ಯೋ! ಕಂಡವರ ಮಗುವನ್ನು ತಂದು ನದಿಯಪಾಲುಮಾಡಿದೆನಲ್ಲಾ!' ಎನ್ನುವಳು. 'ನಾನು ನಿರ್ಭಾಗ್ಯೆ' ಆದರಿಂದಲೇ ದೇವರು ನನಗೆ ಮಕ್ಕಳನ್ನು ಕೊಡಲಿಲ್ಲವೆಂದು ತಿಳಿದು ಸಹ ಆ ಮಗುವನ್ನೇಕೆ ಕರೆತಂದೆ' ಎಂದು ಹಂಬಲಿಸುವಳು. ಅವಳನ್ನು ಸಮಾಧಾನಮಾಡಬೇಕೆಂದು ನಾನೆಷ್ಟು ಪ್ರಯತ್ನಮಾಡಿದರೂ ಸಾಧ್ಯವಾಗುತ್ತಿರಲಿಲ್ಲ.

ನಮ್ಮ ದುರ್ವಿಧಿಯು ಇಷ್ಟಕ್ಕೇ ತೃಪ್ತನಾಗಲಿಲ್ಲ. ಒಂದು ದಿನ ಬೆಳಗ್ಗೆ ಎದ್ದು ಇನ್ನೂ ಬಾಗಿಲನ್ನು ತೆಗೆದೆವೋ ಇಲ್ಲವೋ, ಅಷ್ಟು ಹೊತ್ತಿಗೆ ಇಬ್ಬರು ಪೋಲೀಸಿನವರು ನಿಂತಿದ್ದರು; ನನ್ನ ಹೆಂಡತಿ ಯನ್ನು, ನಿರಪರಾಧಿಯಾದ ನನ್ನ ಲಕ್ಷ್ಮಿಯನ್ನು ಠಾಣೆಗೆ ಹಿಡಿದು ಕೊಂಡು ಹೋಗುವುದಕ್ಕೆಂತ ಬಂದಿದ್ದು. ಮಗುವನ್ನು ಅವಳೇ ಕೊಲೆಮಾಡಿದಳೆಂಬ ಆಪಾದನೆ. ಇದು ಕೇಳಿ ನನಗೆ ಬರಸಿಡಿಲು ಬಡದಂತಾಯಿತು; ಕಣ್ಣುಕತ್ತಲಿಟ್ಟಿತು; ಲಕ್ಷ್ಮಿಯಂತೂ ನಿಂತ ಹಾಗೆಯೇ ನಡುಗತೊಡಗಿದಳು; ಕಣ್ಣುಗಳಲ್ಲಿ ನೀರು ಸದ್ದಿಲ್ಲದ ಪ್ರವಾಹದಂತೆ ಸುರಿಯುತ್ತಿತ್ತು. ಗಟ್ಟಿಯಾಗಿ ಅಳುವುದಕ್ಕೆ ಸಹ ಬರದು ಅವಳಿಗೆ; ಅಷ್ಟು ಮೃದುಸ್ವಭಾವ. ಏನಾದರೇನು! ಕಲ್ಲು ಮನಸಿನವರು ಮರುಗುವುದುಂಟೆ? ಬಿಡದೆ ಲಕ್ಷ್ಮಿಯನ್ನು ಠಾಣೆ ಗೊಯ್ದರು. ನಾನೇ, ನಾನೇ, ಈ ಪಾಪಿ ಕೈಗಳಿಂದ ಕರೆದುಕೊಂಡು ಹೋಗಿ ಬಿಟ್ಟೆ, ನನ್ನ ಮಾವನ ಮನೆಯವರು, ಊರಿನವರು, ಠಾಣೆಯ ತುಂಬ ನೆರೆದಿದ್ದರು. ಎಲ್ಲರೂ ಕಣ್ಣೀರು ಸುರಿಸುತ್ತಿದ್ದರು. ಇನ್ನು ಹೆಚ್ಚಿಗೆ ಏನುಮಾಡಿಯಾರು? ನಾನು ಮಧ್ಯಾಹ್ನದ ವರೆಗೂ ಅಲ್ಲಿಯೇ ಕುಳಿತಿದ್ದೆ. ಹತ್ತಿರದಲ್ಲಿ ನಿಂಗಣ್ಣನು ಸಮಾಧಾನಮಾಡು

ತ್ತಿದ್ದ. ಜಾಮೀನು ಮೇಲೆ ಬಿಡಿಸಿಕೊಂಡು ಬರುವೆವೆಂದೂ, ಮೊಕದ್ದಮೆಯಲ್ಲಿ ಈ ಆಪಾದನೆಯನ್ನು ಹೊಡೆಸಿಹಾಕಲು ಸರ್ವ ಪ್ರಯತ್ನಮಾಡುವೆನೆಂದೂ ಭರವಸೆಕೊಟ್ಟ. ಈ ಕೇಸು ನಿಲ್ಲಲಾರ ದೆಂದೇ ನನಗೂ ನಂಬಿಕೆ ತಟ್ಟಿತು.

ಮುಂದೆ ಕೆಲವು ದಿನಗಳಲ್ಲೇ ವಿಚಾರಣೆಯಿದ್ದಿತು. ಏನು ಮಾಡಬೇಕೆಂದು ನಾವು ನಾವು ಆಲೋಚಿಸಿ ಒಬ್ಬ ಪ್ರಸಿದ್ಧನಾದ ವಕೀಲನನ್ನಿಟ್ಟೆವು; ಅವನು ಕೇಳಿದಷ್ಟು ಹಣ ಸುರಿದೆವು; ತಿಳಿಯ ಬೇಕಾದ ವಿಷಯಗಳನ್ನೆಲ್ಲಾ ಹೇಳಿದೆವು. ಮೊದಲನೆಯ ದಿನವೇ ಬಿಡಿಸಿಬಿಡುತ್ತೇನೆಂದು ಅವನು ಜಂಭ ಕೊಚ್ಚಿದ; ಬರಿಯ ಜಂಭ ವಷ್ಟೇ ಹೊರತು ಲಕ್ಷ್ಮಿಯು ಹೊರಗೆ ಬರಲಾಗಲಿಲ್ಲ. ಸಾಲದುದಕ್ಕೆ ಈ ಮೊಕದ್ದಮೆಯು ಸೆಷನ್ಸಿಗೆ ಹೋಯಿತು.

ಸ್ವಾಮಿ! ಆಗಲಂತೂ ನಾನು ಪಟ್ಟ ಶ್ರಮ ದೇವರು ಬಲ್ಲ. ಕಟ್ಟಬಾರದವರ ಕಾಲು ಕಟ್ಟಿದೆ; ಮಾಡಬಾರದ ಹೀನಕೆಲಸಗಳನ್ನೆಲ್ಲ ಮಾಡಿದೆ; ಕೇಳಬಾರದ ಮಾತುಗಳೆಲ್ಲ ಕೇಳಿದೆ; ಯಾರಿಂದಲೇ ಆಗಲಿ, ಯಾವುದರಿಂದಲೇ ಆಗಲಿ, ನನ್ನ ಲಕ್ಷ್ಮಿಗೆ ಬಿಡುಗಡೆಯಾದೀತೇನೋ ಎಂದು. ಆ ಕಣ್ಣಿಲ್ಲದ, ನಿರ್ದಯನಾದ ದೇವರ ಕಠಿಣ ಚಿತ್ತಕ್ಕೆ ಅದು ಬರಲಿಲ್ಲ. ಇದಕ್ಕೆ ಸಹಾಯವಾಗಿ ಇದರಲ್ಲಿ ನನ್ನ ಭಾವ ನೊಬ್ಬ ಸಾಕ್ಷಿಯಾಗಿದ್ದ. ಅವನು ಮಾಡಿದ ಕೇಡೇ ಇಷ್ಟು. ತನ್ನ ಮಗುವು ಅಂದು ಅಳುತ್ತಿದ್ದುದನ್ನೇ ಮನಸ್ಸಿನಲ್ಲಿಟ್ಟುಕೊಂಡು ಆ ಕಥೆಯೆಲ್ಲಾ ಒಂದಕ್ಕೆ ಹತ್ತಾಗಿ ಹೇಳಿದ. ಲಕ್ಷ್ಮಿಯು ತನ್ನ ತಮ್ಮನ ಮೇಲಿನ ವಿಶ್ವಾಸದಿಂದ ಈ ಮಗುವನ್ನು ಕಾಡುತ್ತಿದ್ದಳೆಂದು ನುಡಿದ. ಪುಟ್ಟರಂಗನೇನೋ ಆಗಾಗ್ಯೆ ನಮ್ಮ ಮನೆಗೆ ಬರುತ್ತಿದ್ದುದುಂಟು. ಆದರೂ ಸಾಕುಮಗುವಿನ ಮೇಲಿರುವಷ್ಟು ಪ್ರೀತಿ ಲಕ್ಷ್ಮಿಗೆ ತನ್ನ ತಮ್ಮನಮೇಲೂ ಇರಲಿಲ್ಲ.

ಅಂತೂ, ಲಕ್ಷ್ಮಿಯೇ ಕೊಲೆಮಾಡಿದಳೆಂದು ನ್ಯಾಯಾಧಿ ಪತಿಯು ತೀರ್ಪುಕೊಟ್ಟ. 'ತನ್ನ ತಮ್ಮನನ್ನು ಸಾಕಿಕೊಳ್ಳಬೇಕೆಂಬ ಇಚ್ಛೆಯಿಂದ ಈ ಮಗುವನ್ನು ನದಿಯೊಳಕ್ಕೆ ಮನಃಪೂರ್ವಕವಾಗಿ

ತಳ್ಳಿರುತ್ತಾಳೆಂದು ನಾನು ನಂಬುತ್ತೇನೆ' ಎಂದು ಹೇಳಿದ. ನನ್ನ ಸಾಕ್ಷಿಯಾಗಿ ನಾನು ಹೇಳುತ್ತೇನೆ; ಲಕ್ಷ್ಮಿಯು ಅಂತಹವಳಲ್ಲ. ಖಂಡಿತ ಅವಳಿಗೆ ಆ ತೆರದ ಅಭಿಪ್ರಾಯವಿರಲಿಲ್ಲ. ಜಡ್ಜಿಯು ಬರಿಯ ಸುಳ್ಳು ಆಧಾರದ ಮೇಲೆ ಊಹಿಸಿದವನು; ನಾನಾದರೋ ಹುಟ್ಟಿದಾಗಿನಿಂದಲೂ ಹಗಲೂ ರಾತ್ರಿಯೂ ಅವಳನ್ನು ಕಂಡವನು. ಹೇಗೂ ಅಪರಾಧವು ಸ್ಥಿರವಾಯಿತು, ಅದಕ್ಕೆ ಶಿಕ್ಷೆ—ಶಿವ ಶಿವಾ, ದ್ವೀಪಾಂತರವಾಸ.

ಇಷ್ಟಾದರೂ ಅವಳನ್ನು ಬಿಡಿಸುವ ಪ್ರಯತ್ನ ಕಡಿಮೆಮಾಡಲಿಲ್ಲ. ಇದ್ದ ಆಸ್ತಿಯನ್ನೆಲ್ಲ ಮಾರಿ 'ಅಪೀಲು' ಮಾಡಿದೆ. ಜಡ್ಜಿಯನ್ನೇ ಮುಖತಃ ಕಂಡು ನನ್ನ ಗೋಳು ಹೇಳಿಕೊಂಡೆ; ಏನಾದರೂ, ಫಲವಿಲ್ಲದಾಯಿತು. 'ಕೆಳಗಿನ ಕೋರ್ಟಿನವರು ಬರೆದುದನ್ನು ಕೆಡಿಸುವಂತಿಲ್ಲ' ಎಂದು ಬಿಟ್ಟರು. ಇಷ್ಟಾದ ಮೇಲೆ 'ನನ್ನ ಹೆಂಡತಿಯನ್ನು ದ್ವೀಪಾಂತರವಾಸಕ್ಕೆ ಕಳುಹಿಸುವ ದಿನ ಬಂತು. ಇಷ್ಟವಿದ್ದರೆ ಬಂದು ದಿನ ಬಂದು ನೋಡಿ ಹೋಗಬಹುದು' ಎಂದು ನನಗೆ ತಾಕೀತು ಬಂತು. ನಾನು ಹಾಗೆಯೇ ಹಾರಿಹೋದೆ.

ಅದೇ ನಮ್ಮ ಕಡೆಯ ದರ್ಶನ. ನನ್ನ ಮುದ್ದು ಅರಗಿಳಿಯು, ನನ್ನ ಬಾಲ್ಯದ ಗೆಳತಿಯು, ಯೌವನದ ನನ್ನ ಮಾರ್ಗಗಾಮಿನಿಯು, ನನ್ನ ಪ್ರೇಮಸಿಧಿಯು, ನನ್ನ ಲಕ್ಷ್ಮಿಯು, ನನ್ನನ್ನು ಬಿಟ್ಟು ಹೋಗುತ್ತಿದ್ದಳು. ಒಂದು ದಿನವೂ ನನ್ನನ್ನು ಬಿಟ್ಟರಿಯದ ಬಾಲೆಯು ಆ ಜೀವವೂ ಅಗಲಿರಬೇಕು. ವಿದೇಶದಲ್ಲಿ—ಅದು ಎಲ್ಲಿಯೋ ಏನೋ—ಅತ್ತರೆ ಸಮಾಧಾನ ಮಾಡುವರಿಲ್ಲ, ಹಸಿದರೆ ಅನ್ನವಿಡುವರಿಲ್ಲ, ಭಯಗೊಂಡರೆ ಧೈರ್ಯಕೊಡುವರಿಲ್ಲ, ಅಲ್ಲಿ ಮನುಷ್ಯರಾದರೂ ಇರುವರೋ ಇಲ್ಲವೆ ಬರಿಯ ಕಾಡುಮೃಗಗಳೇನೋ, ಇಂತಹ ಕಡೆಯಲ್ಲಿ ಕ್ರೂರ ವಿಧಿಯು ಅವಳನ್ನು ಬಿಸುಡುವುದು. ನಾವು ಮಾತನಾಡುವುದಕ್ಕೆಂದು ವಿಧಿಸಿದ್ದ ಅರ್ಧ ಗಂಟೆಯನ್ನೂ ಈ ತೆರದ ಯೋಚನೆಗಳಲ್ಲಿಯೇ ಕಳೆದುಬಿಟ್ಟೆ. ಇಬ್ಬರೂ ಸುಮ್ಮನೆ ಅಳುತ್ತಿದ್ದೆವಷ್ಟೇ ಹೊರತು ಒಂದು ಮಾತನ್ನೂ ಆಡಲಿಲ್ಲ. ನಾಲ್ಕಾರು ತಿಂಗಳ ಬಂದಿವಾಸದಿಂದ ಲಕ್ಷ್ಮಿಯು

ಬಹು ಕೃಶಳಾಗಿದ್ದಳು ; ಕಣ್ಣುಗಳು ಗುಳಿ ಬಿದ್ದಿದ್ದುವು; ಕೆದರಿದ ಕೂದಲನ್ನು ಕೂಡಿಸಿರಲಿಲ್ಲ. ನಾನು ಅದನ್ನು ನೇವರಿಸುತ್ತ ನಿಂತು ಕೊಂಡಿದ್ದೆ.

ಅಷ್ಟು ಹೊತ್ತಿಗೆ ಕಾವಲವನು ಬಂದು ಹೊತ್ತಾಯಿತೆಂದು ಕರೆದ. ಆಗ ನಾನು ಪಟ್ಟ ಸಂಕಟವು ಅಷ್ಟಿಷ್ಟೆಂದು ಹೇಳಲಾರೆ; ಬಾಯಲ್ಲಿ ಹೇಳಲು ಅದು ಬರದು. ಏನೋ ಒಂದು ತೆರದಲ್ಲಿ ಹೊಟ್ಟೆಯಲ್ಲಿ ಬೆಂಕಿ ಹಾಕಿದ ಹಾಗಾಯಿತು. ಕುತ್ತಿಗೆಯು ಬಿಗಿಯುವುದಕ್ಕೆ ಮೊದಲಾಯಿತು. ಗಟ್ಟಿಗೆ ಲಕ್ಷ್ಮಿಯನ್ನು ಅಪ್ಪಿಕೊಂಡು ಅಳತೊಡಗಿದೆ. ಅಳುತ್ತಿದ್ದ ಲಕ್ಷ್ಮಿಯು 'ಹೋಗಿ ಬರುತ್ತೇನೆ. ಆಶೀರ್ವಾದ ಮಾಡಿ' ಎಂದು ಗದ್ಗದ ಕಂಠದಿಂದ ಹೇಳಿದಳು. ಮತ್ತೊಂದು ಮಾತಾಡಲಾಗಲಿಲ್ಲ. ಅಷ್ಟರಲ್ಲಿಯೇ ನನ್ನನ್ನು ಕೊಟಡಿಯಿಂದ ಹೊರಕ್ಕೆಳೆದು ಬಾಗಿಲು ಹಾಕಿದರು. ನನ್ನನ್ನು ಎಳೆದು ಕೊಂಡು ಹೋಗುತ್ತಿರುವುದನ್ನು ಕಂಡು, ಇದೇ ನಮ್ಮ ಕೊನೆಯ ಸಮಾಗಮವೆಂದು ತಿಳಿದು ಲಕ್ಷ್ಮಿಗೆಷ್ಟು ದುಃಖವಾಯಿತೋ ಏನೋ. ದಢಾರನೆ ಮುಂದೆ ನುಗ್ಗಿದಳು. ಬಂದ ಪೆಟ್ಟಿಗೆ ಬಾಗಿಲ ಸಲಾಕೆಯು ತಗಲಿ ಹಣೆಯಿಂದ ರಕ್ತವು ಹೊರಚಿಮ್ಮಿತು. ಕಣ್ಣುಗಳು ಕಂಬನಿಗಳೊಳಗೇ ಕೆಂಪೇರಿದುವು. ಕೆದರಿದ ತನ್ನ ತಲೆಗೆ ಕೈ ಹಾಕಿ ಆ ವ್ಯಸನದಲ್ಲಿ ಕಿತ್ತಳು. ಹಿಡಿ ತುಂಬ ಕೂದಲು ಬಂದಿತು ; ಅದು ನಮ್ಮ ವಿರಹದ ಕಾಣಿಕೆ. ಬಾಗಿಲ ಸಂದಿಯಲ್ಲಿ ಕೈ ಚಾಚಿ ಅರ್ಪಿಸಿದ ಆ ಕಾಣಿಕೆಯನ್ನು ಎರಡು ಕೈಯಿಂದಲೂ ಕೊಂಡೆ.

ಅಂದಿನಿಂದ ನನಗೆ ಶಾಂತಿಯಿಲ್ಲ. ಲಕ್ಷ್ಮಿಯು ಸತ್ತಿದ್ದರೆ ನನಗಷ್ಟು ದುಃಖವಿರಲಿಲ್ಲ ; ಈಗ ಬದುಕಿದ್ದರೂ ಜೀವಚ್ಛವದ ಹಾಗೆ. ಕಣ್ಣುಮುಚ್ಚಿದರೆ ಲಕ್ಷ್ಮಿಯು ಕಾಣುತ್ತಾಳೆ ; ಅದೇ ಆ ಕಡೆಯ ದಿನದ ರೂಪ. ಕೆದರಿದ ಕೂದಲು, ರಕ್ತಕಾರುವ ತಲೆ, ಹೃದಯಾನಲವನ್ನು ಹೊರಸೂಸುವ ಶೂನ್ಯ ನೋಟ; ಇಷ್ಟೂ ಶಲಾಕ ಮಧ್ಯದಲ್ಲಿ. ಮರೆವೆನೆಂದರೆ ಮರೆಯಲಾಗದು. ಅದೋ ಅದೋ ! ಪುನಃ ಅಲ್ಲಿ ಕಾಣುತ್ತಾಳೆ. ಗೊಂಡಾರಣ್ಯದಲ್ಲಿ ಸಿಂಹಶಾರ್ದೂಲಗಳ ಮಧ್ಯೆ

ಒಬ್ಬಳೇ, ಒಬ್ಬಳೇ; ಇದ್ದಾಳೆ, ರಕ್ತ ಹಾಗೇ ಸುರಿಯುತ್ತಿದೆ. ಅಯ್ಯೋ!"

ಬೈರಾಗಿಯು ಕೆಳಗೆ ಬಿದ್ದನು; ಪ್ರಜ್ಞೆ ತಪ್ಪಿತು. ಮೂರ್ತಿಗೆ ಗಾಬರಿಯಾಗಿ ತನ್ನ ಜನರನ್ನು ಕೂಗಿದ. ಮೂರು ನಾಲ್ಕು ಸಲ ಕೂಗಿದ ಮೇಲೆ ಕೆಲವರು ಏನಾಯಿತೋ ಎಂದು ಓಡಿಬಂದರು. ಅವರ ಸಹಾಯದಿಂದ ಬೈರಾಗಿಯನ್ನು ತಮ್ಮ ಮಂಟಪದೊಳಕ್ಕೆ ಸಾಗಿಸಿಕೊಂಡು ಹೋದ; ಅಲ್ಲಿದ್ದವರಿಗೆಲ್ಲ ಈ ವಿದ್ಯಮಾನ ವಿವರ ತಿಳಿಯಲಿಲ್ಲ. ಒಬ್ಬರಾಗುತ್ತಲೊಬ್ಬರು ಬಂದು ನೋಡಿ ಹೋಗುತ್ತಿದ್ದರು. ಮೂರ್ತಿಯು ಮಾತ್ರ ಬೈರಾಗಿಯ ಹತ್ತಿರವೇ ಕುಳಿತು ಗಾಳಿ ಹಾಕುತ್ತಿದ್ದ. ಜೊತೆಗೆ ಇತರರು ಇಬ್ಬರಿದ್ದರು. ಗೂಡಿನಲ್ಲಿ ದೀಪವು ಸಣ್ಣಗೆ ಮಿನುಗುತ್ತಿತ್ತು.

ರಾತ್ರಿ ಬಹಳ ಹೊತ್ತು ಬೈರಾಗಿಯು ಹಾಗೆ ಎಚ್ಚರತಪ್ಪಿದ್ದ. ಸುಮಾರು ಒಂದು ಗಂಟೆಯ ಸಮಯದಲ್ಲಿ ಸ್ವಲ್ಪ ಅರಿವಾದಹಾಗಾಯಿತು; ಆದರೂ ಅದು ಅರಿವಲ್ಲ; ಅರೆಗನಸು. ಈ ಸ್ಥಿತಿಯಲ್ಲಿ ಯಾರೊಡನೆಯೋ ಹೃದಯವಿದಾರಕವಾದ ಸ್ವರದಲ್ಲಿ ಮಾತನಾಡುವಂತೆ ಕಂಡಿತು. ಅಸ್ಫುಟವಾದ ಕೆಲವು ಮಾತುಗಳನ್ನು ಆಗಾಗ್ಯೆ ಆಡುತ್ತಿದ್ದ; ಒಂದೂ ತಿಳಿಯಲೊಲ್ಲದು; ಈ ಪರಿಸ್ಥಿತಿಯು ಹೆಚ್ಚುಕಡಿಮೆ ಅರ್ಧಗಂಟೆಯ ಹೊತ್ತಿದ್ದಿತು. ಅನಂತರ ಅವನು ಕಣ್ಣು ತೆರೆದ. ಮಿನುಗುತ್ತಿದ್ದ ಬೆಳಕಿನಲ್ಲಿ ನೋಡಿದರೆ ಅವು ಕೆಂಡದಂತೆ ಉರಿಯುತ್ತಿದ್ದುವು; ಅಗಲಿಸಿದ ಕಣ್ಣುಗಳು ಬರಬರುತ್ತ ಅರಳತೊಡಗಿದವು; ಎದೆಯು ಚಂಡಿನಂತೆ ಮೇಲಕ್ಕೆ ಉಬ್ಬತೊಡಗಿತು, ಜೊತೆಗೆ ಕುತ್ತಿಗೆಯು ಗಾತ್ರವಾಗುತ್ತಾ ಬಂದಿತು. ಅಲ್ಲಿದ್ದವರಲ್ಲೊಬ್ಬನು ದೀಪ ದೊಡ್ಡದುಮಾಡಿ ಹತ್ತಿರ ತಂದ. ಕುತ್ತಿಗೆಗೆ ಏನೋ ಕಟ್ಟಿದ್ದುದರಿಂದ ಅಪಾಯವಾಗಬಹುದೆಂದು ಮೂರ್ತಿಯು ಅದನ್ನು ಬಿಚ್ಚಿದನು. ಒಳಗೆ ನೋಡಿದರೆ ನೀಲವಾದ ಕೂದಲಿನ ಚಿಕ್ಕ ಗಂಟು; ಲಕ್ಷ್ಮಿಯ ಕೂದಲೇ ಇರಬಹುದು. ಇದೇ ಸಮಯದಲ್ಲಿಯೇ ಬೈರಾಗಿಯು "ನಿನ್ನನ್ನು ಮರೆತಿಲ್ಲ, ಅಳಬೇಡ, ಇದೋ ಇದೋ

ಅದಕ್ಕೆ ಗುರುತು" ಎಂದು ಹೇಳುತ್ತ ಕುತ್ತಿಗೆಗೆ ಕೈಹಾಕಲು ಮೇಲಕ್ಕೆತ್ತಿದ. ಎತ್ತಿದ್ದ ಕೈಯು ಹಾಗೆಯೇ ಎದೆಯ ಮೇಲೆ ಬಿದ್ದು ಹೋಯಿತು. ಪುನಃ ಅದನ್ನು ಎತ್ತಲಾಗಲಿಲ್ಲ. ಬಿರಿದ ಕಣ್ಣು ಬಿಟ್ಟಹಾಗೆಯೇ ಬೈರಾಗಿಯ ಜೀವನವು ಕಡೆಯಾಯಿತು.

ಪ್ರತಿಮಾ ನಾಟಕ

ಭಾಸಕೃತವಾದ ರಾಮಕಥಾನಾಟಕಗಳು ಎರಡು— ಪ್ರತಿಮಾ ನಾಟಕ, ಅಭಿಷೇಕನಾಟಕ. ಇವುಗಳೊಳಗೆ ಪ್ರತಿಮಾನಾಟಕದಲ್ಲಿ ಅಯೋಧ್ಯಾರಣ್ಯ ಕಾಂಡಗಳ ಕಥೆಯೂ, ಅಭಿಷೇಕನಾಟಕದಲ್ಲಿ ಕಿಷ್ಕಿಂಧಾ ಸುಂದರ ಯುದ್ಧ ಕಾಂಡಗಳ ಕಥೆಯೂ ಮುಖ್ಯವಾಗಿ ಪ್ರತಿಪಾದಿತವಾಗಿದೆ. ಉಳಿದ ಬಾಲ ಕಾಂಡವನ್ನು ಮತ್ತೊಂದು ನಾಟಕದಲ್ಲಿ ಬರೆದಿರಬಹುದೆಂದೂ ಅದು ರಾಮಬಾಲಚರಿತವಾಗಿರಬಹುದೆಂದೂ ಅನೇಕರ ಊಹೆ. ಈಗ ದೊರೆತಿರುವ 'ಬಾಲಚರಿತ'ವು ಕೃಷ್ಣಬಾಲಚರಿತ.

ಈ ಎರಡು ನಾಟಕಗಳಲ್ಲಿ ಬೇರೆಬೇರೆ ಕಾಂಡಗಳ ಕಥೆಯಿದ್ದರೂ ಎರಡೂ ರಾಮ ಪಟ್ಟಾಭಿಷೇಕದಲ್ಲಿಯೇ ಮುಗಿಯುತ್ತವೆ; ಅಯೋಧ್ಯೆಗೆ ಹಿಂತಿರುಗಿದ ಮೇಲೆ ವಿಜೃಂಭಣೆಯಿಂದ ನಡೆಯುವ ಕ್ರಮವಾದ ಪಟ್ಟಾಭಿಷೇಕವಲ್ಲ— ಶಾಸ್ತ್ರಮಾತ್ರದ ಪಟ್ಟಾಭಿಷೇಕ. ಆದ್ದರಿಂದ ಒಂದು 'ಅಭಿಷೇಕನಾಟಕ'ವಾದರೆ ಮತ್ತೊಂದೂ 'ಅಭಿಷೇಕನಾಟಕ'ವಾಗುವುದರಲ್ಲಿ ಅಡ್ಡಿಯಿಲ್ಲ. ಆದರೆ 'ಪ್ರತಿಮಾನಾಟಕ'ವೆಲ್ಲಿ, 'ಅಭಿಷೇಕ ನಾಟಕ'ವೆಲ್ಲಿ? ಪ್ರತಿಮಾ ನಾಟಕದಲ್ಲಿ ಕವಿಯು ತನ್ನ ಪ್ರತಿಭಾ ಪ್ರವಾಹವನ್ನೆಲ್ಲಾ ಹರಿಸಿಬಿಟ್ಟಿದ್ದಾನೆ; ಅಭಿಷೇಕನಾಟಕಕ್ಕೆ ಬರುವ ಹೊತ್ತಿಗೆ ಅದು ಬರುದೊರೆಯಾಗುತ್ತದೆ; ಪ್ರತಿಮಾನಾಟಕವು ವಸ್ತು ಪಾತ್ರ ರಸಾದಿಗಳಲ್ಲಿ ರಾಮಾಯಣಕ್ಕಿಂತ ತೀರ ಭಿನ್ನವಾಗಿ ನೂತನ ಸೃಷ್ಟಿಯಾಗಿದೆ. ಅಭಿಷೇಕನಾಟಕವು, ಬಹುಭಾಗದಲ್ಲಿ ಅದರ ಶುಷ್ಕಸಂಗ್ರಹ ಮಾತ್ರ. ಒಂದನ್ನು ಓದಿ ಮತ್ತೊಂದನ್ನು ತೆಗೆದುಕೊಂಡರೆ ಸಕ್ಕರೆ ತಿಂದ ಬಾಯಿಯಲ್ಲಿ ನೀರು ಕುಡಿದಂತೆ ಸಪ್ಪೆಯಾಗಿ ಕಾಣುತ್ತದೆ.

ಪ್ರತಿಮಾನಾಟಕವು ಆರಂಭವಾಗುವಾಗ ಶ್ರೀರಾಮಪಟ್ಟಾಭಿಷೇಕಕ್ಕೆ ಏರ್ಪಾಡು ನಡೆಯುತ್ತಿದೆ. ಆ ಮಹೋತ್ಸವದ ಏಕಾಂಶವನ್ನು

ಮಾತ್ರ (ಟೆಲೆಸ್ಕೋಪಿನಲ್ಲಿ ತೋರಿಸುವಂತೆ) ಕವಿಯು ವರ್ಣಿಸಿ, ಅಲ್ಲಿಯ ಸಂಭ್ರಮವನ್ನೂ ನಾಡಿಗರ ಸಂತೋಷವನ್ನೂ ಸೂಚಿಸುವನು. ಅರಮನೆಯ ಸಂಗೀತಶಾಲೆಯಲ್ಲಿ ಈ ಮಹೋತ್ಸವದ ಅಂಗವಾಗಿ ತಕ್ಕ ನಾಟಕಾಭಿನಯವು ಸಿದ್ಧವಾಗುತ್ತಿದೆ. ನಟ ಪರಿವಾರದಲ್ಲಿದ್ದ ಅವದಾತಿಕೆ ಯೆಂಬವಳೊಬ್ಬಳು ನೇಪಥ್ಯಪಾಲಿನಿಯನ್ನು ಕಿರುಕುಳಗುಟ್ಟಿಸಲು ರಂಗಸ್ಥಳ ದಿಂದ ಒಂದು ನಾರುಮಡಿಯನ್ನು ತರುತ್ತ ಸೀತೆಯ ಕಣ್ಣಿಗೆ ಬೀಳುವಳು. ಸೀತೆಯು ಅವಳನ್ನು ಗದರಿಸಿ ಕಳುಹಿಸುತ್ತ, ಕುತೂಹಲದಿಂದ ಆ ನಾರು ಮಡಿಯನ್ನು ಧರಿಸಿಕೊಂಡು ನೋಡುವಳು. ಅದರ ಸೌಂದರ್ಯವನ್ನು ವಿಮರ್ಶೆ ಮಾಡುತ್ತಿರುವಾಗ ರಾಮಪಟ್ಟಾಭಿಷೇಕದ ಸುದ್ದಿ ಬರುವುದು. ಆದರೆ ಸೀತೆ ಅದರ ಸೌಭಾಗ್ಯದಲ್ಲಿ ಉದಾಸೀನೆ; ರಾಮನಿಗೆ ಪಟ್ಟಾಭಿಷೇಕ ವಾಗಬೇಕಾದರೆ ದಶರಥನ ಯೋಗಕ್ಷೇಮವೇನೋ ಎಂತೋ ಎಂಬ ಕಳವಳ. ಅವನು ಆರೋಗ್ಯವಾಗಿದ್ದಾನೆಂದು ಕೇಳಿದಾಗ ತನ್ನ ಗಂಡನಿಗೆ ಪಟ್ಟಾಭಿಷೇಕವಾದದ್ದಕ್ಕಿಂತ ಹೆಚ್ಚು ಸಂತೋಷ; ಆದ್ದರಿಂದ ಆ ವರ್ತ ಮಾನವನ್ನು ತಂದವಳಿಗೆ ನಿಂತ ನಿಲವಿನಲ್ಲಿಯೆ ತಾನು ಹಾಕಿಕೊಂಡಿದ್ದ ಆಭರಣಗಳನ್ನು ತೆಗೆದುಕೊಡುವಳು; ಅವಳ ಈ ಮನೋಭಾವವು ಮುಂದೆ ನಡೆಯುವ ಸಂಗತಿಯಿಂದಲೂ ಗೊತ್ತಾಗುವುದು. ಪಟಹ ಶಬ್ದವಾಗು ತ್ತಿದ್ದು ತಟ್ಟನೆ ನಿಲ್ಲಲು "ಅಭಿಷೇಕ ವಿಘಾತವೇನಾದರೂ ಇರಬಹುದೇ?" ಎಂಬ ಯೋಚನೆ ಹೊಳೆಯುವುದು. ಆದರೆ ಆ ಯೋಚನೆ ಅವಳ ಮನಸ್ಸನ್ನು ಕುಗ್ಗಿಸದು. ಆಶೆಯು ತೀವ್ರವಾಗಿದ್ದರೆ ನಿರಾಶೆಯು ದುಃಖಜನಕ ವಾಗುವುದು. ಆದರೆ ಅವಳು ಆಶಾಲುಬ್ಧಳಲ್ಲ. ಆದ್ದರಿಂದ "ಅಥವಾ ಅರಮನೆಗಳಲ್ಲಿ ಅನೇಕ ಸಂಗತಿಗಳು ನಡೆಯುವುವು" ಎಂದುಕೊಂಡು ಸುಮ್ಮನಾಗಿಬಿಡುವಳು. ದಶರಥಮಹಾರಾಜನು ಕಾಡಿಗೆ ಹೋಗು ತ್ತಾನೆಂದು ಕೇಳಿದಾಗ ಪಟ್ಟಾಭಿಷೇಕ ವಿಚಾರದಲ್ಲಿ ಇದ್ದ ಸಂತೋಷವೇ ಹೋಗಿಬಿಡುವುದು; "ಹಾಗಿದ್ದರೆ ಅದು ರಾಜ್ಯಾಭಿಷೇಕವಲ್ಲ; ಸುಮ್ಮನೆ ನೀರೆರೆಯುವುದು" ಎನ್ನುವಳು.

ಇಷ್ಟು ಹೊತ್ತಿಗೆ ರಾಮನು ಬರುವನು. ಆ ಸೀತೆಗೆ ತಕ್ಕ ರಾಮ. ಸುಖ ಸಂಪತ್ತುಗಳಲ್ಲಿ ಅವಳಿಗೆ ಎಂಥ ಸಂಗರಾಹಿತ್ಯವೋ ಅದಕ್ಕಿಂತಲೂ

ಹೆಚ್ಚು ಸಂಗರಾಹಿತ್ಯ ಅವನಿಗೆ. ಅವನಿಗೆ ಸುಖವೂ ಒಂದೇ ದುಃಖವೂ ಒಂದೇ ; ಅದು ಯಾವುದೂ ದೊಡ್ಡದಲ್ಲ; ಎರಡೂ ಅಲ್ಪ; ಆದ್ದರಿಂದ ತನ್ನ ಪಟ್ಟಾಭಿಷೇಕ ನಿಂತುಹೋದ ವರ್ತಮಾನವನ್ನು ವಿವರಿಸಿ, ಏನೂ ನಷ್ಟವೇ ಆಗದಿದ್ದವನಂತೆ ಸಮಾಧಾನಚಿತ್ತದಿಂದ, ತನ್ನ ಹೆಂಡತಿ ಒಡವೆಯನ್ನೇಕೆ ಇಟ್ಟುಕೊಂಡಿಲ್ಲ, ಇಟ್ಟುಕೊಂಡಿದ್ದು ತೆಗೆದುಹಾಕಿದಳೇ, ಅಥವಾ ಇಟ್ಟು ಕೊಂಡೇ ಇರಲಿಲ್ಲವೋ ಎಂದು ಸೂಕ್ಷ್ಮ ಪರೀಕ್ಷೆ ಪರಿಶೀಲನೆಗಳಿಗೆ ಹೊರಡು ವನು. ಪಟ್ಟಾಭಿಷೇಕ ತಪ್ಪಿದ್ದರಿಂದ ಸೀತೆಗೆ ಇನ್ನೂ ಸಂತೋಷವೇಯೆ. ಏಕೆಂದರೆ, "ಮಹಾರಾಜನು ಮಹಾರಾಜನೇ; ಆರ್ಯಪುತ್ರನು ಆರ್ಯ ಪುತ್ರನೇ." ತನ್ನ ಮಾವ ಮುದುಕನಾಗಿ ಅಥವಾ ಮೃತನಾಗಿ ತನ್ನ ಗಂಡನು ಮಹಾರಾಜನಾಗಿಬಿಡಬೇಕೆಂಬ ಆತುರವಿಲ್ಲ: ಚಕ್ರವರ್ತಿಯ ಮುದ್ದು ಮಗಳಾಗಿ ಬೆಳೆದು ಚಕ್ರವರ್ತಿಯ ಮನೆಯನ್ನು ಸೇರಿದವಳಿಗೆ ಇಂಥ ಆಶೆಯಿದ್ದರೂ ಅದು ಕ್ಷಮ್ಯವೇ; ಆದರೆ ಅವಳ ಮನಸ್ಸೆಲ್ಲವೂ ತನ್ನ ಗುರುಹಿರಿಯರ ಮತ್ತು ಪತಿಯ ಸುಖಶ್ರೇಯಸ್ಸುಗಳ ಮೇಲೆಯೇ ಇದೆ; ತಾನು ಮಹಾರಾಣಿಯಾಗಿ ಮೆರೆಯಬೇಕೆಂಬುದೇ ಅವಳ ಪರಮ ಧ್ಯೇಯ ವಲ್ಲ; ತಂದೆಯ ಕಣ್ಣಮುಂದಿನ ಮಕ್ಕಳಂತೆ ಅವರ ಆಶೀರ್ವಾದದ ನೆರಳಿ ನಲ್ಲಿರುವುದೇ ಪರಮ ಶ್ರೇಯಸ್ಸೆಂದು ಅವಳು ಸ್ಥಿರವಾಗಿ ನಂಬಿಕೊಂಡಿ ದ್ದಂತೆ ತೋರುತ್ತದೆ; ಮಹಾರಾಣಿಯ ಪದವಿ ವೈಭವಗಳಿಗಿಂತ ಶುದ್ಧ ವಾದ ಪತಿಪ್ರೇಮಪೂರಿತವಾದ ಕರ್ಮಯೋಗವೇ ಹೆಚ್ಚು ಸುಖ ದಾಯಕವೆಂದು ಜಾನಕಿಯು ಅನುಭವಕ್ಕೆ ತಂದುಕೊಂಡಿದ್ದಂತೆ ಬೋಧೆ ಯಾಗುತ್ತದೆ. ಸೀತಾರಾಮರ ಹೃದಯಗಳು ಬಿಂಬ ಪ್ರತಿಬಿಂಬಗಳಂತಿದ್ದಿರ ಬೇಕು. ಅದಕ್ಕೋಸ್ಕರವೇ ರಾಮನು ಯಾವ ವಿಚಾರದಲ್ಲಿ ಏನು ಅಭಿಪ್ರಾಯ ಅಭಿರುಚಿಗಳನ್ನಿಟ್ಟುಕೊಂಡಿರಬಹುದು, ಯಾವ ಸಂದರ್ಭದಲ್ಲಿ ಹೇಗೆ ಹೇಗೆ ನಡೆದುಕೊಂಡಿರಬಹುದು ಎಂಬುದೆಲ್ಲವೂ ಸೀತೆಯ ಹೃದಯದಲ್ಲಿ ಪ್ರತಿಫಲಿತ ವಾಗುತ್ತಿದ್ದುವೆಂದು ತೋರುತ್ತದೆ. ಪಟ್ಟಾಭಿಷೇಕಕ್ಕೋಸ್ಕರ ಧರಿಸಿದ ಅಲಂಕಾರ ಉಡಿಗೆ ತೊಡಗೆಗಳನ್ನು ಇನ್ನೂ ತೆಗೆಯದೇ ಬಂದಿರುವ ರಾಮ ನಿಗೂ ಸೀತೆಗೂ ನಡೆಯುವ ಸಂಭಾಷಣೆಯನ್ನು ನೋಡಿ!

ರಾಮ.—ಮೈಥಿಲಿ, ಇದೇನು ನೀನು ಹೇಳುವುದು?

ಸೀತೆ.—ಏನೂ ಇಲ್ಲ; ಇವಳು "ಅಭಿಷೇಕ ಅಭಿಷೇಕ" ಎನ್ನುವಳು.

(ಪಾಪ! ತನಗೇನೂ ಅದರಲ್ಲಿ ಸಂಬಂಧವಿಲ್ಲ!)

ರಾಮ.—ನಿನ್ನ ಕುತೂಹಲವನ್ನು ಬಲ್ಲೆನು; ಅಭಿಷೇಕ ಉಂಟು. ಈಗತಾನೇ ಮಹಾರಾಜನು........ವತ್ಸ ರಾಮ! ರಾಜ್ಯವನ್ನು ಕೈಕೊಳ್ಳೆಂದನು.

ಸೀತೆ.—ಆಗ ಆರ್ಯಪುತ್ರನು ನುಡಿದುದೇನು?

ರಾಮ.—ಮೈಥಿಲಿ! ಏನು ನುಡಿದಿರಬಹುದೆಂದು ನಿನಗೆ ತೋರುವುದು?

(ರಾಜ್ಯವು ಕೈತಪ್ಪಿಹೋಗುತ್ತಿರುವಾಗ, ಹೆಂಡತಿಯೊಡನೆ ಪರಿಹಾಸ್ಯ!)

ಸೀತೆ.—ನನಗೆ ತೋರುವುದು, ಆರ್ಯಪುತ್ರನು ಯಾವ ಮಾತನ್ನೂ ಆಡದೆ ಗಟ್ಟಿಯಾಗಿ ನಿಟ್ಟುಸಿರುಬಿಟ್ಟು ಮಹಾರಾಜನ ಪಾದಮೂಲದಲ್ಲಿ ಥಟ್ಟನೆ ಬಿದ್ದನೆಂದು.

(ಕಣ್ಣಾರ ನೋಡಿದವರಿಗಿಂತಲೂ ಧೈರ್ಯವಾಗಿ ಖಂಡಿತವಾಗಿ ನಿಸ್ಸಂಶಯವಾಗಿ ಹೇಳಿಬಿಡುತ್ತಾಳೆ. ಆದರೆ ಅದು ಬರಿಯ ಊಹೆ; ನಿಜವು ಲ ಊಹೆಗಿಂತ ಹೆಚ್ಚು ಯಥಾರ್ಥವಲ್ಲ.)

ರಾಮ.—ಸರಿಯಾಗಿ ಊಹಿಸಿದೆ......ಅಹುದು, ನಾನು ಮಹಾರಾಜನ ಪಾದಮೂಲದಲ್ಲಿ ಥಟ್ಟನೆ ಬಿದ್ದೆನು.

ದಶರಥನು ತನ್ನ ಮೇಲೆ ಆಣೆಯಿಟ್ಟುಕೊಂಡು ರಾಮನನ್ನು ಪಟ್ಟಾಭಿಷೇಕಕ್ಕೆ ಒಪ್ಪಿಸಿದನು. ರಾಮನೂ ಒಪ್ಪಿದಹಾಗಾಗಿತ್ತು. ಅಷ್ಟು ಹೊತ್ತಿಗೆ ಮಂಥರೆ ಬಂದು ದಶರಥನ ಕಿವಿಯಲ್ಲಿ ಏನನ್ನೋ ಹೇಳಿದಳು,—ಪಟ್ಟಾಭಿಷೇಕ ನಿಂತುಹೋಯಿತು.

ಇದನ್ನು ಕೇಳಿ ಸೀತೆಗೆ ಸಂತೋಷ; ರಾಮನಿಗೂ ಸಂತೋಷವೇಯೆ; ಅವರು ಇಬ್ಬರೂ ಆಡುವುದು ಒಂದೇ ಮಾತು; ಒಂದೇ ವಾಕ್ಯ.—

ರಾಮ.—ನಾನು ಆ ರಾಮನೇ ಆದೆನು. ಮಹಾರಾಜನು ಮಹಾರಾಜನೇ ಆಗಿರುವನು.

ಸೀತೆ.—ಮಹಾರಾಜನು ಮಹಾರಾಜನೇ, ಆರ್ಯಪುತ್ರನು ಆರ್ಯಪುತ್ರನೇ !

ಪಟ್ಟಾಭಿಷೇಕ ತಪ್ಪಿಹೋಗಲು, ಅವನ ಜೀವಮಾನದಲ್ಲಿ ಪ್ರಳಯವಾದಂತೆ ಇತರರ ಭಾವನೆ; ಈ ಪ್ರಳಯದಲ್ಲಿ ಧೈರ್ಯಗೆಡದೆ ಇದ್ದ ರಾಮನಿಗೆ ಅಭಿನಂದನ; ಆದರೆ ಅವನಿಗೆ ಅದು ಅರ್ಥವಾಗದು. "ತಂದೆಯ ಮಾತನ್ನು ಮಗನು ನಡೆಸಿದರೆ ಏನು ಆಶ್ಚರ್ಯ?" ಎನ್ನುವನು. ಆ ವಿಷಯ ಅಲ್ಲಿಗೇ ನಿಂತುಹೋಗುವುದು ; ಸೀತಾರಾಮರು ಹೊಸದಾಗಿ ಸಂಸಾರಕ್ಕೆ ಮೊದಲು ಮಾಡಿದ ಯುವಯುವತಿಯರಂತೆ ಸರಸಕ್ಕೆ ಆರಂಭಿಸುವರು ; ರಾಮನು ಕನ್ನಡಿ ತೋರಿಸುತ್ತ ಸೀತೆಗೆ ಅಲಂಕಾರಮಾಡಿಸಲೆಳಸುವನು. ಆಗ ಅವಳು ಧರಿಸಿದ್ದ ಸ್ವರ್ಣವರ್ಣದ ಪಟ್ಟೆ ಮಡಿಯು ಕಣ್ಣಿಗೆ ಬಿದ್ದು ಅವನಿಗೂ ಅದರಮೇಲೆ ಆಸೆಯಾಗುವುದು. ಸೀತೆಗೆ ಇಷ್ಟವಾದದ್ದು ರಾಮನಿಗೂ ಇಷ್ಟ. ಆದರೆ ಅದು ಇಕ್ಷ್ವಾಕುಕುಲದ ಅರಸರ ವೃದ್ಧಾಲಂಕಾರ; ಆದ್ದರಿಂದ ರಾಜ್ಯಾಭಿಷೇಕವನ್ನುಳಿದ ರಾಮನಿಗೆ ಇದು ಅಮಂಗಲವೆಂಬಂತೆ ಸೀತೆಗೆ ಭಾಸವಾಗುವುದು.

ಇಷ್ಟುಹೊತ್ತಿಗೆ ಅಂತಃಪುರದಲ್ಲಿ ಸರ್ವನಾಶವಾದಂತೆ ಗಂಡಸರು ಹೆಂಗಸರೆಲ್ಲರೂ ಹಾಹಾಕಾರಮಾಡುವರು. (ದಶರಥಮಹಾರಾಜನು ಮಂಥರೆಯ ಮಾತಿನಂತೆ ಕೈಕೆಯನ್ನು ಕಂಡು ಅವಳು ಕೋರಿದ ವರವನ್ನು ಕೇಳಿ ಮೂರ್ಛೆಹೋಗುವನು.) ಆ ಧ್ವನಿಯನ್ನು ಕೇಳಿ ಏನೋ ಮಹಾ ಅನರ್ಥವಾಗಿದೆಯೆಂದು ರಾಮನು ಊಹಿಸುವನು. ಅದಕ್ಕೆ ಕೈಕೆ* ಮೂಲವೆಂದು ಯಾರೋ ಹೇಳುವರು. ಹಾಗಿದ್ದರೆ ಇದು ಕೆಡುಕಲ್ಲ, ಪುರೋಭಿವೃದ್ಧಿಯನ್ನುಂಟುಮಾಡುವ ಗುಣವೇ ಆಗಿರಬೇಕು; ಏಕೆಂದರೆ, ತಾಯಿ ಎಂದಿಗೂ ಅಮಂಗಳವನ್ನುಂಟುಮಾಡಲಾರಳು—ಎಂದು ಅವನು ನಿರ್ಧರಿಸುವನು. "ದೇವೇಂದ್ರನಿಗೆ ಸರಿಸಮಾನನಾದ ಗಂಡನೂ ತನ್ನಂಥ ಮಗನೂ ಇದ್ದಾಗ ಅವಳಿಗೆ ಯಾವುದಕ್ಕೆ ಕಡಮೆ ? ಅಂಥವಳು ಏಕೆ ತಾನೇ ಅಕಾರ್ಯ

---

* ಕೇಕಯ ರಾಜನ ಮಗಳು 'ಕೈಕೇಯಿ'; ಆದರೆ ಉಚ್ಚಾರಣ ಸೌಕರ್ಯಾರ್ಥವಾಗಿ ಕನ್ನಡದಲ್ಲಿ ರೂಢವಾಗಿರುವ 'ಕೈಕೆ' ಎಂಬ ರೂಪವನ್ನೇ ಇಲ್ಲಿಯೂ ಮುಂದೂ ಉಪಯೋಗಿಸಿದೆ

ವನ್ನು ಮಾಡಿಯಾಳು?" ಎಂಬುದು ಅವನ ತರ್ಕ. ಕೈಕೆಯ ವರಸ್ವರೂಪವು ತಿಳಿದಮೇಲೂ, "ತಾಯಿಯಾದವಳು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ರಾಜ್ಯ ಬರಬೇಕೆಂದು ಆಶಿಸಿದರೆ ಅದು ಸ್ವಾಭಾವಿಕ; ಆ ರಾಜ್ಯ ನನಗೆ ಬರಲಿಲ್ಲವೆಂದು ಆಕ್ಷೇಪಿಸುವುದು ನಮ್ಮ ಲೋಭ. ಪಟ್ಟಾಭಿಷೇಕ ನಿಂತದ್ದು ಎಷ್ಟು ಒಳ್ಳೆಯದಾಯಿತು! ದಶರಥ ಮಹಾರಾಜನು ಕಾಡಿಗೆ ಹೋಗುವುದು ತಪ್ಪಿತು; ನಾನು ಇನ್ನೂ ನಾಲ್ಕು ದಿನ ತಂದೆಯ ಕಣ್ಣುಮುಂದಿನ ಮಗನಾಗಿ ರಾಜ್ಯದ ಭಾರವಿಲ್ಲದೆ ನಿಶ್ಚಿಂತೆಯಿಂದಿರಬಹುದು; ಹೊಸಬ ಹೇಗೆ ರಾಜ್ಯವಾಳುತ್ತಾನೋ ಎಂದು ಪ್ರಜೆಗಳು ಶಂಕಿಸಬೇಕಾದದ್ದಿಲ್ಲ—" ಎಂದು ಸಮಾಧಾನ, ಸಂತೋಷ. ಆದರೆ ಮುಪ್ಪಿನ ಮುದುಕನಾದ ದಶರಥನಿಗೆ, ರಾಮನಮೇಲೆ ಮಹಾ ಮೋಹ; ಅವನು ಕೈಕೆಯ ಮಾತನ್ನು ಕೇಳಿ ಮರುಮಾತೇ ಹೊರಡದೆ ಕೈಸನ್ನೆಯಿಂದ ಎಲ್ಲರನ್ನೂ ಕಳುಹಿಸಿ ಮೂರ್ಛೆ ಹೋದನು. ಈ ವರ್ತಮಾನವನ್ನು ಕೇಳಿದ ಲಕ್ಷ್ಮಣನು, ಭುಗ್ಗನೆ ಜ್ವಲಿಸಿದ ಬೆಂಕಿಯಂತೆ ಕೆರಳಿ, "ಮತ್ತನೆಯವರ ಪಾಡೆಲ್ಲಾ ಹೀಗೇಯೆ; ನಮ್ಮವರೆಂದು ನಂಬಿದರೆ ಅವರು ಮಾಡುವುದು ಗೊತ್ತೇ ಇದೆ—ಈ ಹೆಂಗಸರ ಹಣೆಯ ಬರಹವೇ ಇಷ್ಟು; ಇವರ ಹೆಸರಿಲ್ಲದ ಹಾಗೆ ಮಾಡಿಬಿಡುತ್ತೇನೆ" ಎಂದು ಹಾರಾಡುತ್ತ ಬಿಲ್ಲನ್ನು ವಿಜೃಂಭಿಸುತ್ತ ಹೊರಟನು. ರಾಮನಿಗೂ ಅವನನ್ನು ತಡೆಯಲು ಕಷ್ಟವಾಗುವುದು; ಅವನು "ರಾಜ್ಯಹೋಯಿತು; ತಂದೆ ಹೋಗುವುದರಲ್ಲಿದ್ದಾನೆ; ಇದನ್ನು ನೀನು ಮನಸ್ಸಿಗೇ ಹತ್ತಿಸಿಕೊಳ್ಳದೆ ಉದಾಸೀನನಾಗಿದ್ದೀಯೆ. ಧೈರ್ಯವಿಲ್ಲದ ಕ್ಷಮೆಯಿಂದೇನು ಪ್ರಯೋಜನ?" ಎಂದು ಗದರಿಸಿ, ರಾಮನಿಗೂ ದಕ್ಕದೆ ಹೊರಟುಬಿಡುವನು. ಲಕ್ಷ್ಮಣನನ್ನು ಹಾಗೇ ಬಿಟ್ಟುಬಿಟ್ಟರೆ ಮೂರು ಲೋಕವನ್ನೂ ದಹಿಸಿಬಿಡುವಂತಿದ್ದನು; ಆ ಕೋಪಕ್ಕೆ ಎಲ್ಲವೂ ಆಹುತಿಯಾಗಿಬಿಡುತ್ತಿತ್ತು. ಆದ್ದರಿಂದ ಅಣ್ಣನು ಅವನನ್ನು ಹಿಂದಕ್ಕೆ ಕರೆದು, ಶಾಂತನಾಗಿ, "ಅಯ್ಯಾ, ಸತ್ಯದಮೇಲೆ ದೃಷ್ಟಿಯುಳ್ಳ ಮುಪ್ಪಿನ ತಂದೆಯನ್ನು ಶಿಕ್ಷಿಸೋಣವೆ? ತನ್ನ ವಿತ್ತವನ್ನು ಅಪೇಕ್ಷಿಸಿದ ತಾಯನ್ನು ಹೊಡೆಯೋಣವೇ? ನಿರಪರಾಧಿಯಾದ ತಮ್ಮನನ್ನು ಕೊಂದುಬಿಡೋಣವೇ?—ಈ ಮೂರು ಪಾಪಗಳಲ್ಲಿ ಯಾವುದು ಒಳ್ಳೆಯದು?" ಎಂದು ಕೇಳುವನು. ಲಕ್ಷ್ಮಣನ ಕೋಪಕ್ಕೆ ಕಾರಣ ರಾಜ್ಯಲೋಭವಲ್ಲ.

ಅಣ್ಣನ ಮೇಲಣ ಮಮತೆ; ಅನುರಾಗ; ಅವನು ಹದಿನಾಲ್ಕುವರ್ಷ ವನವಾಸಮಾಡಿ ಶ್ರಮಪಡಬೇಕಲ್ಲಾ; ಆ ಕಷ್ಟವನ್ನು ಅವನು ಹೇಗೆ ಸಹಿಸಿಯಾನು ?—ಎಂಬ ಚಿಂತೆ. ಇಷ್ಟುಹೊತ್ತಿಗೆ, ಸೀತೆಯು ಮೈಲಿಗೆಯಾದ ನಾರುಮಡಿಯನ್ನುಟ್ಟ ವರ್ತಮಾನವು ನೇಪಥ್ಯಪಾಲಿನಿಯಾದ ರೇವೆಗೆ ಮುಟ್ಟಿ, ಅವಳು ಒಂದು ಜೊತೆ ಹೊಸ ಮಡಿಗಳನ್ನು ಕಳುಹಿಸುವಳು. ಅವು ಸಮಯಕ್ಕೆ ಸರಿಯಾಗಿ ಒದಗಲು ರಾಮಲಕ್ಷ್ಮಣರು ಒಂದೊಂದನ್ನು ಉಟ್ಟುಕೊಳ್ಳುವರು. ರಾಮನು ಸೀತಾಲಕ್ಷ್ಮಣರನ್ನು ತಡೆದು ನೋಡುವನು. ಆದರೆ ಅವನ ಬುದ್ಧಿವಂತಿಕೆಯ ಮಾತುಗಳೊಂದೂ ನಡೆಯಲಿಲ್ಲ. ಕೊನೆಗೆ ಸೀತೆಯನ್ನು ಲಕ್ಷ್ಮಣನೂ, ಲಕ್ಷ್ಮಣನನ್ನು ಸೀತೆಯೂ ಸಿಪಾರಸು ಮಾಡಿಕೊಂಡು ಎಲ್ಲರೂ ನಾರುಮಡಿಯುಟ್ಟು ಒಂದೇ ಜೀವದ ಮೂರು ದೇಹಗಳಂತೆ, ಆಕ್ಷಣ ಕಾಡಿಗೆ ಹೊರಟೇಬಿಡುವರು. ಊರಿನಲ್ಲೆಲ್ಲಾ ಈ ವರ್ತಮಾನ ಆಗಲೆ ಹರಡಿ ಜನರು ಅವರನ್ನು ನೋಡಲು ಗುಂಪು ಗುಂಪಾಗಿ ಬೀದಿಗಳ ತುಂಬ ನೆರೆದಿದ್ದರು. ರಾಮನು ಪ್ರಜೆಗಳಿಗೆ ದರ್ಶನವಿತ್ತು ಹೊರಟುಹೋಗುತ್ತಿದ್ದಾನೆಂದು ಕೇಳಿ ದಶರಥ ಮಹಾರಾಜನು ಮುಪ್ಪಡಸಿದ ಕಾನನದ್ವಿರದದಂತೆ ಧೂಳಿಧೂಸರಿತ ದೇಹನಾಗಿ ತತ್ತರಿಸಿಕೊಂಡು ಬಂದನು. ಆದರೆ ರಾಮನು ನಿಲ್ಲಲಿಲ್ಲ. ಏಕೆಂದರೆ ಆ ಸಮಯದಲ್ಲಿ ಮನಮರುಗಿ ನಿಂತುಬಿಟ್ಟಿದ್ದರೆ ಪುನಃ ಹೊರಡಲಾಗುತ್ತಿರಲಿಲ್ಲ.

ಈ ಭಾಗದಲ್ಲಿ ಕೈಕೆಯ ಕೋರಿಕೆಯಂತೆ ರಾಮನಿಗೆ ಪಟ್ಟಾಭಿಷೇಕ ತಪ್ಪಿ ವನವಾಸ ಪ್ರಾಪ್ತವಾಯಿತೆಂಬುದು ಸೂಚಿತವಾಗಿದ್ದರೂ, ಅವಳು ರಂಗದಮೇಲೆ ಬಂದು ತಾನೇ ನಾರುಮಡಿಗಳನ್ನು ತಂದುಕೊಟ್ಟು, ವಸಿಷ್ಠಾದಿಗಳು ವಾರಣೆಮಾಡುತ್ತಿದ್ದರೂ ಕೇಳದೆ ಸೀತೆಗೂ ತಪೋವೇಷವನ್ನು ಹಾಕಿಸುವ ನಿಷ್ಠುರ ಸನ್ನಿವೇಶವು ಬರುವುದಿಲ್ಲ. ಕೈಕೆಯು ಕೌಸಲ್ಯೆಯಂತೆಯೇ ಗುಣಶಾಲಿನಿಯೆಂದೂ, ಅವಳಿಗೆ ಭರತನು ಹೇಗೋ ರಾಮನೂ ಹಾಗೇ ಎಂದೂ, ಭವಿತವ್ಯತೆಯು ಅವಳನ್ನು ಅನ್ಯಾಯವಾದ ದೂರಿಗೆ ಗುರಿಮಾಡಿತೆಂದೂ ಕವಿಯ ಭಾವ. ಆದ್ದರಿಂದ ಸೀತಾರಾಮಾದಿಗಳಿಗೆ ಬೇರೆ ವಿಧವಾಗಿ ನಾರುಮಡಿಗಳನ್ನು ತಂದೊದಗಿಸಿ ಅವರು ಅವುಗಳನ್ನು ಸಮಾಧಾನದಿಂದಲೂ ಸಂತೋಷದಿಂದಲೂ ತಾವೇ ಧರಿಸುವಂತೆ ಕಲ್ಪಿಸಿರುವ

ಸನ್ನಿವೇಶವೇ ಇಲ್ಲಿಯ ಸಂವಿಧಾನದಲ್ಲಿ ಚಮತ್ಕಾರವಾದ ಅಂಶವಾಗಿದೆ. ಕವಿಯು ಇದರ ಮಧ್ಯದಲ್ಲಿ ಸೀತಾ ರಾಮ ಲಕ್ಷ್ಮಣರನ್ನಿಟ್ಟು ಅವರ ಸ್ವಾರ್ಥತ್ಯಾಗಪೂರ್ವಕವಾದ ಪರಸ್ಪರ ಪ್ರೇಮವನ್ನು ವ್ಯಕ್ತಗೊಳಿಸಿದ್ದಾನೆ. ಅವರು ಮುಪ್ಪಿನ ತಂದೆ ತಮ್ಮನ್ನು ಹುಡುಕಿಕೊಂಡು ಬರುತ್ತಿದ್ದಾನೆಂದು ಕೇಳಿದರೂ ಅಲಕ್ಷ್ಯಮಾಡಿ ಹೊರಟುಹೋದಂತೆ ಈ ಅಂಕವನ್ನು ಮುಗಿಸಿರುವುದು ಒಂದು ದೋಷವಾಗಿ ಕಾಣಬಹುದು. ಆದರೆ ಇದು ದಶರಥನ ಶೋಕವು ತೀವ್ರವಾಗುವುದಕ್ಕೆ ದಾರಿ. ಹಾಗಲ್ಲದೆ, ಮಕ್ಕಳುಮರಿಗಳೆಲ್ಲರೂ ಬಂದು ಹತ್ತಿರವಿದ್ದು ಅವನು ಅತ್ತು ಅತ್ತು ಹಂಬಲಿಕೆಯು ಹಳದಾಗಿ, ಆಮೇಲೆ ಹಲವು ದಿನಗಳ ಮೇಲೆ ಸೀತಾರಾಮರು ನೆಂಟರ ಮನೆಗೆ ಹೋಗಿ ಬರುವರಂತೆ ಹೊರಡುವುದರಲ್ಲಿ ಕರುಣರಸ ಪರಿಪುಷ್ಟಿ ಇರುವುದಿಲ್ಲ. ಈಗಲಾದರೋ ಹದಿನಾಲ್ಕು ವರ್ಷಕಾಲ ವನವಾಸಕ್ಕೆಂದು ತೆರಳಿದ ಮುದ್ದು ಮಕ್ಕಳನ್ನು ಕೊನೆಯ ಸಾರಿ ನೋಡಬೇಕೆಂದರೂ ಮುಖ ಸಿಕ್ಕದೆ ಮುದುಕನು ಶೋಕಪರವಶನಾಗುವನು. ಹೃದಯವು ಬೆಂದು, ಬುದ್ಧಿಯು ಕಂದಿ, ದೇಹವು ಕುಗ್ಗಿ, ಹುಚ್ಚು ಹಿಡಿದಂತಾಗುವುದು.

ಎರಡನೆಯಂಕವೆಲ್ಲವೂ ಶೋಕಮಯ. ಬರಿಯ ಅಳುವನ್ನು ಒಂದು ಅಂಕದ ತುಂಬ ತುಂಬುವುದು ಅಸಾಧ್ಯವಾದ ಕೆಲಸ. ಭಾಸನು ಈ ಅಸಾಧ್ಯವನ್ನು ಸಾಧಿಸಿದ್ದಾನೆ. ದಶರಥನ ಮನಸ್ಸಿನ ತುಂಬ ಸೀತಾರಾಮಲಕ್ಷ್ಮಣರೇ; ಬಾಯಲ್ಲಿ ಸದಾ ಅವರೇ; ಅವನು ಒಂದು ಸಲ ರಾಮನ ಲೋಭರಾಹಿತ್ಯವನ್ನು ಮೆಚ್ಚುವನು; ಇನ್ನೊಂದು ಸಲ "ಮುದುಕನೂ ತಂದೆಯೂ ಆದ ನನ್ನನ್ನು ಉಳಿದು ನೀನು ಮಾಡುವ ಅಸಂಬದ್ಧವಾದ ಧರ್ಮಕಾರ್ಯವೇನು? ಹಾ!! ಛಿ!" ಎಂದು ಹಳಿಯುವನು. "ಅಯ್ಯೋ! ರಾಮನು ಮತ್ತಾರ ಹೊಟ್ಟೆಯಲ್ಲಾದರೂ ಹುಟ್ಟಿ ಸುಖವಾಗಿರದೆ ನನ್ನ ಹೊಟ್ಟೆಯಲ್ಲೇಕೆ ಹುಟ್ಟಿ ಕಷ್ಟಕ್ಕೆ ಗುರಿಯಾದ!" ಎಂದು ಕೊರಗುವನು. "ಈ ಕೈಕೆ ಹೆಣ್ಣು ಹುಲಿಯಾಗಿ ಹುಟ್ಟಿ ಕಾಡಿನಲ್ಲಿರಬೇಕಾಗಿತ್ತು!" ಎಂದು ಅವಳ ಕ್ರೌರ್ಯವನ್ನು ನೆನೆಯುವನು. ರಾಮ ಲಕ್ಷ್ಮಣರ ಹೆಸರು ಯಾರ ಬಾಯಲ್ಲಾದರೂ ಯಾವ ಸಂದರ್ಭವಲ್ಲಾದರೂ ಬಂದರೆ, ತನ್ನ

ಮಕ್ಕಳೇ ಬಂದರೇನೋ ಎಂದು ಆಶೆಯಿಂದ ತಟ್ಟನೆ ಏಳುವನು; ಏಳುವುದಕ್ಕೆ ಕೈಲಾಗದೆ ಬೀಳುವನು. ಸೀತಾರಾಮರ ಹಿಂದೆ ಹೋಗಿದ್ದ ಸುಮಂತ್ರನು ಬಂದನೆಂದರೆ, ತನ್ನ ಮಕ್ಕಳನ್ನು ಕರೆದುಕೊಂಡುಬಂದನೋ ಏನೋ ಎಂದು ಚಪಲ; ಇಲ್ಲ; ಆ ಶೋಕಭರದಲ್ಲಿ, ಸನ್ನಿ ಹಿಡಿದವರಂತೆ, ಮಾತಿನ ರೀತಿಯನ್ನು ಬದಲಾಯಿಸಿ, ತನ್ನನ್ನು ತಾನು ತಿದ್ದಿಕೊಂಡವನಂತೆ "ನಾನು ಅಸಂಗತವಾದ ಮಾತನಾಡಿದೆ; ಇದು ತಪಸ್ವಿಗಳಿಗೆ ಉಚಿತವಾದ ಪ್ರಶ್ನೆಯಲ್ಲ; ಆದಕಾರಣ ಹೇಳು, ತಪಸ್ವಿಗಳಾದ ಅವರ ತಪಸ್ಸು ವರ್ಧಿಸುತ್ತಿರುವುದೇ?........" ಎಂದು ಯಾರೋ ಋಷಿಗಳ ವಿಚಾರವನ್ನು ಪ್ರಶ್ನೆಮಾಡುವಂತೆ ಗಂಭೀರವಾಗಿ ಕೇಳುವನು. ಅವರನ್ನು ನೋಡುವುದು ಅಸಾಧ್ಯವಾಗಿರುವುದರಿಂದ ಈಗ ಅವರ ಹೆಸರನ್ನು ಕೇಳುವುದೂ ಸಂತೋಷಕರವಾಗಿದೆ; ಅವುಗಳನ್ನು ಎಷ್ಟು ಸಾರಿ ಕಿವಿಯಿಂದ ಕೇಳಿ ಎಷ್ಟುಹೊತ್ತು ಬಾಯಲ್ಲಿ ಹೇಳಿಕೊಳ್ಳುತ್ತಿದ್ದರೆ ಅಷ್ಟು ಸಂತೋಷ.—ಆದ್ದರಿಂದ ಸುಮಂತ್ರನು, "ಎಲ್ಲರೂ ಮಹಾರಾಜನನ್ನು ಕುರಿತು ಹೇಳಿದರು" ಎಂದಾಗ ಅವನಿಗೆ ತೃಪ್ತಿ ಇಲ್ಲ: "ಅವರ ಹೆಸರುಗಳನ್ನು ಸರಿಯಾಗಿ ಹೇಳು" ಎನ್ನುವನು. ಸುಮಂತ್ರನು ಮೊದಲು ರಾಮನ ಹೆಸರನ್ನು ಹೇಳುವನು. ದಶರಥನು ಅದನ್ನು ತಾನು ಬಾಯಲ್ಲಿ ಹೇಳಿ, ಚಪ್ಪರಿಸಿ,—"ರಾಮ, ಇವನು ರಾಮ; ಇವನ ಹೆಸರನ್ನು ಕೇಳಿದುದರಿಂದ ಇವನನ್ನು ನೋಡಿದಂತೆ ನನಗೆ ತೋರುವುದು; ಆಮೇಲೆ?" ಎನ್ನುವನು.

ಸುಮಂತ್ರ.—"ಆಯುಷ್ಮಂತನಾದ ಲಕ್ಷ್ಮಣ."

ರಾಜ.—"ಇವನು ಲಕ್ಷ್ಮಣ. ಆಮೇಲೆ?...."

ಸುಮಂತ್ರ.—"ಆಯುಷ್ಮತಿ ಜನಕರಾಜ ಪುತ್ರಿ."

ರಾಜ.—"ಇವಳು ಜಾನಕಿ. ರಾಮ, ಲಕ್ಷ್ಮಣ, ಜಾನಕಿ—ಎಂಬುದಿದು ಅಕ್ರಮ."

(ಅವನಿಗೆ, ಹೆಸರುಗಳನ್ನು ಒಂದುಸಾರಿ ಕೇಳಿ, ತಾನು ಒಂದುಸಾರಿ ಬೇರೆ ಬೇರೆ ಹೇಳಿ, ಆಮೇಲೆ ಒಟ್ಟಿಗೆ ಹೇಳಿದರೂ ತೃಪ್ತಿಯಿಲ್ಲ; ತಿರುಗಿ ಕೇಳಬೇಕೆಂಬ ಆಶೆ; ಆದ್ದರಿಂದ ಈ ನೆಪ; ಸೀತೆಯ ಮೇಲಣ ಪ್ರೇಮವೂ ಹೌದು.)

ಸುಮಂತ್ರ.—"ಆದರೆ ಕ್ರಮವಾವುದು?"

ರಾಜ.—"ರಾಮ, ಜಾನಕಿ, ಲಕ್ಷ್ಮಣ–ಎಂದು ಹೇಳು. ಜಾನಕಿ ರಾಮನಿಗೂ ಲಕ್ಷ್ಮಣನಿಗೂ ನಡುವೆ ಇರಲಿ!"

ತಿರುಗಿ ಸುಮಂತ್ರನು, ಆ ಕ್ರಮದಲ್ಲಿ ಒಂದೊಂದಾಗಿ ಹೇಳುವನು; ದಶರಥನೂ ನಿದಾನವಾಗಿ ಹೇಳುವನು. ಮಹಾರಾಜನಿಗೆ ಸ್ವಲ್ಪ ಸಮಾಧಾನವಾಯಿತೇನೋ ಎಂದು ಸುಮಂತ್ರನ ಯೋಚನೆ. ಆದರೆ ದಶರಥನ ಆ ಶಾಂತಿಯು ಕಾಯುತ್ತಿರುವ ಹಾಲಿನ ಮೇಲಣ ಕೆನೆ. ಉತ್ತರಕ್ಷಣದಲ್ಲಿಯೇ ಅದು ಉಕ್ಕಿ ಹರಿದು ಸುರಿದು ಬೆಂದುಹೋಗುವುದು. ಹಾಗೇ, ದಶರಥನೂ "ರಾಮ! ಜಾನಕಿ! ಲಕ್ಷ್ಮಣ! ಮಕ್ಕಳಿರಾ! ನೀವು ನನ್ನನ್ನು ಅಪ್ಪಿಕೊಳ್ಳಿ!" ಎಂದು ಅರಚುವನು. "ರಾಮನು ಬಂದು ಈಗ ಒಂದು ಸಾರಿ ನನ್ನನ್ನು ಮುಟ್ಟಿದರೆ, ಕೊನೆಗೆ ಒಂದುಸಾರಿ ಕಣ್ಣಿಗೆ ಬಿದ್ದರೆ, ಅಮೃತ ಕುಡಿದಂತೆ ಬದುಕಿಕೊಂಡೇನು!" ಎಂದು ಹಂಬಲಿಸುವನು. ಆದರೆ ಊರಲ್ಲಿ ಇಲ್ಲದವರನ್ನು ಹೆಸರಿಟ್ಟು ಕರೆದರೆ ಅವರು ಬಂದಾರೇ?

ಇಷ್ಟೂ, ಸುಮಿತ್ರೆಯ ಪ್ರಶ್ನೆಗೆ ಉತ್ತರವಾಗಿ, ರಾಮಾದಿಗಳ ಸಂದೇಶವನ್ನು ಸುಮಂತ್ರನು ಹೇಳಹೊರಟಾಗ ನಡೆದದ್ದು. ಅವರ ಸಂದೇಶವೇನು? ಅದನ್ನು ನಾವು ಕುತೂಹಲದಿಂದ ಎದುರುನೋಡುತ್ತಿರುವಾಗ, ಇತರ ಕವಿಗಳು ಲೆಕ್ಕಾಚಾರ ಮಾಡಿ ವಕ್ತೃಶ್ರೋತೃಗಳಿಗೆ ಒಬ್ಬೊಬ್ಬರಿಗೆ ಇಷ್ಟಿಷ್ಟೆಂದು ಅಳತೆ ತೂಕ ಮಾಡಿ ಶ್ಲೋಕಗಳನ್ನು ಹಂಚಿ ಹೇಳಿಸಿಬಿಡುವಾಗ, ಭಾಸನು ಬರಿಯ ಕೈಯಲ್ಲಿ ಬಣ್ಣ ಕಟ್ಟಿಬಿಟ್ಟಿದ್ದಾನೆ. ಶ್ರಾವ್ಯವಾಗಿರಬೇಕಾದ ಸಂದೇಶಕ್ಕೆ ಬದಲಾಗಿ ಅದಕ್ಕಿಂತ, ಕಾವ್ಯದೃಷ್ಟಿಯಲ್ಲಿ, ಅಭಿರಾಮತರವಾದ ಅಶ್ರುತ ಸಂದೇಶವನ್ನು ತಂದಿಟ್ಟು ತನ್ನ ಕೌಶಲವನ್ನು ವ್ಯಕ್ತಗೊಳಿಸಿದ್ದಾನೆ. ಮೊದಲನೆಯ ಅಂಕದ ಕೊನೆಯಲ್ಲಿ ತಂದೆಗೆ ಮುಖವನ್ನು ತೋರಿಸದೆ ಹೊರಟುಬಿಟ್ಟರೂ, ರಾಮಾದಿಗಳಿಗೆ ದುಃಖವಿಲ್ಲದಿರಲಿಲ್ಲ: ಒಳಗೆ ನಿಗೂಢವಾಗಿತ್ತು. ದಶರಥನನ್ನು ಕಂಡರೆ ಅದು ಹೊರಬಿದ್ದು ಧೈರ್ಯ ಸಾಲದೆ ಸಂಕಲ್ಪ ವಿಘಾತವಾಗಲಾರದೀತೋ ಎಂದು ಹೆದರಿ, ಹೊರಟುಬಿಟ್ಟರು. ಈಗ ಅದು ವ್ಯಕ್ತವಾಗುವುದು. ಅವರು "ಶೃಂಗಿಬೇರಪುರದಲ್ಲಿ

ರಥದಿಂದ ಇಳಿದು ಅಯೋಧ್ಯಾಭಿಮುಖರಾಗಿ ನಿಂತು ಎಲ್ಲರೂ ಬಿನ್ನವಿಸಲು ಆರಂಭಿಸಿದರು. ಬಹಳ ಹೊತ್ತು ಯೋಚಿಸಿ ಯೋಚಿಸಿ, ಏನನ್ನೊ ಹೇಳಬೇಕೆಂದು ಪ್ರಯತ್ನಮಾಡಿದರು; ತುಟಿಗಳು ಅಲುಗಿದುವು. ಕಣ್ಣೀರು ಬಂದು ಕೊರಲ ಸೆರೆ ಬಿಗಿಯಿತು. ಮಾತೇ ಹೊರಡಲಿಲ್ಲ. ಆದ್ದರಿಂದ ಏನನ್ನೂ ಹೇಳದೆಯೇ ಮುಂದಕ್ಕೆ ಹೊರಟುಹೋದರು.''

ಇದು ಅಪೂರ್ವ ಸಂದೇಶಪ್ರದಾನ ವಿವರಣ ಕ್ರಮ; ಇದನ್ನು ಮತ್ತಾವ ಕವಿಯೂ ಅನುಸರಿಸಿಲ್ಲ. ''ಮಾತು ಬೆಳ್ಳಿ, ಮೌನ ಬಂಗಾರ'' ಎಂಬಂತೆ ಇಲ್ಲಿ ಏನೂ ಸಂದೇಶವನ್ನು ಹೇಳಿಸದೆ, ಹೇಳಿದ್ದಕ್ಕಿಂತ ಹೆಚ್ಚಾಗಿ ಕವಿಯು ರಸಪುಷ್ಟಿಯನ್ನು ತಂದಿರುವನು.

ಸುಮಂತ್ರನ ಈ ಮಾತನ್ನು ಕೇಳಿ, ಅದರಿಂದ ಧ್ವನಿತವಾದ ರಾಮಾದಿಗಳ ದುಃಖವನ್ನು ನೆನೆದು, ಮಹಾರಾಜನು ಮೂರ್ಛೆಹೋಗುವನು. ರಾಮನಿಲ್ಲದಾಗ ರಾಮನ ತಾಯಿಯನ್ನಾದರೂ ಮುಟ್ಟಿದರೆ ಮನಸ್ಸಿಗೆ ಸ್ವಲ್ಪ ಹಿತವಾಗುವುದೇನೋ ಎಂದು ಅವಳನ್ನು ನೋಡುವನು. ಅವಳು ಹತ್ತಿರದಲ್ಲಿಯೇ ಇದ್ದರೂ ಕಣ್ಣಿಗೆ ಬೀಳಳು; ಇಂದ್ರಿಯಗಳು ಆಗಲೆ ಸ್ವಾಧೀನ ತಪ್ಪುತ್ತ ಬಂದು, ಪ್ರಾಣದೀಪವು ನಂದುತ್ತಿತ್ತು. ಆಗಲೂ, ''ರಾಮ, ನಿನಗೆ ರಾಜ್ಯವನ್ನು ಒಪ್ಪಿಸಿ ನಾನು ಕಾಡಿಗೆ ಹೋಗಬೇಕೆಂದಿದ್ದೆ; ಆದರೆ ನನಗೆ ರಾಜ್ಯವೊಪ್ಪಿಸಿ ನೀನೇ ಕಾಡಿಗೆ ಹೋದೆಯಾ'' ಎಂದು ರಾಮನನ್ನು ನೆನೆದು, ''ಇಗೋ, ರಾಮ ಕಾಡಿಗೆ ಹೋದ; ನಾನು ಪ್ರಾಣಬಿಟ್ಟೆ; ಇನ್ನು ನಿನ್ನ ಮಗನನ್ನು ಕರೆಸಿಕೋ! ಪಾಪಿ, ನಿನ್ನ ಪಾಪ ಫಲಿಸಲಿ!'' ಎಂದು ಕೈಕೆಗೆ ಹೇಳಿಕಳುಹಿಸುವನು. ಅಂತ್ಯಕಾಲದಲ್ಲಿ ಪಿತೃಗಳು ದರ್ಶನವಿತ್ತು ಅವನನ್ನು ಕರೆದುಕೊಂಡುಹೋಗುವರು. ಸಾಯುವಾಗಲೂ ಅವನ ಬಾಯಲ್ಲಿ ಕೊನೆಯ ಮಾತುಗಳು—ರಾಮ, ಜಾನಕಿ, ಲಕ್ಷ್ಮಣ!

ಮೂರನೆಯ ಅಂಕದಲ್ಲಿ ಕವಿಯು ಭರತನನ್ನು ಪ್ರವೇಶಗೊಳಿಸಿ, ಅವನು ದಶರಥನ ಮರಣ ವೃತ್ತಾಂತವನ್ನು ಅರಿತ ಬಗೆ, ಅದು ಅವನ ಮೇಲೆ ಉಂಟುಮಾಡಿದ ಪರಿಣಾಮ—ಇವುಗಳನ್ನು ವಿವರಿಸುತ್ತಾನೆ.

ಮಹಾರಾಜನ ಮರಣಾನಂತರ, ಸೋದರಮಾವನ ಮನೆಯಲ್ಲಿದ್ದ ಭರತನನ್ನು ಕರೆತರಲು ಸೂತನು ರಥವನ್ನು ತೆಗೆದುಕೊಂಡುಹೋಗುವನು. ಆದರೆ ಮಹಾರಾಜನಿಗೆ ದೇಹದಲ್ಲಿ ಅಸ್ವಸ್ಥತೆಯೆಂದು ಮಾತ್ರ ಹೇಳುವನು; ಇಲ್ಲದಿದ್ದರೆ ಒಂದರಿಂದ ಒಂದರಂತೆ, ತಂದೆಯ ಸಾವು, ತಾಯಿಯ ಲೋಭ, ಅಣ್ಣನ ವನವಾಸ— ಈ ಮೂರನ್ನೂ ತಿಳಿಸಬೇಕಾಗಿತ್ತು; ಸೂತನಿಗೆ ಇದಕ್ಕೆ ಮನಸ್ಸು ಬರದು. ಆದರೆ ಭರತನಿಗೆ ಮನಸ್ಸಿನಲ್ಲಿ ಕಳವಳ. ಆದ್ದರಿಂದ ತನ್ನ ತಂದೆಗೆ ಏನು ಕಾಯಿಲೆ, ವೈದ್ಯರು ಏನೆನ್ನುತ್ತಾರೆ, ಊಟಮಾಡುತ್ತಾನೆಯೇ, ನಿದ್ರೆ ಬರುತ್ತದೆಯೇ, ಜೀವಕ್ಕೆ ಏನೂ ಮೋಸವಿಲ್ಲವೇ ಎಂದು ತಂದೆಯ ದೇಹಸ್ಥಿತಿಯನ್ನು ಕೆದಕಿ ಕೆದಕಿ ಕೇಳುವನು. ಸೂತನೂ ದ್ವಂದ್ವಾರ್ಥವಾಗುವಂತೆ ಉಪಾಯವಾಗಿ ಉತ್ತರಕೊಟ್ಟು ತಪ್ಪಿಸಿಕೊಂಡು, ಅಂತು ಇಂತು ಅಯೋಧ್ಯೆಯ ಹತ್ತಿರಕ್ಕೆ ಬರುವನು. ಊರಿನ ಹತ್ತಿರಕ್ಕೆ ಬಂದ ಬಂದಹಾಗೆಲ್ಲಾ ಭರತನಿಗೆ ಔತ್ಸುಕ್ಯ ಹೆಚ್ಚುವುದು— ತಾನು ತಂದೆಗೆ ನಮಸ್ಕರಿಸಿ ಆಶೀರ್ವಾದ ಪಡೆಯುವಂತೆಯೂ, ಅವನು ತನ್ನನ್ನು ಕೈಯಿಂದ ಎತ್ತಿ ನಿಲ್ಲಿಸುವಂತೆಯೂ, ಸೋದರರೆಲ್ಲರೂ ತಟ್ಟನೆ ಬಂದು ತನ್ನ ಸುತ್ತಲೂ ಮುತ್ತಿಕೊಳ್ಳುವಂತೆಯೂ, ಲಕ್ಷ್ಮಣನು ತನ್ನ ನಡೆನುಡಿಯನ್ನು ಕಂಡು ಪರಿಹಾಸ್ಯ ಮಾಡುವಂತೆಯೂ ಮನಸ್ಸಿನಲ್ಲಿಯೆ ಚಿತ್ರಿಸಿಕೊಳ್ಳುವನು. ಆದರೆ ಅತಿಯಾಸೆ ಗತಿಕೆಡಿಸುವುದು; ಅಯೋಧ್ಯೆಯ ಊರುಬಾಗಿಲನ್ನು ಸೇರುತ್ತಿದ್ದಹಾಗೇ, ಎಡವಿದಂತೆ ನಿಲ್ಲಬೇಕಾಗುವುದು. ಊರಿನೊಳಕ್ಕೆ ಹೋಗಲು ಲಗ್ನ ಚೆನ್ನಾಗಿಲ್ಲ, ಆದ್ದರಿಂದ ಸ್ವಲ್ಪ ತಡೆಯಬೇಕೆಂದು "ಗುರುಗಳು" ಹೇಳಿಕಳುಹಿಸುವರು. "ಊರಿಗೆ ಬಂದಾಗ ಊರಬಾಗಲಲ್ಲಿ ಸ್ವಲ್ಪ ಕುಳಿತುಕೊಂಡೇ ಒಳಗೆ ಹೋಗಬೇಕೆಂಬ ಪದ್ಧತಿಯುಂಟು-ಅದನ್ನು ನಡೆಸಿದಹಾಗೂ ಆಯಿತು, ಗುರುಗಳ ಮಾತನ್ನು ಅನುಸರಿಸಿದಹಾಗೂ ಆಯಿತು" ಎಂದುಕೊಂಡು, ತನಗೆ ಉತ್ಸಾಹಭಂಗವಾದರೂ, ಅಲ್ಲಿಯೆ ದೇವಸ್ಥಾನದಂತೆ ಕಾಣುತ್ತಿದ್ದ ಒಂದು ಕಟ್ಟಡದ ಹತ್ತಿರಕ್ಕೆ ಹೋಗುವನು. ಅದರಲ್ಲಿ ದೇವಸ್ಥಾನದ ಚಿಹ್ನೆಗಳಿರಲಿಲ್ಲ; ಆದರೆ ಹೊಸದಾಗಿ ಅದಕ್ಕೆ ಅಲಂಕಾರಾದಿಗಳನ್ನು ಮಾಡಿದ್ದರು; ಆದ್ದರಿಂದ ಕುತೂಹಲಿತನಾಗಿ

ಒಳಹೊಕ್ಕು ನೋಡಲು, ಅಲ್ಲಿ ನಾಲ್ಕು ಶಿಲಾಮೂರ್ತಿಗಳು ಇದ್ದುವು. ಅವು ದೇವಮೂರ್ತಿಗಳಾಗಿರಬೇಕೆಂದು ಅವುಗಳಿಗೆ ವಂದಿಸುತ್ತಿರುವ ವೇಳೆಗೆ ದೇಗುಲಿಗನು ಬಂದು, ಅವು ಕ್ಷತ್ರಿಯರ ವಿಗ್ರಹವೆಂದೂ, ಇಕ್ಷ್ವಾಕುಗಳದೆಂದೂ ಕ್ರಮವಾಗಿ ತಿಳಿಸುವನು. ಕುತೂಹಲಿತನಾದ ಭರತನ ಪ್ರಶ್ನೆಗೆ ಉತ್ತರವಾಗಿ ಮೊದಲನೆಯದು ದಿಲೀಪನದು, ಎರಡನೆಯದು ರಘುವಿನದು, ಮೂರನೆಯದು ಅಜನದು ಎಂದು, ಅವರವರ ಮಹಿಮಾ ವರ್ಣನಪೂರ್ವಕವಾಗಿ, ಪರಿಚಯ ಮಾಡಿಕೊಡುವನು. ಅಲ್ಲಿಂದ ಮುಂದೆ ನಾಲ್ಕನೆಯದಾದ ದಶರಥನ ವಿಗ್ರಹವನ್ನು ನೋಡುತ್ತಲೆ ಕಳವಳವುಂಟಾಗಿ ಭರತನು ತಿರುಗಿ ಆ ಹೆಸರುಗಳನ್ನೆಲ್ಲಾ ಮೊದಲಿಂದ ಕ್ರಮವಾಗಿ ಹೇಳಿಸುವನು—ದಿಲೀಪ, ತನ್ನ ಮುತ್ತಜ್ಜನ ತಂದೆ; ರಘು, ತನ್ನ ಮುತ್ತಜ್ಜ; ಅಜ, ತನ್ನ ಅಜ್ಜ. ಮುಂದೆ ದಶರಥ ಬರಬೇಕಷ್ಟೆ? ಅವನ ವಿಚಾರವನ್ನು ಕೇಳಲು ಹೆದರಿಕೆ. ಆದ್ದರಿಂದ ಮನಸ್ಸು ಹಿಂತೆಗೆಯುತ್ತ "ನಿನ್ನನ್ನು ಸ್ವಲ್ಪ ಕೇಳುವೆನು, ಜೀವಿಸಿರುವವರ ಪ್ರತಿಮೆಗಳನ್ನೂ ಇಲ್ಲಿ ಇಡುವುದುಂಟೆ?" ಎಂದು ಪ್ರಶ್ನೆಮಾಡುವನು. "ಇಲ್ಲ, ದಿವಂಗತರಾದವರ ಪ್ರತಿಮೆಗಳನ್ನೇ" ಎಂದು ಉತ್ತರ ಬರುವುದು. "ಹಾಗಾದರೆ—" ಎಂದು ಭರತನು ಮತ್ತೆ ನಿರಾಶನಾಗಿ ಪ್ರಶ್ನೆಗೆ ಆರಂಭಿಸುವನು. ಅವನನ್ನು ಆಗಲೇ ಗುರುತಿಸಿದ್ದ ದೇಗುಲಿಗನಿಗೆ ಇನ್ನು ತಡೆಯಲಾಗದೆ, "ಹೆಂಗಸಿನ ಶುಲ್ಕಕ್ಕಾಗಿ ಪ್ರಾಣವನ್ನೂ ರಾಜ್ಯವನ್ನೂ ಕೊಟ್ಟ ದಶರಥನ ಪ್ರತಿಮೆಯನ್ನು ಏಕೆ ಕೇಳಲೊಲ್ಲೆ?" ಎನ್ನಲು, ಭರತನು ತಾನು ಯಾವುದನ್ನು ಕುರಿತು ಶಂಕಿಸುತ್ತಿದ್ದನೋ ಅದೇ ಆದದ್ದಕ್ಕಾಗಿ ಸಿಡಿಲು ಬಡಿದವನಂತೆ ಮೂರ್ಛೆಹೋಗುವನು. ಸೀತಾ ಲಕ್ಷ್ಮಣರೊಡಗೂಡಿ ರಾಮನು ಕಾಡಿಗೆ ತೆರಳಿದನೆಂಬ ಅಂಶವೂ ಗೊತ್ತಾಗುವುದು. ಅದಕ್ಕೆ ಕಾರಣವೇನೆಂಬುದು ದೇಗುಲಿಗನಿಗೆ ಗೊತ್ತಿಲ್ಲ; ಆದ್ದರಿಂದ ಇನ್ನು ಸ್ವಲ್ಪ ವಿಚಾರ ಮಾಡಲು ದೇಗುಲಿಗನು "ಮಹಾರಾಜನು ರಾಮನನ್ನು ರಾಜ್ಯದಲ್ಲಿ ಅಭಿಷೇಚಿಸುತ್ತಿರಲು, ನಿನ್ನ ಜನನಿಯೆಂದಳು...." ಎಂದು ಆರಂಭಿಸುವನು. ಮುಂದಕ್ಕೆ ಹೇಳುವುದು ಆವಶ್ಯಕವಾಗಿರಲಿಲ್ಲ; ಭರತನು "ಸಾಕು ಸಾಕು ಗೊತ್ತಾಯಿತು; ತನ್ನ ಆ ಹಾಳು ಶುಲ್ಕವನ್ನು ಜ್ಞಾಪಿಸಿದಳು;

ತನ್ನ ಮಗ ರಾಜನಾಗಬೇಕು ಎಂದಳು; ಅದೇ ಧೈರ್ಯದಿಂದ ಅಣ್ಣನನ್ನು ಕುರಿತು 'ಮಗು, ವನಕ್ಕೆ ತೆರಳಯ್ಯಾ!' ಎಂದಳು. ಅಣ್ಣ ನಾರುಮುಡಿಯುಟ್ಟದ್ದನ್ನು ನೋಡಿ ಮಹಾರಾಜನು ಮೃತನಾದನು.—ಪ್ರಜೆಗಳು ನನ್ನನ್ನು ಛೀ ಎನ್ನುತ್ತಿದ್ದಾರೆ" ಎಂದು ಪೂರೈಸಿದನು. ಅವನಿಗೆ ತನ್ನ ತಂದೆಯೂ ಅಣ್ಣನೂ ಇಲ್ಲದ ಅಯೋಧ್ಯೆ, ಅಯೋಧ್ಯೆಯಾಗಿ ಕಾಣದೆ ಕಾಡಿನಂತೆ ತೋರಿತು. ಆದ್ದರಿಂದ ಹಾಗಿಂದ ಹಾಗೇ ರಾಮನನ್ನು ಹುಡುಕಿಕೊಂಡು ಹೊರಡಲನುವಾಗಿ ಪ್ರತಿಮಾ ಪೀಠದಲ್ಲಿ ಮೂರ್ಛಿತನಾಗುವನು.

ಇಷ್ಟುಹೊತ್ತಿಗೆ ಮಹಾರಾಣಿಯರು ಪ್ರತಿಮಾ ಗೃಹವನ್ನು ನೋಡಲು ಅಲ್ಲಿಗೆ ಬರುವರು. ಭರತನು ಅವರನ್ನು ಕಾಣುವ ರೀತಿಯಲ್ಲಿ ಅವನ ಉದ್ವೇಗವು ಚೆನ್ನಾಗಿ ವ್ಯಕ್ತವಾಗುತ್ತದೆ. ತನ್ನನ್ನು ನೋಡಲು ಬಂದ ಮಾತೆಯರನ್ನು ಈಗ ಹೇಗೆ ಕಾಣಬೇಕು, ಹೇಗೆ ಅಭಿವಂದಿಸಬೇಕು, ಅವರ ಯೋಗಕ್ಷೇಮವನ್ನು ಹೇಗೆ ವಿಚಾರಿಸಬೇಕೆಂಬುದು ಅವನಿಗೆ ತಿಳಿಯದು. ಏಕೆಂದರೆ, ಅವರು ಹಿಂದಿನಂತಿಲ್ಲ; ಪತಿಯನ್ನು ಕಳೆದುಕೊಂಡಿದ್ದಾರೆ. ಆದ್ದರಿಂದ ಸುಮಂತ್ರನು ಅದನ್ನು ತಿಳಿಸುವನು. ಮೊದಲು ಕೌಸಲ್ಯೆ; ಆಕೆಯನ್ನು ನೋಡಿ, "ಮಾತೆ, ನಿರಪರಾಧನಾದ ನಾನು ನಮಸ್ಕರಿಸುವೆನು" ಎಂದು ಅಭಿವಂದಿಸುವನು; ಆಕೆ ತನ್ನ ಹೊಟ್ಟೆಯು ತುಂಬ ಸಂತಾಪವನ್ನು ತುಂಬಿಕೊಂಡಿದ್ದರೂ ಭರತನ ಸಂತಾಪವೇನೂ ಕಡಮೆಯದಲ್ಲವೆಂದು ಅರಿತು, "ವತ್ಸ, ಸಂತಾಪರಹಿತನಾಗು!" ಎಂದು ಆಶೀರ್ವದಿಸುವಳು; ಆದ್ದರಿಂದ ಆ ಮಾತು ಅವನ ಹೃದಯವನ್ನು ಭೇದಿಸುವುದು. ಆಮೇಲೆ ಸುಮಿತ್ರೆ; ಕೊನೆಗೆ ಕೈಕೆ. ಸುಮಂತ್ರನು ಕೈಕೆಯನ್ನು "ಈಕೆ ನಿನ್ನ ಜನನಿ" ಎನ್ನುವನು. ಮಿಕ್ಕವರನ್ನು, ತನ್ನ ಚಿಕ್ಕಮ್ಮ ದೊಡ್ಡಮ್ಮಂದಿರನ್ನು, "ಮಾತೆ!" ಎಂದು ಕರೆದು ನಮಸ್ಕರಿಸಿದವನು ತನ್ನ ಹೆತ್ತ ತಾಯನ್ನು ಕಂಡ ಕೂಡಲೆ ಕೋಪದಿಂದೆದ್ದು "ಆಃ, ಪಾಪೆ, ಗಂಗಾಯಮುನೆಯರ ಮಧ್ಯೆ ಸೇರಿಕೊಂಡ ಕ್ಷುದ್ರ ತೊರೆಯಂತೆ ನನ್ನ ಮಾತೆಯರ ಮಧ್ಯೆ ನೀನು ಏಕೆ ಸೇರಿಕೊಂಡಿದ್ದೀಯೆ?"—ಎಂದು ಬೈಗುಳ ಮಳೆಗೆ ಮೊದಲುಮಾಡುವನು. ಕೈಕೆಯು ಅಪ್ರತಿಭಳಾಗಿ,

“ನಾನೇನು ಮಾಡಿದೆ, ಮಗು!” ಎಂದು ಕೇಳುವಳು. ಭರತನಿಗೆ ತಡೆಯಲಾಗಲಿಲ್ಲ. ಉರಿಯುವ ಎಣ್ಣೆಗೆ ನೀರು ಹಾಕಿದ ಹಾಗಾಯಿತು. ಆದ್ದರಿಂದ “ಏನು ಮಾಡಿದೆಯಾ? ಒಂದೊಂದು ಮಾಡಿದೆಯೇನು? ನೀನು ಮಾಡಿಟ್ಟುದ್ದನ್ನು ಹೇಳುತ್ತೇನೆ ಕೇಳು— ನನಗೆ ಅಪಕೀರ್ತಿ, ರಾಮನಿಗೆ ವನವಾಸ, ಮಹಾರಾಜನಿಗೆ ಮರಣ, ಅಯೋಧ್ಯೆಗೆ ಪ್ರಲಾಪ, ಲಕ್ಷ್ಮಣನಿಗೆ ಮೃಗ ಸಹವಾಸ, ತಾಯಿಯರಿಗೆ ಅಳಲಿಕೆ, ಸೀತೆಗೆ ಬಳಲಿಕೆ, ನಿನಗೆ ಛಿ ಛಿ ಎಂಬ ದಾರುಣೋಕ್ತಿ—”ಎಂದು ಪಟಪಟನೆ, ಕೆನ್ನೆಯಮೇಲೆ ಹೊಡೆಯುವಂತೆ ಅಂದುಬಿಡುವನು. ಕೌಸಲ್ಯೆಯು ಮನನೊಂದು “ಮಗು, ನೀನು ಎಲ್ಲಾ ನಡೆವಳಿಯನ್ನೂ ಬಲ್ಲವನು, ಅದೇಕೆ ತಾಯಿಯನ್ನು ವಂದಿಸದಿರುವೆ?” ಎಂದು ಅವನನ್ನು ಸಂತಯಿಸಲು ಹೋಗುವಳು. ಆದರೆ ಭರತನಿಗೆ ಸಮಾಧಾನವಾಗಲೊಲ್ಲದು. “ತಾಯಿಯಂತೆ ತಾಯಿ! ನೀನೇ ನನ್ನ ತಾಯಿ; ತಗೋ ನಿನಗೇ ವಂದಿಸುತ್ತೇನೆ. ಅವಳು ಮೊದಲು ತಾಯಿಯಾಗಿದ್ದಳು, ಈಗ ಅಲ್ಲ. ದೋಷ ಕಂಡುಬಂದರೆ ಮಕ್ಕಳು ಮಕ್ಕಳಲ್ಲವೆಂದು ತೊರೆದುಬಿಡುತ್ತಾರೆಯೋ ಇಲ್ಲವೋ, ಹಾಗೆಯೇ ನಾನೂ ಪತಿದ್ರೋಹ ಮಾಡಿದ ತಾಯಿ ತಾಯಿಯಲ್ಲವೆಂದು ತೊರೆದುಬಿಡುತ್ತೇನೆ” ಎಂದನು. “ಮಹಾರಾಜನ ಸತ್ಯವಚನವನ್ನು ರಕ್ಷಿಸುವುದಕ್ಕಾಗಿ ನಾನು ಹಾಗೆ ಕೇಳಿದೆ” ಎಂದು ಕೈಕೆಯು ಮೆಲ್ಲಗೆ ಬಾಯಿಹಾಕುವಳು. ಭರತನಿಗೆ ಮತ್ತೂ ರೇಗುವುದು. “ನಿನ್ನ ಮಗನಿಗೆ ರಾಜ್ಯವಾಗಬೇಕೆಂದು ಕೇಳಿದೆಯಲ್ಲಾ, ರಾಮ ನಿನಗೇನಾಗಬೇಕು? ಅವನು ನನ್ನ ತಂದೆಗೆ ಮಗನಲ್ಲವೇ? ಅವನಿಗೆ ಅಭಿಷೇಕವಾಗಬಾರದೇ? ಅವನ ತಮ್ಮಂದಿರು ಬೇಡವೆಂದರೇ? ಪ್ರಜೆಗಳು ಒಪ್ಪಲಿಲ್ಲವೇ? ಅವನು ಸಮಸ್ತ ಸಂಪತ್ತನ್ನೂ ವರ್ಜಿಸಿ ನಾರುಡೆಯುಟ್ಟು ಹೆಂಡತಿಯೊಡನೆ ಕಾಲ್ನಡೆಯಲ್ಲಿ ಕಾಡಿಗೆ ಹೋಗುವಂತೆ ಮಾಡಿದೆಯಲ್ಲಾ, ಇದೆಲ್ಲಾ ನಿನ್ನ ಮೊದಲಿನ ವರದಲ್ಲಿತ್ತೆ? ನಿನಗೆ ಅಪಯಶಸ್ಸಿನಮೇಲೆ ಆಸೆಯಿದ್ದರೆ ನಮ್ಮ ಹೆಸರನ್ನು ಏಕೆ ಇದರಲ್ಲಿ ತೊಡರಿಸಿದೆ? ರಾಜ್ಯವಾಳಬೇಕೆಂಬ ಆಸೆಯಿದ್ದಿದ್ದರೆ ಮಹಾರಾಜನು ರಾಜ್ಯವನ್ನು ಕೊಡುತ್ತಿರಲಿಲ್ಲವೇ? ಇಲ್ಲ, ರಾಜನ ತಾಯಿ ಎನ್ನಿಸಿಕೊಳ್ಳಬೇಕೆಂದಿದ್ದಿದ್ದರೆ, ರಾಮನು ನಿನ್ನ ಮಗನಲ್ಲವೇ? ರಾಜ್ಯಲೋಭದಿಂದ, ಮಹಾರಾಜನ ಜೀವವನ್ನೂ

ಲೆಕ್ಕಿಸಲಿಲ್ಲ; ಮನೆಗೆ ಹಿರಿಯ ಮಗನಾದ ರಾಮನನ್ನು ವನಕ್ಕೆ ದೂಡಿದೆ. ಸೀತೆ ನಾರುಡೆಯುಟ್ಟದ್ದನ್ನು ನೋಡಿ ನಿನ್ನ ಎದೆ ಸೀಳಿಹೋಗಲಿಲ್ಲವಲ್ಲ—ಏನು ವಜ್ರಕಠಿನವಾದ ಎದೆಯೋ!'' ಎಂದು ಮತ್ತೆ ಬೈಗುಳ ಸುರಿಮಳೆಗೆ ಪ್ರಾರಂಭಿಸುವನು. ಈಗ ಸುಮಂತ್ರನು ಮುಂದೆ ಬಂದು ''ಕುಮಾರ, ಈ ವಸಿಷ್ಠವಾಮದೇವರು ಅಭಿಷೇಕ ಸಾಮಗ್ರಿಗಳನ್ನು ಸಿದ್ಧಮಾಡಿಕೊಂಡು, 'ರಾಜನಿಲ್ಲದ ಪ್ರಜೆಗಳು ಪಾಲಕನಿಲ್ಲದ ಹಸುಗಳ ಹಾಗೆ ಇದ್ದಾರೆ' ಎಂದು ಬಿನ್ನಯಿಸುತ್ತಾರೆ'' ಎಂದು ಅವನ ಮನಸ್ಸನ್ನು ಕೈಕೆಯಿಂದ ತಿರುಗಿಸಲು ನೋಡುವನು. ಭರತನು, ''ಪ್ರಜೆಗಳು ಅನಾಥರಾದರೆ ನನ್ನ ಬೆಂಬಳಿವಿಡಿದು ಬರಲಿ; (ನಾನೂ ಅನಾಥ! ನನಗೆ ಆದ ಗತಿ ಅವರಿಗೂ ಆಗುತ್ತದೆ)'' ಎನ್ನು ವನು. ಭರತನನ್ನು ಹಿಡಿದು ನಿಲ್ಲಿಸಿ ಅವನಿಗೆ ಪಟ್ಟಾಭಿಷೇಕಮಾಡ ಬೇಕೆಂಬುದು ಸುಮಂತ್ರನ ಆಶಯ! ಆದ್ದರಿಂದ ಅದನ್ನು ಸ್ಪಷ್ಟವಾಗಿ ಹೇಳ ಬೇಕಾಯಿತು–''ಅಯೋಧ್ಯೆಗೆ ಬಂದು ಪಟ್ಟಾಭಿಷೇಕಮಾಡಿಕೊಳ್ಳದೆ ಎಲ್ಲಿಗೆ ಹೋಗುವೆ?'' ಎಂದನು. ಆ ಮಾತನ್ನು ಕೇಳುತ್ತಲೆ ಅವನಿಗೆ ಕಾದ ಕಬ್ಬಿಣ ವನ್ನು ಕಿವಿಯಲ್ಲಿ ಸುರಿದಂತಾಯಿತೆಂದು ತೋರುತ್ತದೆ. ಆದ್ದರಿಂದ ''ಪಟ್ಟಾಭಿಷೇಕವೆ? ಪಟ್ಟಾಭಿಷೇಕವನ್ನು ಇಲ್ಲಿ ಇವಳಿಗೆ (ಕೈಕೆಯನ್ನು ತೋರಿಸಿ) ಮಾಡಿ! ನನಗೆ ರಾಮಲಕ್ಷ್ಮಣರೆಲ್ಲಿದ್ದಾರೋ, ಅದೇ ಅಯೋಧ್ಯೆ. ನಾನು ಅಲ್ಲಿಗೆ ಹೋಗುತ್ತೇನೆ'' ಎಂದು, ಅಯೋಧ್ಯೆಯೊಳಕ್ಕೇ ಹೋಗದೆ, ಯಾರ ಮಾತನ್ನೂ ಕೇಳದೆ, ಹಾಗಿಂದ ಹಾಗೇ ದುಡುದುಡನೆ ಹೊರಟು ಹೋದನು. ಈ ವರ್ತಮಾನವು ಊರ ತುಂಬ ಹರಡಿ, ಮನೆಯ ಆಳು ಕಾಳುಗಳೂ ಕೈಕೆಯನ್ನು ಛಿ ಎನ್ನುವ ಹಾಗಾಯಿತು.

ಪ್ರತಿಮಾ ನಾಟಕವು ಮೂರನೆಯ ಅಂಕದಲ್ಲಿ ಮುಗಿಲು ಮುಟ್ಟಿ ಇಲ್ಲಿಂದ ಇಳಿಯಲು ಆರಂಭವಾಗಿದೆ ಎಂದು ಹೇಳಬಹುದು. ಮೊದಲನೆಯ ಅಂಕದಲ್ಲಿ ಪ್ರತಿಮಾ ಸ್ಥಾಪನೆಗೆ ಏರ್ಪಾಡು; ಎರಡನೆಯ ಅಂಕದಲ್ಲಿ ದಶ ರಥನು ಸತ್ತು 'ಪ್ರತಿಮೆ'ಯ ಸ್ಥಾಪನೆ; ಮೂರನೆಯ ಅಂಕದಲ್ಲಿ ಆ ಪ್ರತಿಮಾ ಸಂದರ್ಶನದಿಂದ ಶೋಕರಸ ಪ್ರವಾಹವು ಹುಚ್ಚುಹುಚ್ಚಾಗಿ ಹರಿದು ಅಯೋಧ್ಯೆಯನ್ನು ತೇಲಿಸಿಬಿಡುವುದು. ಇಲ್ಲಿಂದ ಮುಂದೆ ಆ

ನೆರೆಯ ಹಾವಳಿಯಿಂದ ಚೇತರಿಸಿಕೊಂಡು ಎಲ್ಲವೂ ಸಮಾಧಾನ ಸ್ಥಿತಿಗೆ ಬರುವುದು ಮಾತ್ರ. ಆದ್ದರಿಂದ ನಾಲ್ಕನೆಯ ಅಂಕದಲ್ಲಿ ತಪೋವನಕ್ಕೆ ಹೋಗಿ ರಾಮನನ್ನು ಕಂಡು ಅವನಿಂದ ಪಾದುಕೆಗಳನ್ನು ತರುವ ಭರತನು, ಹಿಂದಿನ ಅಂಕದ ಭರತನಲ್ಲ; ಅಲ್ಲಿದ್ದ ಅವನ ಕೋಪ ಶೋಕಗಳ ಆವೇಗವು ಇಲ್ಲಿ ಇಳಿದುಹೋಗಿ ಅವುಗಳ ಸ್ಥಾನದಲ್ಲಿ ದೈನ್ಯ ಪಶ್ಚಾತ್ತಾಪಗಳು ಬಂದಿವೆ. ತನ್ನ ತಾಯಿಯ ಪಾಪವನ್ನು ತಾನೇ ಮಾಡಿದಂತೆ ಅವನಿಗೆ ಮಹಾಸಂಕಟ ವಾಗಿದೆ; ಆದ್ದರಿಂದ "ಇಕ್ಷ್ವಾಕು ಕುಲಕ್ಕೆ ಕಳಂಕಭೂತನಾದ ಭರತನು ದರ್ಶನವನ್ನು ಅಪೇಕ್ಷಿಸುವನೆಂದು" ರಾಮಾಶ್ರಮದ ಬಾಗಿಲಲ್ಲಿ ತಿಳಿಸ ಲಪೇಕ್ಷಿಸುತ್ತಾನೆ.—ಕರುಣಾಹೀನ, ಪಾಮರ, ಕೃತಘ್ನ, ಸಾಹಸಿ, (ಆದರೆ) ಭಕ್ತ ಎಂದು ಹೇಳಿಕೊಳ್ಳುತ್ತಾನೆ. ಈ ಅಂಕದಲ್ಲಿ ಗಮನಿಸಬೇಕಾದ ಅಂಶ ವೆಂದರೆ ರಾಮ ಲಕ್ಷ್ಮಣ ಭರತರ ಅಪೂರ್ವ ಸಾದೃಶ್ಯ; ರೂಪು, ಆಕಾರ, ಧ್ವನಿ, ಸ್ವರ ಎಲ್ಲದರಲ್ಲೂ ಇರುವ ಐಕ್ಯ. ಇದು ಅವರವರನ್ನೇ ಮೋಸ ಗೊಳಿಸುವುದು. ಲಕ್ಷ್ಮಣ ಸೀತೆಯರೂ ಭರತನನ್ನು ನೋಡಿದಾಗ ಅವನು ರಾಮನೆಂದುಕೊಳ್ಳುವರು. ಇದರಿಂದ ಅವರೆಲ್ಲರೂ, ಕಾಯದಲ್ಲಿ ಹೇಗೋ ವಾಙ್ಮನಗಳಲ್ಲಿಯೂ ಹಾಗೇ ಏಕರೂಪರೆಂದು ಊಹಿಸಿಕೊಳ್ಳಬೇಕು. ರಾಮನು ಅರಣ್ಯಕ್ಕೆ ತೆರಳಿದ ಕಾಲದಲ್ಲಿ ಭರತನು ಅಯೋಧ್ಯೆಯಲ್ಲಿದ್ದರೆ ಖಂಡಿತವಾಗಿಯೂ ಲಕ್ಷ್ಮಣನಂತೆ ಅವನನ್ನು ಹಿಂಬಾಲಿಸುತ್ತಿದ್ದನು. ಅದನ್ನು ಇಲ್ಲಿ ಕವಿಯು ಒಂದು ಸಣ್ಣ ಘಟನೆಯ ಮೂಲಕ ಸೂಚಿಸಿದ್ದಾನೆ. ದಶರಥನ ಮರಣ ವೃತ್ತಾಂತವನ್ನು ಸುಮಂತ್ರನು ಜ್ಞಾಪಿಸಲು, ರಾಮನಿಗೆ ದುಃಖವು ಉಕ್ಕಿಬರುವುದು. ಸಮಾಧಾನ ಮಾಡಿಕೊಳ್ಳಲು, ಕುಡಿಯುವು ದಕ್ಕೆ ನೀರು ಬೇಕೆನ್ನುವನು. ಎಂದಿನಂತೆ ಲಕ್ಷ್ಮಣನು ಹೊರಡಲು, ಭರತನು ಅವನ ಕೈಯಿಂದ ಪಾತ್ರೆಯನ್ನು ಕಿತ್ತುಕೊಂಡು ತಾನು ತಂದುಕೊಡು ವನು. ಇದನ್ನು ನೋಡಿ ರಾಮನು ಭರತನ ಮನೋಭಾವವನ್ನು ಗ್ರಹಿಸಿ, ಇದನ್ನು ಬೆಳೆಯಗೊಟ್ಟರೆ ಅವನೂ ಕಾಡಿನಲ್ಲಿ ನಿಂತುಬಿಟ್ಟಾನೆಂದು ಯೋಚಿಸಿ, ನಗುತ್ತ, ಸೀತೆಯನ್ನು ಕುರಿತು "ಜಾನಕಿ, ಲಕ್ಷ್ಮಣನ ಸೇವಾ ಕಾರ್ಯವು ಸಡಿಲುತ್ತ ಬಂತು" ಎನ್ನುವನು.

ಸೀತೆ.—ಆರ್ಯಪುತ್ರ, ಈತನೂ ಸೇವೆಮಾಡಬೇಕಲ್ಲವೇ ?

ರಾಮ.—ಲಕ್ಷ್ಮಣನು ಇಲ್ಲಿ ಇದ್ದುಕೊಂಡು ಸೇವಿಸಲಿ, ಭರತನು ಅಲ್ಲಿದ್ದುಕೊಂಡು ಸೇವಿಸಲಿ: ಇದೇ ಯುಕ್ತವಾದದ್ದು.

ಭರತನನ್ನು ಹೊರಡಿಸಿ ಕಳುಹಿಸಲು ಹಾಕಿದ ಈ ಪೀಠಿಕೆಯನ್ನು ಅವನು ಅರಿತು, ತಾನೂ ಕಾಡಿನಲ್ಲೇ ಅವರ ಜೊತೆಯಲ್ಲಿರುವನೆಂದೂ, ರಾಜ್ಯ ನಡೆಯುವುದಕ್ಕೆ ಬೇಕಾದರೆ ರಾಮನ ಹೆಸರಿನಲ್ಲಿ ತಕ್ಕ ಏರ್ಪಾಡು ಮಾಡುವೆನೆಂದೂ ಬಿನ್ನಯಿಸುವನು. ಆದರೆ ಕೈಕೆಯ ವರವೂ ತಂದೆಯ ವಾಕ್ಯವೂ ಇದರಿಂದ ನೆರವೇರುವುದಿಲ್ಲವಾಗಿ ರಾಮನು ಒಪ್ಪುವುದಿಲ್ಲ. ಭರತನು ಮೊಂಡಾಟ ಮಾಡುವನು. ಕೊನೆಗೆ ರಾಮನು ತನ್ನಮೇಲೆ ಆಣೆ ಇಟ್ಟುಕೊಂಡು ಅವನನ್ನು ಹಿಂತಿರುಗಿ ಕೊಟ್ಟುಕಳುಹಿಸಬೇಕಾಯಿತು. ಆದ್ದರಿಂದ ಭರತನು ರಾಮನ ಪಾದುಕೆಯನ್ನು ತೆಗೆದುಕೊಂಡು, ವನವಾಸ ಮುಗಿದಮೇಲೆ ರಾಜ್ಯವನ್ನು ಸ್ವೀಕರಿಸುವುದಾಗಿ ಅವನಿಂದ ಮಾತು ಪಡೆದು, ಅಯೋಧ್ಯೆಗೆ ಹೊರಡುವನು. ಸೀತೆಗೆ ಭರತನಲ್ಲಿ, ಬಹುದಿನದ ಮೇಲೆ ಊರಿಗೆ ಬಂದ ಮಗನ ಮೇಲೆ ಹೇಗೋ ಹಾಗೆ, ತಾಯ್ತನದ ಅಂತಃಕರಣ; ರಾಜ್ಯಾಧಿಕಾರವನ್ನು ಕಿತ್ತುಕೊಂಡುಹೋಗುತ್ತಿರುವ ಭಾವಮೈದುನ ನೆಂಬ ಲೋಭ ಕೋಪ ಮಾತ್ಸರ್ಯಗಳಿಲ್ಲ. "ಕುಮಾರನು ಈಗಲೇ ಪ್ರಯಾಣ ಮಾಡುವನೇ?" ಎಂದು ರಾಮನನ್ನು ಕೇಳುವಳು. ತಮ್ಮ ನೆಂದರೆ ರಾಮನಿಗೆ ಅಂತಃಕರಣವಿಲ್ಲವೇ? ಆದರೆ ಆ ಅಂತಃಕರಣಕ್ಕೆ ವಶ ನಾಗಿ ರಾಜ್ಯವಾಳುವ ರಾಜನನ್ನು ನಿಲ್ಲಿಸಿಕೊಂಡರೆ ಅರಸನ ಜವಾಬ್ದಾರಿ ಯನ್ನು ಅವನು ಏನು ತಿಳಿದಂತಾಯಿತು? ಆದ್ದರಿಂದ "ಸಾಕು ನಿನ್ನ ಅತಿ ಯಾದ ಮರುಕ; ಕುಮಾರನು ಈಗಲೇ ವಿಜಯಯಾತ್ರೆ ಮಾಡಲಿ!" ಎಂದು ಸೀತೆಯನ್ನು ಸುಮ್ಮನಾಗಿಸಿ, ತಮ್ಮನನ್ನು ಪ್ರಯಾಣಮಾಡಿಸುವನು. ಅವನು ಕಣ್ಮರೆಯಾದಮೇಲೆ "ಅಯ್ಯೋ, ತಂದೆಯನ್ನು ಕಳೆದುಕೊಂಡು, ನೆಂಟರಿಷ್ಟರನ್ನೂ ಅಯೋಧ್ಯೆಯನ್ನೂ ಬಿಟ್ಟು, ಇಲ್ಲಿಗೆ ಬಂದರೆ ಭರತನನ್ನು ಹಿಂದಕ್ಕೆ ಅಟ್ಟಿಬಿಟ್ಟೆನಲ್ಲಾ! ಹುಡುಗ ಒಬ್ಬನೇ ರಾಜ್ಯಭಾರವನ್ನೆಲ್ಲಾ ಹೊರಬೇಕಾಯಿತಲ್ಲಾ!" ಎಂದು ವ್ಯಥೆಗೊಳ್ಳುವನು.

ಐದನೆಯ ಅಂಕದ ಮುಖ್ಯ ಸಂಗತಿ ಸೀತಾಪಹರಣ.—ಕವಿ ಕಾವ್ಯ

ದೃಷ್ಟಿಯಿಂದ ಸೀತಾ–ಉದ್ಧರಣ. 'ಪ್ರತಿಮಾ ನಾಟಕ'ವನ್ನು ಬರೆಯ ಹೊರಟವನು ಈ ಗ್ರಂಥದ ಮೂರನೆಯ ಅಂಕದಲ್ಲಿಯೆ ತನ್ನ ಕಾವ್ಯವನ್ನು ಮುಗಿಸಬಹುದಾಗಿತ್ತೆಂದು ಹಿಂದೆ ಸೂಚಿಸಿದ್ದೇನೆ. ಮುಂದಿನ ಅಂಕಗಳಲ್ಲಿ ರಾಮಾಯಣದ ಕಥೆ ಬೆಳೆದು ಶ್ರೀರಾಮ ಪಟ್ಟಾಭಿಷೇಕದಲ್ಲಿ ಮುಗಿಯುವುದಾದರೂ, ಅದಕ್ಕಿಂತಲೂ ಹೆಚ್ಚಾಗಿ, ಭರತ ಸೀತೆ ಕೈಕೆ ಇವರ ಗುಣ ಪರಿಚಯವಾಗುವುದು. ಇವರು ಶ್ರೀಮದ್ರಾಮಾಯಣದ ಭರತಾದಿಗಳಲ್ಲ. ಶ್ರೀಮದ್ರಾಮಾಯಣದಲ್ಲಿ ಭರತನು ಪಾದುಕೆಗಳನ್ನು ತೆಗೆದುಕೊಂಡು ಅಯೋಧ್ಯೆಗೆ ಹೊರಟುಹೋದ ಮೇಲೆ ತೆಪ್ಪಗೆ ರಾಜ್ಯವಾಳಿಕೊಂಡಿದ್ದನೆಂಬ ಭಾವವುಂಟಾಗುತ್ತದೆ. ಅವನು ಋಷಿವೇಷದಲ್ಲಿದ್ದರೂ, ವನವಾಸದ ಅವಧಿ ಕಳೆದ ಕೂಡಲೆ ರಾಮನನ್ನು ನಿರೀಕ್ಷಿಸುತ್ತ, ಅವನು ಬರದಿದ್ದರೆ ಅಗ್ನಿ ಪ್ರವೇಶಮಾಡಬೇಕೆಂದು ನಿಶ್ಚಯಿಸಿಕೊಂಡಿದ್ದನೆಂದು ವರ್ಣಿತನಾಗಿದ್ದರೂ, ಹದಿನಾಲ್ಕು ವರ್ಷ ಅವನಿಗೆ ರಾಮನ ಯೋಚನೆ ಇತ್ತೇ ಇಲ್ಲವೇ, ಅವನ ಯೋಗಕ್ಷೇಮವನ್ನು ವಿಚಾರಿಸಿದನೇ ಇಲ್ಲವೇ ಎಂಬುದು ಗೊತ್ತಾಗುವುದಿಲ್ಲ. ಇಲ್ಲಿ ಭರತನ ಮನಸ್ಸು ನಿಲ್ಲುವುದಿಲ್ಲ; ಆದ್ದರಿಂದ ಕೆಲವು ಕಾಲವಾದ ಮೇಲೆ ಸುಮಂತ್ರನನ್ನು ಕಾಡಿಗೆ ಕಳುಹಿಸಿ ರಾಮ ವೃತ್ತಾಂತವನ್ನು ತರಿಸಿಕೊಳ್ಳುವನು. ಅದೇನು ಶುಭವರ್ತಮಾನವಲ್ಲ; ಸೀತಾಪಹರಣ ವೃತ್ತಾಂತ; ಇದನ್ನು ಕೇಳಿ ಅಂಥ ಅನುರಾಗವುಳ್ಳ ತಮ್ಮನೂ ಕ್ಷತ್ರಿಯನೂ ಸುಮ್ಮನೆ ಇರುವುದು ಹೇಗೆ? ಮಹಾಸೈನ್ಯದೊಡನೆ ರಾಮನಿಗೆ ಸಹಾಯನಾಗಿ ರಾವಣನ ಮೇಲೆ ಯುದ್ಧಕ್ಕೆಂದು ಹೊರಡುವನು. ಇದು ಆರನೆಯ ಅಂಕದ ವೃತ್ತಾಂತ. ಐದನೆಯದರಲ್ಲಿ ಮಾಡಿರುವ ವಸ್ತು ವ್ಯತ್ಯಾಸದಿಂದ ಸೀತಾದೇವಿಯ ಗುಣವು ಪೂರ್ತಿಯಾಗಿ ಮಾರ್ಪಟ್ಟು ಹೋಗಿದೆ. ರಾಮಾಯಣದ ಸೀತೆಯು ಸುವರ್ಣಮೃಗ ವೃತ್ತಾಂತದಲ್ಲಿ ಜಿಂಕೆಯ ವಿಚಾರವಾಗಿ ಅದಮ್ಯವಾದ ಚಾಪಲ್ಯವನ್ನೂ, ರಾಮನ ಮಾತಿನಲ್ಲಿ ಅಲಕ್ಷ್ಯ ಮೊಂಡಾಟಗಳನ್ನೂ, ಲಕ್ಷ್ಮಣನ ನಡತೆಯಲ್ಲಿ ಅಸಹ್ಯವಾದ ನಿಷ್ಠುರತೆಯನ್ನೂ ವ್ಯಕ್ತಪಡಿಸುತ್ತಾಳೆ. ಹೇಳಿದ ಮಾತು ಕೇಳದೆ, ಸ್ವಂತ ಬುದ್ಧಿಯಿಲ್ಲದೆ, ಅಲ್ಪ ಸ್ವಲ್ಪ ವಿಷಯಗಳಿಗೆಲ್ಲಾ ಮುರಿತುಕೊಂಡು 'ಹೊಳೆ ಬೀಳುತೀನಿ, ವಿಷ ತಗೋತೀನಿ' ಎಂದು ಮನೆಯವರನ್ನು ಬೆದರಿ

ಸುತ್ತ, ಚಾಪಲ್ಯ ಚಂಡಿತನಗಳಿಂದ ಸಂಸಾರವನ್ನು ನರಕವಾಗಿ ಮಾಡುವ ಅವಿವೇಕಿ ಹೆಂಗಸಿನಂತೆ ವ್ಯವಹರಿಸುತ್ತಾಳೆ. ರಾಮನಂಥ ಪತಿಯು ಗಂಡಾಂತರದಲ್ಲಿರುವನೆಂಬ ಗಾಬರಿಯಲ್ಲಿ ಎಂಥವಳಾದರೂ ಕಠಿಣವಾಗಿ ಮಾತನಾಡಬಹುದೆನ್ನೋಣ; ಆದರೆ ಅಂಥ ನಿಷ್ಠುರವಾದ ಮಾತುಗಳೇ? ಲಕ್ಷ್ಮಣನಿಗೆ ಆ ಮಾತುಗಳನ್ನು ಕೇಳಿ ಕೋಪ ಬಂದು ಅನರ್ಥ ಸಂಭವಿಸದೆ ಇದ್ದದ್ದು ಆಶ್ಚರ್ಯ. ರಾಮನು ಬೇಡವೆಂದದ್ದಕ್ಕೆ ಬಲವಂತ ಮಾಡಿ ಅವನನ್ನು ಓಡಿಸಿ, ಲಕ್ಷ್ಮಣನನ್ನು ಎದುರಿಗೆ ನಿಲ್ಲಲಾರದಂಥ ಮಾತನಾಡಿ ಕಳುಹಿಸಿ, ಸೀತೆಯು ರಾವಣನ ಕೈಗೆ ಸಿಕ್ಕುವಳು. ಆದರೆ ಪ್ರತಿಮಾ ನಾಟಕದ ಈ ನಾಲ್ಕು ಅಂಕಗಳಲ್ಲಿ ರಾಮ ಲಕ್ಷ್ಮಣ ಭರತರೊಡನೆ ಆದರ್ಶ ಮಹಿಳೆಯಂತೆ ನಡೆದುಕೊಂಡ ಸೀತಾದೇವಿಯು ಇಲ್ಲಿ ಹೀಗೆ ವ್ಯವಹರಿಸುವುದೆಂದರೆ ಕವಿಗೆ ಉಚಿತವಾಗಿ ತೋರಲಿಲ್ಲವೆಂದು ಕಾಣುತ್ತದೆ. ಆದ್ದರಿಂದ ಸುವರ್ಣ ಮೃಗ ವೃತ್ತಾಂತಕ್ಕೆ ವಿಚಿತ್ರ ವರ್ಣವನ್ನು ಕೊಟ್ಟುಬಿಟ್ಟಿದ್ದಾನೆ.

ರಾಮನು ದಶರಥನ ಸಾಂವತ್ಸರಿಕ ಶ್ರಾದ್ಧದ ದಿವಸ ಏನು ಮಾಡಬೇಕೆಂದು ಚಿಂತಿಸುತ್ತಿರಲು (ಇದು ಕವಿ ಕಲ್ಪಿತ), ರಾವಣನು ಬ್ರಾಹ್ಮಣ ವೇಷದಿಂದ ಬರುವನು. (ಇಲ್ಲಿ ರಾಮನನ್ನು ಕಂಡರೆ ರಾವಣನಿಗೆ ಇದ್ದ ಹೆದರಿಕೆಯನ್ನೂ, ರಾಮನಿಗಿಂತಲೂ ಸೀತೆಯ ಮೇಲೆ ಇದ್ದ ಗೌರವವನ್ನೂ ಕವಿ ಅಲ್ಲಲ್ಲೇ ಸೂಚಿಸಿದ್ದಾನೆ.) ಬಂದಾಗ ಅವನಿಗೆ ಮುಂದೇನು ತಂತ್ರಮಾಡಬೇಕೆಂಬ ಯೋಚನೆಯಿದ್ದಂತೆ ತೋರುವುದಿಲ್ಲ. ಯಾರೋ ಸದ್ಬ್ರಾಹ್ಮಣ ಬಂದನೆಂದು ಸೀತಾರಾಮರು ಅವನನ್ನು ಅರ್ಘ್ಯ ಪಾದ್ಯಾದಿಗಳಿಂದ ಸತ್ಕರಿಸುವರು. ರಾವಣನಿಗೆ ಅವರನ್ನು ಹತ್ತಿರ ಸೇರಿಸುವುದಕ್ಕೆ ಹೆದರಿಕೆ. ಒಂದುಸಲ ರಾಮ ಬೇಡವೆನ್ನುವನು; ಇನ್ನೊಂದು ಸಲ ಸೀತೆ ಬೇಡವೆನ್ನುವನು; ಕೊನೆಗೆ—ಅತಿಥಿಸತ್ಕಾರ ಒಳ್ಳೆಯ ಮಾತಿನಲ್ಲಿಯೇ ಇದೆ, ಅಷ್ಟೇ ಸಾಕು, ಎಂದು ಕುಳಿತು ಮಾತಿಗೆ ಆರಂಭಿಸುವನು; ಆ ಶಾಸ್ತ್ರ ಈ ಶಾಸ್ತ್ರಗಳ ಪರಿಚಯವಿದೆಯೆಂದು ಹೇಳಿಕೊಳ್ಳುತ್ತ ಶ್ರಾದ್ಧಕಲ್ಪದ ಮಾತನ್ನೆತ್ತುವನು. ರಾಮನಿಗೆ ಕಿವಿ ನೆಟ್ಟಗಾಗುವುದು; ತಮ್ಮ ತಂದೆಯ ಶ್ರಾದ್ಧವನ್ನು ಉತ್ತಮವಾದ ರೀತಿಯಲ್ಲಿ ಮಾಡುವುದು ಹೇಗೆಂದು ಅವನನ್ನು ಕೇಳುವನು. ಅವನು ಮಾತಿಗೆ ಕಟ್ಟುಬಿದ್ದು (ಪ್ರಾಯಶಃ ತಿಳಿದದ್ದು

ತಿಳಿಯದೆ ಇದ್ದದ್ದು ಎಲ್ಲವನ್ನೂ ಬೆರಸಿ) ಒಂದೊಂದಾಗಿ ಹೇಳಿ 'ಕಾಂಚನ ಪಾರ್ಶ್ವಮೃಗ'ವೇ ಉತ್ತಮವೆಂದು ಹೇಳುವನು. ರಾಮನು ಅದನ್ನೇ ಹಿಡಿದುಕೊಳ್ಳುವನು. ರಾವಣನು ಎಲ್ಲೋ ಸುಳ್ಳುಹೇಳಿದ್ದನೆಂದು ಕಾಣುತ್ತದೆ; ಆದ್ದರಿಂದ ಅವನಿಗೆ ಅದು ಸಿಕ್ಕುವುದು ಅಸಾಧ್ಯವೆಂದು ವಾದಿಸಿದನು; ಅದು ಅಲ್ಲಿಗೆ ಬಹು ದೂರವಾದ ಹಿಮವತ್ಪರ್ವತದಲ್ಲಿದೆ ಎಂದನು; ಅದರ ಏಳನೆಯ ಶಿಖರದಲ್ಲಿದೆಯೆಂದನು; ಪ್ರಭಾವದಿಂದ ಸಂಪಾದಿಸತಕ್ಕದ್ದೆಂದನು; ಯಾವುದಕ್ಕೂ ರಾಮನು ಹಿಂದೆಗೆಯಲಿಲ್ಲ. ಶಾಪಾದಪಿ ಶರಾದಪಿ ಅದನ್ನೇ ಸಂಪಾದಿಸತಕ್ಕದ್ದೆಂದು ನಿಶ್ಚಯಿಸಿ, ಸೀತೆಗೆ ಸಿದ್ಧವಾಗುವಂತೆ ಹೇಳಿ, ಹೊರಟೇಬಿಟ್ಟನು. ತನ್ನ ಇಷ್ಟ ನೆರವೇರಲಿಲ್ಲವೆಂದು ರಾವಣನು ಮಾಯೆಯಿಂದ ಕಾಂಚನ ಮೃಗವನ್ನು ಸೃಷ್ಟಿಸಿ ರಾಮನ ಮುಂದೆ ಸುಳಿಸುವನು: ಹಿಮವಂತನೇ ಹೆದರಿ ಕಳುಹಿಸಿದನೆಂದು ಬೊಂಕುವನು. ಅದನ್ನು ಹಿಡಿದುಕೊಂಡು ಬರಬೇಕೆಂದು ಲಕ್ಷ್ಮಣನಿಗೆ ಹೇಳೋಣವೆಂದರೆ, ಲಕ್ಷ್ಮಣನು ಆಶ್ರಮದಲ್ಲಿರಲಿಲ್ಲ; ತೀರ್ಥಯಾತ್ರೆಯಿಂದ ಬಂದ ಕುಲಪತಿಗಳನ್ನು ಇದಿರುಗೊಳ್ಳಲು ಹೋಗಿದ್ದನು. ಆದ್ದರಿಂದ ರಾಮನೇ ಹೊರಡಬೇಕಾಯಿತು. ಹೀಗೆ ರಾಮನೂ ಹೊರಟುಹೋಗಲು, ಅಸಹಾಯಳಾದ ಸೀತೆಯನ್ನು ರಾವಣನು ಹೊತ್ತುಕೊಂಡುಹೋದನು.

ಆರನೆಯ ಅಂಕದಲ್ಲಿ, ಹಿಂದೆ ಹೇಳಿದಂತೆ, ಭರತನು ಸೀತಾಪಹರಣ ವೃತ್ತಾಂತವನ್ನು ತಿಳಿದು ಸಂಕಟಪಡುತ್ತ ಮತ್ತೆ ಕೈಕೆಯನ್ನು ದೂಷಿಸಲು, ಅವಳು ದಶರಥನಿಗೆ ಬಂದ ಶಾಪವೃತ್ತಾಂತವನ್ನು ತಿಳಿಸಿ ಎಲ್ಲಕ್ಕೂ ಭವಿತವ್ಯತೆಯೇ ಕಾರಣವೆಂದೂ, ತಾನು ನಿಮಿತ್ತ ಮಾತ್ರಳೆಂದೂ, ಅನಿಷ್ಟಕ್ಕೆ ಗುರಿಯಾದಳೆಂದೂ ತಿಳಿಯಹೇಳುವಳು. ಭರತನು ಸ್ವಲ್ಪಕ್ಕೆ ಒಪ್ಪುವುದಿಲ್ಲ. ಅವಳನ್ನು ಖಂಡಿಸಿ ಖಂಡಿಸಿ ಪ್ರಶ್ನೆಮಾಡುವನು.

ಭರತ.—ಪುತ್ರಪ್ರವಾಸವೆಂಬುದು ರಾಮನಿಗೂ ನನಗೂ ಸಮಾನವಾಗಿರುವಾಗ ನನ್ನನ್ನು ಏಕೆ ಕಾಡಿಗೆ ಕಳುಹಿಸಬಾರದಾಗಿತ್ತು?

ಕೈಕೆ.—ಮಗು, ಮಾತುಲಗೃಹದಲ್ಲಿ ಇದ್ದ ನಿನಗೆ ಪ್ರವಾಸವು ಸ್ವತಸ್ಸಿದ್ಧವಾಗಿಯೇ ಉಂಟಾಯಿತು.

ಭರತ.—ಹಾಗಾದರೆ ಹದಿನಾಲ್ಕು ವರ್ಷವೆಂದು ಏಕೆ ಅಪೇಕ್ಷಿಸಿದೆ?

ಕೈಕೆ.—ಮಗು, ಹದಿನಾಲ್ಕು ದಿವಸಗಳೆಂದು ಹೇಳಲಪೇಕ್ಷೆಯುಳ್ಳ ನಾನು ವ್ಯಗ್ರವಾದ ಮನಸ್ಸುಳ್ಳವಳಾಗಿದ್ದದ್ದರಿಂದ ಹದಿನಾಲ್ಕು ವರ್ಷಗಳೆಂದು ಹೇಳಿದೆ.

ಭರತ.—ನಿನಗೆ ವಿಚಾರಕ್ಷಮತೆಯುಂಟು; ಇರಲಿ, ಇದನ್ನು ಗುರುಜನವೂ ಬಲ್ಲುದೋ?

ಸುಮಂತ್ರ.—ಕುಮಾರ, ವಸಿಷ್ಠ ವಾಮದೇವಾದಿಗಳೂ ಬಲ್ಲರು; ಅವರಿಗೂ ಸಮ್ಮತ.

ಈ 'ತ್ರೈಲೋಕ್ಯ ಸಾಕ್ಷಿಗಳ' ಪ್ರಮಾಣವನ್ನು ಕೊಟ್ಟಮೇಲೆ ಭರತನು ಸುಮ್ಮನಾದನು. ಇಲ್ಲದಿದ್ದರೆ, "ಆಮೇಲೆ ಹದಿನಾಲ್ಕು ದಿನಗಳೆಂದು ಏಕೆ ತಿದ್ದಿಕೊಳ್ಳಲಿಲ್ಲ?" ಎಂದು ಮುಂತಾಗಿ ಪ್ರಶ್ನಿಸುತ್ತಿದ್ದನೆಂದು ತೋರುತ್ತದೆ. ಕೈಕೆ ನಿಜವಾಗಿ ಕೆಟ್ಟವಳೇ? ಹಾಗಾದರೆ ಮತ್ತೆಲ್ಲಿಯೂ ಅವಳ ದುಷ್ಟತನವೇಕೆ ಕಂಡುಬರುವುದಿಲ್ಲ? ಮಂಥರೆಯ ಪ್ರೇರಣೆಯಿಂದ ಕೆಟ್ಟವಳಾದಳೆಂದರೆ, ಅಷ್ಟು ದಿನದಿಂದ ಒಳ್ಳೆಯವಳಾಗಿದ್ದವಳು ಇಷ್ಟು ಬೇಗ ಕೆಟ್ಟವಳಾದಳೆ? ಭರತನ ಮನಸ್ಸನ್ನೂ ರಾಮನ ಸ್ವಭಾವವನ್ನೂ ಅವಳು ಅರಿಯಳೇ?—ಎಂದು ಮುಂತಾದ ಪ್ರಶ್ನೆಗಳು ರಾಮಾಯಣ ಪಾಠಕರಿಗೆಲ್ಲಾ ಬರುತ್ತವೆ. ಈ ಆಶಂಕೆ ಅಧ್ಯಾತ್ಮ ರಾಮಾಯಣ ಕರ್ತರಿಗೂ ಬಂದು ಅವರು ಭವಿತವ್ಯತೆಯ ವಾದವನ್ನೇ ಎತ್ತಿಹಿಡಿದಿದ್ದಾರೆ.* ಅಲ್ಲಿ ಕೈಕೆ ತಾನು ಆಗ ಆ ಮಾತನ್ನು ಏಕೆ ಆಡಿದೆ ಎಂಬುದು ಗೊತ್ತಾಗದೆ "ಏನೋಪ್ಪ; ಆಗಿನ ಕಾಲದಲ್ಲಿ ಸರಸ್ವತಿ (ಮಾತಿಗೆ ಅಧಿದೇವತೆ) ಬಾಯಲ್ಲಿ ಹಾಗೆ ಆಡಿಸಿಬಿಟ್ಟಳು" ಎನ್ನುತ್ತಾಳೆ. ಇದಕ್ಕಿಂತ ಉತ್ತಮವಾದ, ಪೌರ್ವಾಪರ್ಯ ಸಮಂಜಸವಾದ, ಉತ್ತರವನ್ನು ಮತ್ತಾರೂ ಕೊಟ್ಟಂತಿಲ್ಲ.

ಇಲ್ಲಿಂದ, ಕೈಕೆಯ ವಿಚಾರದಲ್ಲಿ, ಭರತನ ನಡೆವಳಿಯು ಬದಲಾಯಿಸಿ ಹೋಗುತ್ತದೆ. ಈಗ ಬಾಯಿತುಂಬ ಅವಳನ್ನು "ಮಾತೆ"ಯೆಂದು

* ಶ್ರೀಮದ್ರಾಮಾಯಣದಲ್ಲಿ ಇದಕ್ಕೆ ದೈವವೇ ಕಾರಣವೆಂದು ರಾಮನು ಸಮಾಧಾನ ಮಾಡುತ್ತಾನೆ.

ಕರೆದು ಅವಳ ಕ್ಷಮೆಯನ್ನು ಬೇಡಿ ನಮಸ್ಕಾರಮಾಡುವನು. ಕೈಕೆಯೂ ಅವನ ನಡತೆಗೆ ಅನುಗುಣವಾದ ಪ್ರೇಮಪೂರ್ಣವಾದ ಮಾತನ್ನೇ ಆಡುವಳು—"ಮಗು, ತಾಯಿಯೆಂಬವಳು ಯಾವಳು ತಾನೇ ಮಗನ ಅಪರಾಧವನ್ನು ಕ್ಷಮಿಸಳು? ಏಳೇಳು, ಈ ವಿಷಯದಲ್ಲಿ ತಪ್ಪೇನು?" ಎಂದು ಸಮದಾಯಿಸುವಳು. ಮುಂದೆ, ಭರತನು ಎಲ್ಲಕ್ಕೂ ಅವಳ ಅನುಜ್ಞೆಯನ್ನು ಬೇಡುವನು. ಹೀಗೆ, ಅವಳ ಅಪ್ಪಣೆಯನ್ನು ಪಡೆದೇ ಸಕಲವಾದ ರಾಜಮಂಡಲಿಯೊಡನೆ ಅಪಾರವಾದ ಸೈನ್ಯವನ್ನು ತೆಗೆದು ಕೊಂಡು ರಾಮನ ಸಹಾಯಕ್ಕೆಂದು ಲಂಕೆಯ ಕಡೆಗೆ ಹೊರಡುವನು.

ಆದರೆ ಅದು ಅನಾವಶ್ಯಕ. ಅಷ್ಟುಹೊತ್ತಿಗೆ ಆಗಲೇ ಶ್ರೀರಾಮನು ಜಯಶೀಲನಾಗಿ, ಮೊದಲು ಇದ್ದ ಋಷ್ಯಾಶ್ರಮಕ್ಕೆ ಹಿಂತಿರುಗಿ ಬಂದಿರು ತ್ತಾನೆ. ಮೊದಲ ಅಂಕದ ಆದಿಯಲ್ಲಿರುವ ಸಂಭ್ರಮದಂತೆ ಇಲ್ಲಿಯೂ ಸಂಭ್ರಮ; ಆದರೆ ಇದರ ಸ್ವರೂಪ ಸನ್ನಿವೇಶಗಳೇ ಬೇರೆ: ಈಗ ಎಲ್ಲಾ ತಲೆ ಕೆಳಕಾಗಿದೆ; ಆಗ ಕಾರ್ಗತ್ತಲಿನ ಮುನ್ನಿನ ಸಂಧ್ಯಾಕಾಲವಾದರೆ ಈಗ ದಿವ್ಯ ವಾದ ಬೆಳಕಿನ ಮುನ್ನಿನ ಉಷಃಕಾಲ; ಇನ್ನೇನು ಸ್ವಲ್ಪ ಹೊತ್ತಿಗೆ ದಶರಥ ನನ್ನು ಗ್ರಾಸಮಾಡಿಕೊಳ್ಳಲು ಮೃತ್ಯುದೇವತೆ ಕಾದು ಕುಳಿತಿರುವ ಅರ ಮನೆಗೆ ಬದಲಾಗಿ, ಕಷ್ಟಪರಂಪರೆಗಳನ್ನು ಕಳೆದುಕೊಂಡು ನಿಶ್ಚಿಂತನಾದ ಸೀತಾರಾಮನನ್ನೊಳಕೊಂಡ ಪವಿತ್ರ ಋಷ್ಯಾಶ್ರಮ. "ತುರಿಪದಿನೆಡೆ ಯಾಡುತಿರ್ಪ ಪಡಿಯರತಿ"ಯರಿಗೆ ಬದಲಾಗಿ, ಜನಕಸುತೆಯೆಂದು ಸಖಿಯೆಂದು ಸೊಸೆಯೆಂದು ಸೀತೆಯೆಂದು ತಮ್ಮ ತಮ್ಮ ವಯಸ್ಸಿಗನು ಗುಣವಾಗಿ ಕರೆಯುತ್ತ ಸೀತೆಯ ಸುತ್ತಮುತ್ತ ಮುತ್ತಿಕೊಂಡು ಎಷ್ಟು ಹೊತ್ತಾದರೂ ಅವಳನ್ನು ಋಷ್ಯಾಶ್ರಮದಿಂದ ಹೊರಕ್ಕೇ ಬಿಡದಿರುವ ಸುಮಂಗಲಿಯರಾದ ಋಷಿಪತ್ನಿಯರು. ಭರತನು ತನ್ನ ತಾಯಿಯರೊಡ ನೆಯೂ, ಸಕಲ ಪರಿವಾರದೊಡನೆಯೂ ಇಲ್ಲಿಗೆ ಬರುವನು; ಇನ್ನೂ ನಮಸ್ಕಾರ ಆಶೀರ್ವಾದಗಳು ಮುಗಿಯುತ್ತಿದ್ದಹಾಗೇ ರಾಜ್ಯಭಾರವನ್ನು ಅಣ್ಣನಿಗೆ ಒಪ್ಪಿಸಲೆಳಸುವನು. ಆದರೆ ಕೈಕೆಯ ವರದಂತೆ ರಾಜ್ಯವು ಭರತ ನದು; ಆದ್ದರಿಂದ ರಾಮನು "ನಾನು ಹೇಗೆ ಅದನ್ನು ವಹಿಸಿಕೊಳ್ಳಲಿ!"

ಎಂದುಬಿಡುವನು. ಆಗ ಕೈಕೆ ಮುಂದೆ ಬಂದು "ಬಾ ಮಗು, ಅಭಿಷೇಕಕ್ಕೆ ಒಪ್ಪಿಕೋ" ಎಂದು ಕೇಳಿಕೊಳ್ಳುವಳು. ಆಗ "ಮಾತೆಯ ಅಪ್ಪಣೆ" ಯೆಂದು ರಾಮನು ಅದನ್ನು ಶಿರಸಾವಹಿಸುವನು.

ಇಲ್ಲಿಂದ ಮುಂದೆ ಒಂದುಗಳಿಗೆಯೊಳಗಾಗಿ ನಾಲ್ಕಾರು ಸಲ ಕೈಕೆಯು ಈ ಉತ್ಸವವನ್ನು ನೋಡಿ ಸಂತೋಷಪಟ್ಟು, ರಾಮನನ್ನು ಪ್ರಜೆಗಳು ಹೊಗಳಿದರೆ ಅದು ತನ್ನ 'ಮಗನ' ಅಭ್ಯುದಯವೆಂದು ಆನಂದಿಸಿ, ತಾನು ಭರತನಲ್ಲಿ ನುಡಿದದ್ದು ನಿಜವೆಂದು ಯಥೇಚ್ಛವಾಗಿ ದೃಢಪಡಿಸುವಳು. ಎಲ್ಲರೂ ಪುಷ್ಪಕವಿಮಾನದಲ್ಲಿ ಕುಳಿತು ಅಯೋಧ್ಯೆಗೆ ತೆರಳುವರು.

ಹೀಗೆ ಪ್ರತಿಮಾ ನಾಟಕದ ಕಥಾ ಭಾಗವು ರಾಮಾಯಣದ್ದೇ ಆದರೂ ಅದರ ವಸ್ತುಕಲ್ಪನೆ, ಸಂವಿಧಾನ ರಚನೆ, ಪಾತ್ರ ಪ್ರದರ್ಶನ, ರಸಪರಿಪೋಷಣಗಳೆಲ್ಲವೂ ಬೇರೆಯಾಗಿವೆ. ಇವೆಲ್ಲದರ ಫಲವಾಗಿ ಪ್ರತಿಮಾ ನಾಟಕವು, ಕರುಣರಸಪ್ಲಾವಿತವಾದರೂ, ತನ್ನೊಳಗೆ ಒಂದು ಅಪೂರ್ವ ಪ್ರೇಮಸಂಸಾರವನ್ನು ಚಿತ್ರಿಸಿದೆ. ಅಳುವ ಕಣ್ಣಿನಲ್ಲಿ, ಬೆಳಗುವ ಹೃದಯವು ಪ್ರತಿಫಲಿಸಿದೆ. ರಾಮನು ಪರಿಪಕ್ವಮತಿಯೂ ಉಪಶಾಂತನೂ ಕುಟುಂಬದ ಜನರನ್ನು ಅವರವರ ಸ್ವಭಾವಕ್ಕೆ ತಕ್ಕಂತೆ ಹಿಡಿದು ತಿದ್ದಿ ನಡೆಸಬಲ್ಲ ಅನುಭವಸ್ಥನೂ ಆದ ಮನೆಯ ಯಜಮಾನ; ಸೀತೆಯು ಮೈದುನನನ್ನು ಮಕ್ಕಳಂತೆಯೂ, ಅತ್ತೆಯರನ್ನು ತಾಯಿಯಂತೆಯೂ ಆದರಿಸುತ್ತ ಗಂಡನಿಗೆ ಅನುಕೂಲಳಾಗಿದ್ದ ಸಹಧರ್ಮಿಣಿ—ಸುಖಕ್ಕಿಂತ ಹೆಚ್ಚಾಗಿ ಕಷ್ಟದಲ್ಲಿ ಸಹಧರ್ಮಿಣಿ; ಭರತಲಕ್ಷ್ಮಣರು ರಾಮನಿಗೆ ಎರಡು ತೋಳುಗಳಂತಿದ್ದ ಪ್ರಾಣಪ್ರಿಯರಾದ ಸೋದರರು. (ಇದರಲ್ಲಿ ಶತ್ರುಘ್ನ ವೃತ್ತಾಂತ ಬರುವುದು ಎಲ್ಲೋ ಸ್ವಲ್ಪ.) ಕೌಸಲ್ಯಾದಿಗಳು ಅಕ್ಕ ತಂಗಿಯರಂತೆ ಅನ್ಯೋನ್ಯವಾಗಿದ್ದುಕೊಂಡು ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದ ಹಿರಿಯರು. ಈ ಕುಟುಂಬವು ಭಾಸನ ಪ್ರತಿಭಾ ಪ್ರಭಾವದಿಂದ ನಿಷ್ಕಂಟಕವೂ ನಿಷ್ಕಳಂಕವೂ ಆದ ಪ್ರೇಮಸಂಸಾರವಾಗಿ ಬೆಳಗುತ್ತಿದೆ. ಇದನ್ನು ಭಾವಿಸಿದ ಕವಿಯ ಮನೋಧರ್ಮವು ಅತ್ಯಂತ ಮಧುರವಾದದ್ದು.

ಭಾಸನ ಕಲಾ ಚಮತ್ಕಾರಗಳಲ್ಲಿ ಭವಿಷ್ಯದರ್ಥಸೂಚನೆಯು 'ಸ್ವಪ್ನ ವಾಸವದತ್ತ'ದಂತೆ ಇಲ್ಲಿಯೂ ಕಂಡುಬರುತ್ತದೆ. (ನಾರುಮಡಿಯ ವೃತ್ತಾಂತ; ಸೀತೆಯು ದಶರಥನ ಕ್ಷೇಮದಲ್ಲಿ ಸಂದೇಹಪಡುವುದು ; ಸುಮಂತ್ರನು ತಂದ ರಥ ಕೃತಾಂತನಟ್ಟಿದ ರಥವೆಂದು ದಶರಥನು ವರ್ಣಿಸುವುದು—ಇತ್ಯಾದಿ) ಕೆಲವು ಸುಂದರವಾದ ಉಪಮಾನಗಳಿವೆ—'ಸ್ಥಾಪನೆ'ಯಲ್ಲಿ ಸಂಭ್ರಮದಿಂದ ದುಡುಗುಟ್ಟಿಕೊಂಡು ಓಡಿಯಾಡುತ್ತಿರುವ ಪಡಿಯರತಿಯನ್ನು, ಬಿಳಿಯ ಮಳಲೊಟ್ಟಿನಲ್ಲಿ ಕಾಶಪುಷ್ಪಗಳ ನಡುವೆ ಓಡಿಯಾಡುವ ಹಂಸಕ್ಕೂ, ದೈತ್ಯನಾದ ರಾವಣನ ಕೈಯಲ್ಲಿ ಸಿಕ್ಕಿ ನುಲಿದಾಡುತ್ತಿರುವ ಸೀತೆಯನ್ನು ಅಲೆದಾಡುವ ಫಣಿರಮಣಿಗೂ, ರಾವಣನೊಡನೆ ಕಾದಿ ಮಡಿದ ಜಟಾಯುವನ್ನು 'ಕರೀಂದ್ರಭಗ್ನ ವನಪಾದಪ'ಕ್ಕೂ ರಾಮಸೀತಾಲಕ್ಷ್ಮಣರನ್ನು ಸೂರ್ಯ ಸೂರ್ಯನ ಬೆಳಕು ಹಗಲುಗಳಿಗೂ ಹೋಲಿಸಿರುವುದನ್ನು ದೃಷ್ಟಾಂತವಾಗಿ ಹೇಳಿದರೆ ಸಾಕಾಗಿದೆ. ಈ ನಾಟಕದಲ್ಲಿ ಕವಿಯು ಹೆಚ್ಚು ಅಲಂಕಾರಗಳ ಗೋಜಿಗೆ ಹೋಗಿಲ್ಲ. ನಾಟಕಕ್ಕೆ ಇವು ಪ್ರಯತ್ನಪೂರ್ವಕವಾಗಿ ಬಂದರೆ ಅಸಹ್ಯವಾದ ಭಾರವಾಗುವುವು. ಆದ್ದರಿಂದ ಅವನ ದೃಷ್ಟಿಯೆಲ್ಲವೂ, ನ್ಯಾಯವಾಗಿ ಇರಬೇಕಾದಂತೆ, ವಸ್ತು ಪಾತ್ರ ರಸಪರಿಪುಷ್ಟಿಯ ಮೇಲೇ ಇದೆ. ವರ್ಣನೆಗಳೂ ವಿಶೇಷವಾಗಿಲ್ಲ: ಇರುವವು ಶ್ರೇಷ್ಠವಾಗಿವೆ. ಅವುಗಳಲ್ಲಿ ಎರಡನ್ನು ಮಾತ್ರ ಇಲ್ಲಿ ಕೊಟ್ಟಿದೆ.—

ಭರತನು ರಾಮಾಶ್ರಮದ ಬಾಗಿಲಿನಲ್ಲಿ ಬಂದು ಕೂಗಲು ಅವನ ಧ್ವನಿಯನ್ನು ಲಕ್ಷ್ಮಣನು ಹೀಗೆ ವರ್ಣಿಸಿದ್ದಾನೆ:—

ಘನಧೀರಂ ಸ್ಪಷ್ಟಮುದ್ಯದ್ವೃಷಭರವದವೋಲ್ ಸ್ನಿಗ್ಧಮಾಧುರ್ಯಯುಕ್ತಂ
ಜನಿತೋತ್ಕಂಠಂ ಕಲಂ ಕಂಠದೊಳುರದೊಳಸಂರುದ್ಧ ಸಂಚಾರ ವೇಗಂ ।
ಅನುವಿಂ ತಾಣಂಗಳೊಳ್ ಸೇರ್ದೆಸೆವುದರಿನನೇಕಾಕ್ಷರಾಕಾರಮಾಗು
ತ್ತನುರಾಗಂಗೊಂಡು ನಾಲ್ವರ್ಣಕಮುಭಯುವನೀಯಲ್ಕೆ ಸಂದಂತೆ ತೋರ್ಕುಂ ॥*

ಒಬ್ಬ ಮನುಷ್ಯನ ಧ್ವನಿಯಲ್ಲಿ ಅಡಗಿರುವ ನಾನಾ ಗುಣಗಳನ್ನು ಹೀಗೆ ವಿಭಜನೆಮಾಡಿ, ಅವೊಂದೊಂದನ್ನೂ ಪ್ರತಿಯೊಂದು ಸ್ಥಿತಿಯಲ್ಲಿಯೂ ಇಷ್ಟು ಸ್ಫುಟವಾಗಿ ವಿವರಿಸಿ ವ್ಯಕ್ತಪಡಿಸಿ ಒಂದು ದೊಡ್ಡ ವೃತ್ತದ ತುಂಬ ವರ್ಣಿಸಿರುವುದು ಪ್ರಾಯಶಃ ಮತ್ತಾವ ಕವಿಯಲ್ಲಿಯೂ ಕಂಡುಬರಲಾರದು.

* ವೇ॥ ಸೀತಾರಾಮಶಾಸ್ತ್ರಿಗಳು ಮಾಡಿದ ಭಾಷಾಂತರ.

ರಾಮನು ಸೀತೆಯನ್ನು ಹುಡುಕಿಕೊಂಡು ಬರುತ್ತ ಗಿಡಗಳ ಪಾತೆಗಳನ್ನು ನೋಡಿ ಸೀತೆಯು ಅಲ್ಲೇ ಎಲ್ಲೋ ಇರಬೇಕೆಂದು ಊಹಿಸುವನು. ಈ ಪದ್ಯದಲ್ಲಿ ಒಂದೊಂದು ಗಿಡದ ಪಾತೆಗೂ ನೀರೆರೆದಿರುವುದರಲ್ಲಿ ಪೌರ್ವಾಪರ್ಯವನ್ನೂ ಕಾಲಾನುಕ್ರಮವನ್ನೂ ಹೇಗೆ ತೋರಿಸಿದ್ದಾನೆ ನೋಡಿ:—

ಅವನಿರುಹಾಲವಾಲದೆ ಜಲಂ ನೊರೆಗೂಡಿ ಸಮಂತು ಸುತ್ತುಗುಂ
ಸವನಿಸೆ ತೃಷ್ಣೆ ಸಾರ್ದು ವಿಹಗಂ ಜಲಮಂ ಶ್ರಮಮಿಲ್ಲದೀಂಟುಗುಂ ।
ನಿವರದೆ ತೀವೆ ನೀರ್ ನನೆದ ಕೀಟಕುಲಂ ಸ್ಥಲಕೈದುಗುಂ ದ್ರುಮಂ
ನವನಲಯಂಗಳಂ ತಳೆದುವಿಂತಡಿಯೊಳ್ ಜಳನಾಶ ರೇಖೆಯಿಂ ॥*

ಇದರ ನಾಲ್ಕು ಪಾದಗಳಲ್ಲಿ ನಾಲ್ಕು ಪಾತೆಗಳ ವರ್ಣನೆಯಿದೆ. ಮೊದಲನೆಯದರಲ್ಲಿ, ಇನ್ನೂ ಆಗತಾನೇ ನೀರುಹಾಕಿದೆ; ಆದ್ದರಿಂದ ನೀರು ಇನ್ನೂ ನಿಂತಿಲ್ಲ; ಸುತ್ತುತ್ತಿದೆ; ನೊರೆ ಆರಿಲ್ಲ. ಎರಡನೆಯದರಲ್ಲಿ, ನೀರುಹಾಕಿ ಅದಕ್ಕಿಂತ ಸ್ವಲ್ಪ ಹೊತ್ತಾಗಿದೆ; ಆದ್ದರಿಂದ ನೀರು ನಿಂತಿದೆ; ತಿಳಿಯಾಗಿದೆ; ನೊರೆಯಿಲ್ಲ; ಆದ್ದರಿಂದ ಹಕ್ಕಿಯು ಬಂದು ಅಲ್ಲಿ ಕುಳಿತು ಅನಾಯಾಸವಾಗಿ ನೀರು ಕುಡಿಯುತ್ತಿದೆ. (ಮೊದಲನೆಯ ಪಾತೆಯ ಹಾಗೆ ನೀರು ಇನ್ನೂ ಬೊಗ್ಗಡವಾಗಿ ಗರಗರನೆ ಸುತ್ತುತ್ತಿದ್ದರೆ ಹಕ್ಕಿಯು ಶಾಂತವಾಗಿ ಅಲ್ಲಿ ನೀರು ಕುಡಿಯುವುದಕ್ಕೆ ಕೂರುತ್ತಿರಲಿಲ್ಲ.) ಮೂರನೆಯದರಲ್ಲಿ, ಇನ್ನೂ ಸ್ವಲ್ಪ ಹೊತ್ತಾಗಿದೆ; ಆದ್ದರಿಂದ ನೀರೆಲ್ಲಾ ಇಂಗಿಹೋಗಿ, ಗಿಡದ ಸುತ್ತ ಗೂಡುಮಾಡಿಕೊಂಡಿದ್ದ ಇರುವೆ ಗೊದ್ದ ಮುಂತಾದವುಗಳ ಗೂಡಿಗೆ ನುಗ್ಗಿ ಅವನ್ನು ಹೊರಡಿಸಿದೆ; ನಾಲ್ಕನೆಯದರಲ್ಲಿ, ಎಲ್ಲಕ್ಕಿಂತ ಮುಂಚೆ ಹಾಕಿದ್ದು; ಆದ್ದರಿಂದ ಅದರಲ್ಲಿ ನೀರು ಸ್ವಲ್ಪವೂ ಇಲ್ಲ. ಗಿಡದ ಸುತ್ತ, ನೀರು ಎಷ್ಟು ಮಟ್ಟಕ್ಕೆ ಬಂದಿತ್ತು ಎಂದು ಸೂಚಿಸುವ ಗುರುತು ಮಾತ್ರ ಇದೆ.

ಇವುಗಳಲ್ಲಿ ಸ್ವಲ್ಪವೂ ಕೃತಕತ್ವವಿಲ್ಲ. ಈ ಕಾವ್ಯವನ್ನು ಬರೆದಾಗ ಸಂಸ್ಕೃತ ಕವಿಗೆ ಇನ್ನೂ ಸ್ವಾತಂತ್ರ್ಯವಿತ್ತು; ಅವನ ಕೃತಿಯಲ್ಲಿ ಜೀವವಿತ್ತು; ಪ್ರತಿಭಾ ಸರಸ್ಸಿನಲ್ಲಿ ಕವಿಸಮಯವೂ ಚಮತ್ಕಾರ ಪ್ರೀತಿಯೂ ಅಂತರಗಂಗೆಯ ಗಿಡದಂತೆ ಬೆಳೆದು ರಸವನ್ನು ಮುಚ್ಚಿಬಿಟ್ಟಿರಲಿಲ್ಲ.

---

* ವೇ|| ಸೀತಾರಾಮಶಾಸ್ತ್ರಿಗಳು ಮಾಡಿದ ಭಾಷಾಂತರ.

2067—31. ಬೆಂಗಳೂರು ಪ್ರೆಸ್

ಸಾದರ ಸ್ವೀಕಾರ

I ಪದ್ಯಕಾವ್ಯಗಳು

೧. ಗರತಿಯ ಹಾಡು :— ಉತ್ತರಕರ್ಣಾಟಕ ಪ್ರಾಂತದ ೨೧ ಹಳೆಯ ಹಾಡುಗಳು ; ಸಂಪಾದಿಸಿದವರು, ಮ॥ ಹಲಸಂಗಿಯ ಚೆನ್ನ ಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮೊದಲಾದ ಗೆಳೆಯರು. ಜಯಕರ್ನಾಟಕ ಗ್ರಂಥಮಾಲೆಯ ಚತುರ್ಥಪುಷ್ಪ. ಮ॥ ಗಳಾದ ಮಾಸ್ತಿ ವೆಂಕಟೇಶಯ್ಯಂಗಾರ್ಯರ 'ಹಿರಿಯರ ಆಶೀರ್ವಾದ'ದಿಂದಲೂ ಬಿ. ಎಂ. ಶ್ರೀಕಂಠಯ್ಯನವರ ಪ್ರಸ್ತಾವನೆಯಿಂದಲೂ, ದ. ರಾ. ಬೇಂದ್ರೆಯವರ ಮುನ್ನುಡಿಯಿಂದಲೂ ಕೂಡಿದೆ. ಕ್ರೌನ್ ಅ. ೯೪. ಬೆಲೆ ೧೦ ಆಣೆ.

೨. ರಾಷ್ಟ್ರೀಯಪದ್ಯಗಳು :— ೧೫ ಹಾಡುಗಳು ; ಗ್ರಂಥಕರ್ತರು, ಮ॥ ಶ್ರೀ. ರಾ. ವೆ. ಕರಿಗುದರಿ. ಪ್ರಕಾಶಕರು, ಎ. ಆರ್. ಶಿವನಾಗಪ್ಪಾ, ಹುಬ್ಬಳ್ಳಿ. ಪು. ಅ. ೧೬. ಬೆಲೆ, ರೂ. ೦—೧—೬.

೩. ಇಸಬೆಲ ಮತ್ತು ಇತರ ಪದ್ಯಗಳು :—ಕೀಟ್ಸ್ ಕವಿಯ 'ದಿ ಪಾಟ್ ಆಫ್ ಬೆಸಿಲ್' ಮುಂತಾದ ಒಂಬತ್ತು ಕವಿತೆಗಳ ಭಾಷಾಂತರ. ಹೊಸ ಛಂದಸ್ಸಿನಲ್ಲಿದೆ. ಗ್ರಂಥಕರ್ತರು, ಮ॥ 'ನೀಲಕಂಠಂ'. ಕ್ರೌನ್ ಅ. ೩೨. ಬೆಲೆ ?

೪-೫. ಶ್ರೀಪ್ರಭುದೇವರ ಗುರುಬೋಧೆ, ಶ್ರೀಪ್ರಭುದೇವರ ಪದಗಳು :— ಶ್ರೀಮನ್ನಿರಂಜನ ಜಗದ್ಗುರು ಗ್ರಂಥಮಾಲೆಯ ೧೦ ಮತ್ತು ೧೧ನೆಯ ಪುಷ್ಪಗಳು. ಶೋಧಕರು ಮತ್ತು ಪ್ರಕಾಶಕರು, ಮ॥ ಬುದ್ಧಯ್ಯಾ ಮಗೆಯ್ಯಾ ಪುರಾಣಿಕ, ತೇರದಾಳ. ಕ್ರೌನ್ ಅ. ೧೭ ಮತ್ತು ೨೧. ಬೆಲೆ ?

೬. ಹರಿಶ್ಚಂದ್ರಕಾವ್ಯಸಂಗ್ರಹ :-ರಾಘವಾಂಕಕವಿಯ ಸುಪ್ರಸಿದ್ಧಗ್ರಂಥದ ಸಂಗ್ರಹ. ಸಂಪಾದಕರು, ಮ॥ ಗಳಾದ ಬಿ. ಎಂ. ಶ್ರೀಕಂಠಯ್ಯನವರು, ಟಿ. ಎಸ್. ವೆಂಕಣ್ಣಯ್ಯನವರು, ಎ. ಆರ್. ಕೃಷ್ಣ

ಶಾಸ್ತ್ರಿಗಳು. ಮುನ್ನುಡಿ ಉಪೋದ್ಘಾತ ಶಬ್ದಕೋಶಗಳಿವೆ. ಪ್ರಕಾಶಕರು, ವಿಶ್ವವಿದ್ಯಾನಿಲಯ, ಮೈಸೂರು. ಕ್ರೌನ್ ಅ. ೭೮+೧೩೯. ಬೆಲೆ, ೧೨ ಆಣೆ ಮತ್ತು ೧ ರೂಪಾಯಿ.

II ನಾಟಕಗಳು

೧. ಕನ್ನಡ ಕೇಸರಿ:— 'ಇದೊಂದು ಐತಿಹಾಸಿಕ ಸ್ವತಂತ್ರವಾದ ಸಂಗೀತನಾಟಕವು'. ನಾಲ್ಕು ಅಂಕಗಳು. ಉತ್ತರಕರ್ನಾಟಕದ ಮಾತಿನಲ್ಲಿ ಬರೆದದ್ದು. ಲೇಖಕರು ಮ॥ ಬಿ. ಕಲ್ಯಾಣಶರ್ಮಾ; ಪ್ರಕಾಶಕರು ಮ॥ ಶ್ರೀ ವೆಂಕಟೇಶ ಶ್ರೀನಿವಾಸ ಪಂಡಿತ, ಬಿ.ಎ., ಎಲ್‌ಎಲ್.ಬಿ. ಬೆಳಗಾವಿ. 'ಶ್ರೀ ಭುವನೇಶ್ವರೀ 'ಗ್ರಂಥಮಾಲೆ'ಯ ಒಂದನೆಯ ಗ್ರಂಥ: ಕ್ರೌನ್ ಅ. ೮೨, ಬೆಲೆ, ೮ ಆಣೆ, ೧೨ ಆಣೆ.

೩. ಕರ್ಣಾಟಕ ಮುದ್ರಾರಾಕ್ಷಸ ನಾಟಕಂ:—ಭಾಷಾಂತರ ಕರ್ತರು, ವೇ॥ ಆಸ್ಥಾನ ಮಹಾವಿದ್ವಾನ್, ಪೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳು. ಉಪೋದ್ಘಾತದಲ್ಲಿ ಮ॥ ಎಸ್. ಶ್ರೀಕಂಠಶಾಸ್ತ್ರಿಗಳು, ಈ ಗ್ರಂಥದ ಕಾಲವು ಸು. ಕ್ರಿ. ಶ. ೩೯೮ ಎಂದು ಅಭಿಪ್ರಾಯಪಟ್ಟಿದ್ದಾರೆ. ಕೊನೆಯಲ್ಲಿ ಕ್ಲಿಷ್ಟಪದ್ಯಗಳ ಅರ್ಥತಾತ್ಪರ್ಯಾದಿಗಳೂ, ಕ್ಲಿಷ್ಟಪದಗಳ ಅರ್ಥವೂ ಇವೆ. ಕ್ರೌನ್ ಅ. ೩೨+೧೩೮. ಬೆಲೆ?

೪. ಕೃಷ್ಣಾಕುಮಾರಿ:— ಲೇಖಕರು ಮ॥ ಬೆನಗಲ್ ರಾಮರಾವ್, ಎಂ.ಎ., ಎಲ್‌ಎಲ್.ಬಿ. ಪ್ರಕಾಶಕರು, ಬಾಲಸಾಹಿತ್ಯಮಂಡಲ, ಮಂಗಳೂರು. ಮಧುಸೂದನದತ್ತರ ಬಂಗಾಳಿ ಮೂಲದಿಂದ ಕನ್ನಡಿಸಲ್ಪಟ್ಟ ಐತಿಹಾಸಕ ನಾಟಕ. ದ್ವಿತೀಯ ಮುದ್ರಣ, ೧೯೩೧. ಕ್ರೌನ್ ಅ. ೧೧೭. ಬೆಲೆ, ರೂ. ೧-೪-೦

III ಕಥೆ ಕಾದಂಬರಿಗಳು

೧. ಬಿಸಿಲುಗುದುರೆ:– ಐದು ಸಣ್ಣ ಕಥೆಗಳು. ಜಯಕರ್ನಾಟಕ ಗ್ರಂಥಮಾಲೆಯ ಪಂಚಮಪುಷ್ಪ. ಗ್ರಂಥಕರ್ತರು, ಮ॥ ಕೃಷ್ಣ

ಕುಮಾರ ಕಲ್ಲೂರ. ಮ॥ ದ. ರಾ. ಬೇಂದ್ರೆಯವರ ಮುನ್ನುಡಿ, ಪ್ರಕಾಶಕರ ಎರಡು ನುಡಿ, ಮತ್ತು ಕೃಷ್ಣಕುಮಾರರ ಅರಿಕೆಗಳಿಂದ ಕೂಡಿದೆ. ಕ್ರೌ. ೧೬. ೮+೯೬, ಬೆಲೆ, ೧೦ ಆಣೆ.

೨. **ಅಂತರಂಗ :**—ಗ್ರಂಥಕರ್ತರು, ಮ॥ ದೇವುಡು ನರಸಿಂಹ ಶಾಸ್ತ್ರಿಗಳು, ಎಂ.ಎ. ಪ್ರಕಾಶಕರು, ಕೃಷ್ಣಾ ಕಂಪೆನಿ, ಬೆಂಗಳೂರು ಸಿಟಿ. ಒಬ್ಬ ಬಸವಿಯ ತ್ಯಾಗದಿಂದ, ವಿದ್ವಾಂಸನಾದ ವೈದಿಕ ಬ್ರಾಹ್ಮಣನೊಬ್ಬನ ಸಂಸಾರವು ಉಳಿದ, ಚಿತ್ತವೃತ್ತಿನಿರೂಪಣ ಪ್ರಧಾನವಾದ, ಕಲ್ಪಿತಕಥೆ. ಕ್ರೌ. ೧೬. ೧೮೭. ಬೆಲೆ, ರೂ. ೧.

೩. **ಹಳ್ಳಿಯ ಚಿತ್ರಗಳು :**— ಗ್ರಂಥಕರ್ತರು, ಮ॥ ಗೊರೂರು ರಾಮಸ್ವಾಮಯ್ಯಂಗಾರ್ಯರು. ಮ॥ ಶ್ರೀನಿವಾಸರ ಮುನ್ನುಡಿಯಿದೆ. ಕ್ರೌ. ೧೬. ೧೦+೧೪೧. ಬೆಲೆ, ೧ ರೂ, ಮತ್ತು ರೂ. ೧-೮-೦. ಇದರಲ್ಲಿ ಹತ್ತು 'ಚಿತ್ರ'ಗಳಿವೆ. ಇವುಗಳ ವಿಷಯ ಶೈಲಿ ಪ್ರತಿಪಾದನಕ್ರಮಗಳೆಲ್ಲಾ ಆಧುನಿಕ ಸಣ್ಣ ಕಥೆಯ ಕಾವ್ಯಜಾತಿಯಲ್ಲಿ ಕಂಡುಬರತಕ್ಕವು. ಕಥನದಲ್ಲಿ ಜೀವವಿದೆ. ಸರಳತೆಯಿದೆ. ವರ್ಣನೆಯಲ್ಲಿ ಚಿತ್ರರಚನಾಸಾಮರ್ಥ್ಯವಿದೆ. ಎಲ್ಲಕ್ಕಿಂತಲೂ ಹೆಚ್ಚಾಗಿ, ತಿಳಿಯಾದ ಹಾಸ್ಯವಿರುವುದರಿಂದ ಇದು ಯಾರಾದರೂ ಓದಿ ಸಂತೋಷಪಡಬಹುದಾದ ಉತ್ತಮ 'ಲಘುಕಾವ್ಯ'ವಾಗಿದೆ.

೪. **ಸಾವಿತ್ರಿಯ ಸಾಹಸ :**—ಬೆಳಗಾಂವಿಯ ಒಂದಾಣೆ ಗ್ರಂಥಮಾಲೆಯ ಆರನೆಯ ಪುಷ್ಪ; ಒಂದು ಸಾಮಾಜಿಕ ಕಲ್ಪಿತ ಕಥೆ. ಗ್ರಂಥಕರ್ತರು, ಮ॥ ಮೋವುಂಡಿ ಮಲ್ಲಾರಿ. ಕ್ರೌ. ೧೬. ೧೪.

೫. **ದೇಶಭಕ್ತಿಯ ಕಥೆಗಳು :**— ಸಂಗ್ರಾಹಕರು, ಮ॥ 'ಭರತ'. 'ನವಕರ್ನಾಟಕ'ದಿಂದ ಪುನರ್ಮುದ್ರಿತ. ರಾ॥ ಸಾ॥ ಹಳಕಟ್ಟಿಯವರು ಮುನ್ನುಡಿ ಬರೆದು ಪ್ರಕಟಿಸಿದ್ದಾರೆ. ಇದರಲ್ಲಿ ನಾನಾ ದೇಶದ ದೇಶಭಕ್ತ ಸ್ತ್ರೀಪುರುಷರ ವಿಚಾರಕವಾದ ಹದಿನಾರು ಪುಟ್ಟ ಪುಟ್ಟ ಕಥೆಗಳು—ಐತಿಹಾಸಿಕ ಆಖ್ಯಾನಗಳು— ಇವೆ. ಇಂಥವುಗಳನ್ನು ಹುಡುಗರು ಓದುವುದು ಒಳ್ಳೆಯದು. ಕ್ರೌ. ೧೬. ೩೨. ಬೆಲೆ, ೩ ಆಣೆ.

೬. ಕಿಟ್ಟು ಬೆಟ್ಟ ಎತ್ತಿದ:—ಬಾಲಾನಂದ ಗ್ರಂಥಮಾಲೆಯ ಒಂದನೆಯ ಪುಷ್ಪ. ಸಚಿತ್ರ. ಗ್ರಂಥಕರ್ತರು, ಮ|| ಪ್ರ. ಗೋ. ಕುಲ ಕರಣಿ. ಪ್ರಕಾಶಕರು, ಕರ್ಣಾಟಕ ಫೋಟೋ ಝಿಂಕೋ ವರ್ಕ್ಸ್, ಬೆಳಗಾಂವಿ. ಚಿಕ್ಕಮಕ್ಕಳಿಗೋಸ್ಕರ ದೊಡ್ಡ ಅಕ್ಷರದಲ್ಲಿ ಅಚ್ಚಾದ ಕೃಷ್ಣಕಥೆ. ಕ್ರೌ ಅ. ೧೬. ಬೆಲೆ, ರೂ. ೦-೧-೩.

೭. ಬಾಲವಿಧವೆಯೇ? ಲೇಖಕರು, ಮ|| ಎಂ. ವಿ. ರಂಗರಾವ್. ಪ್ರಕಾಶಕರು 'ಕರ್ತವ್ಯ' ಕಾರ್ಯಾಲಯ, ಚನ್ನಪಟ್ಟಣ. ಒಬ್ಬ ಬಾಲ ವಿಧವೆಯು ಸಂಕಟದಿಂದ ಹೇಳಿಕೊಂಡ ಆತ್ಮವೃತ್ತಾಂತ. ಡೆ. ಅ. ೮ ಬೆಲೆ, ೧ ಆಣೆ.

೮. ಶ್ರೀಮದ್ವಾಲ್ಮೀಕಿರಾಮಾಯಣ ಕಥಾಸಂಗ್ರಹ:- ಲೇಖಕರು, ಮ|| ಭಾರತಿ ಸಂಪಂಗಿರಾಮಯ್ಯನವರು; 'ಸವಿನುಡಿ'ಯ ಸಂಪಾದಕರು. "ಕರ್ಣಾಟಕ ಗದ್ಯಪದ್ಯಾತ್ಮಕ ಸಪ್ತಕಾಂಡೋಪೇತ ದಶಾವತಾರಾದಿ ಕಥೋಪಕಥನಗಳುಳ್ಳದ್ದು". ಡೆ. ಅ. ೪೦೨. ಬೆಲೆ, ೨ ರೂಪಾಯಿ.

IV ಪ್ರಬಂಧಗಳು

೧. ಮನಸ್ಸಿನ ಆರೋಗ್ಯ: — ಲೇಖಕರು, ಡಾ. ಫ್ರಾಂಕ್ ನೊರೋನ್ಹಾ, ಎಂ.ಬಿ.ಸಿ.ಎಂ., ಡಿ.ಪಿ.ಎಂ., ಬೆಂಗಳೂರಿನ ಮನಸ್ಸಿನ ಆಸ್ಪತ್ರೆಯ ಸೂಪರಿಂಟೆಂಡೆಂಟರು. ಪ್ರಕಾಶಕರು, ಶ್ರೀ ಕೃಷ್ಣನ್ ಬ್ರದರ್ಸ್, ಕೆಮಿಸ್ಟ್ಸ್, ತಂಬುಚೆಟ್ಟಿಬೀದಿ, ಮದರಾಸು. ಡೆ. ಫೋ. ೩೫. ಬೆಲೆ, ೪ ಆಣೆ.

ಈ ಪ್ರಬಂಧದಲ್ಲಿ ೧. ಮನಸ್ಸಿನ ಆರೋಗ್ಯವೆಂದರೇನು? ೨. ಬಾಲ್ಯದಿಂದಲೂ ಆರೋಗ್ಯಶಿಕ್ಷಣಕ್ರಮ ೩. ಕಾಮಕ್ರೋಧಾದಿ ಭಾವೋದ್ರೇಕಗಳೂ ಮನೋರೋಗಗಳೇ ೪. ತಾನು ಬೇರೆಯವರಿಗಿಂತಲೂ ಕಡಿಮೆಯೆಂಬ ಹೀನತ್ವಭಾವವು ಮನೋಬಲವನ್ನು ತಗ್ಗಿಸುವುದು ೫. ಇಂದ್ರಿಯನಿಗ್ರಹ ಮತ್ತು ಮನೋನಿಗ್ರಹಗಳು

೬. ಏಕಾಗ್ರತೆಯಿಲ್ಲದ ಚಿತ್ತಚಾಂಚಲ್ಯವೂ ಒಂದು ವ್ಯಾಧಿಯೇ ೭. ಮನೋಬಲ ಸಾಧನೆಯೇ ಮನೋವ್ಯಾಧಿಗಳ ಚಿಕಿತ್ಸೆ– ಎಂಬ ಏಳು ಅಧ್ಯಾಯಗಳಿವೆ. ಅಧ್ಯಾಯಗಳ ಹೆಸರಿನಿಂದಲೇ ಈ ಪ್ರಬಂಧದ ವಿಷಯವು ಸೂಚಿತವಾಗುತ್ತದೆ. ದೇಹದಾರ್ಢ್ಯ ಚೆನ್ನಾಗಿದ್ದರೂ ಮನಸ್ಸು ದುರ್ಬಲ ಅಥವಾ ರೋಗಗ್ರಸ್ತವಾಗಿರಬಹುದು, ಆದರೆ ಮನಸ್ಸಿನ ಆರೋಗ್ಯದಿಂದ ದೇಹಾರೋಗ್ಯ ನಿಯತ. ಶಾಂತಿಯಿಂದಲೇ ಸೌಖ್ಯ. ಇದಕ್ಕೆ ಕ್ರಮವಾದ ಅಭ್ಯಾಸವು ಆವಶ್ಯಕ– ಎಂಬುದು ಈ ಉಪನ್ಯಾಸದ ಸಾರಾಂಶ. ಇದನ್ನು, ಇನ್ನೂ ಹಲವು ವಿಷಯದೃಷ್ಟಾಂತಗಳೊಡನೆ ಲೇಖಕರು ಪ್ರತಿಪಾದಿಸಿದ್ದಾರೆ. ಇದು ರಾಜಯೋಗದ ಮೂಲಪಾಠ. ಇದನ್ನು ವೈದ್ಯಶಾಸ್ತ್ರಜ್ಞಾನವೂ ಲೌಕಿಕ ಅನುಭವವೂ ಉಳ್ಳ ಡಾಕ್ಟರು ಹೇಳಿರುವುದರಿಂದ ಇದರ ಐಹಿಕಪ್ರಯೋಜನವು ಕಾಣುವಂತಾಗಿದೆ. ನಮ್ಮ ಹುಡುಗರು ಓದುವ ಆರೋಗ್ಯಶಾಸ್ತ್ರದಲ್ಲಿ ಇದರ ಕೆಲವು ಅಭಿಪ್ರಾಯಗಳನ್ನಾದರೂ ಸೇರಿಸುವುದರಿಂದ ಗುಣವುಂಟು.

೨. **ವಿಜಯನಗರ ಸಾಮ್ರಾಜ್ಯ:**–ರಾಜಕೀಯೋನ್ನತಿ ಮತ್ತು ಸಾಹಿತ್ಯ ಪರಿಪುಷ್ಟಿ. ಲೇಖಕರು, ಮ॥ ರಾಮಚಂದ್ರ ಗುರುನಾಥ ಕುಲಕರ್ಣಿ. ಡೆ. ಅ. ೨೭. ಬೆಲೆ, ರೂ. ೦-೩-೬.

೩. **ಹರಟೆಗಳು:**— “ಜಯ ಕರ್ನಾಟಕ” ಗ್ರಂಥಮಾಲೆಯ ಆರನೆಯ ಪುಷ್ಪ. ಹನ್ನೆರಡು “ಹಾಸಪರಿಹಾಸಗಳು”. ಬರೆದವರು, ‘ಗೆಳೆಯರು’. ಶ್ರೀಮಾನ್. ದ. ರಾ. ಬೇಂದ್ರೆಯವರು ‘ಹರಟೆ’ಯೆಂಬ ಪ್ರಬಂಧಜಾತಿಯ ಸ್ವರೂಪ ಚರಿತ್ರಾದಿಗಳನ್ನು ವಿವರಿಸಿ ಮುನ್ನುಡಿಯನ್ನು ಬರೆದಿದ್ದಾರೆ. ಅವರವೇ ಐದು ‘ಹರಟೆ’ಗಳಿವೆ. ಕ್ರಾ॥ ಅ. ೯೨. ಬೆಲೆ, ೧೦ ಆಣೆ.

೪. **ಭಾರತೀಯರಾಷ್ಟ್ರಧ್ವಜ:**—ಲೇಖಕರು. ಡಾ॥ ನಾ. ಸು. ಹರ್ಡೀಕರ. ಪ್ರಕಾಶಕರು, ಮ॥ ಲಕ್ಷ್ಮಣ ಸುಬ್ಬರಾವ ಹರ್ಡೀಕರ, ೭೫೦ ಸದಾಶಿವಪೇಟೆ, ಪುಣೆ. ಮರಾಠಿ ಮೂಲದಿಂದ ಮ॥ ಶ್ರೀನಿವಾಸ ಕೌಜಲಗಿಯವರು ಮಾಡಿದ ಭಾಷಾಂತರ.

ಈ ಸಣ್ಣ ಪುಸ್ತಕದಲ್ಲಿ ಡಾ|| ಹರ್ಡೀಕರರು ರಾಷ್ಟ್ರೀಯಧ್ವಜದ ಸ್ವರೂಪ ಗೌರವ ಆರೋಹಣ ಅವತರಣ ವಂದನಾದಿಗಳನ್ನು ವಿವರಿಸಿದ್ದಾರೆ. ರಾಷ್ಟ್ರಧ್ವಜದಲ್ಲಿ 'ಪ್ರೇಮವೂ ಆದರವೂ ಅಭಿಮಾನವೂ ಆತ್ಮೀಯತೆಯೂ ಉತ್ಪನ್ನವಾಗುವುದಕ್ಕಾಗಿಯೂ ಅದರ ವಿಷಯವಾಗಿ ಆಗುವ ಎಲ್ಲವಿಧಗಳ ಶಾಸ್ತ್ರೋಕ್ತಜ್ಞಾನವನ್ನುಂಟು ಮಾಡಿಕೊಳ್ಳುವುದಕ್ಕಾಗಿಯೂ' ಬರೆದ ಗ್ರಂಥ. ಕೊನೆಯಲ್ಲಿ 'ವಂದೇ ಮಾತರಂ' 'ವಿಜಯೀ ವಿಶ್ವ ತಿರಂಗಾ ಪ್ಯಾರಾ' 'ರಾಷ್ಟ್ರಗಗನಕೀ....' ಎಂಬ ಗಾನಗಳೂ ಧ್ವಜವಂದನ-ಕವಾತನ್ನು ವಿವರಿಸುವ ಒಂಬತ್ತು ಹಾಫ್‌ಟೋನ್ ಚಿತ್ರಗಳೂ ಧ್ವಜವಂದನ ಕ್ಷೇತ್ರದ ನಕಾಸೆಯೂ ಇವೆ. ಕ್ರೌನ್ ೮. ೫೬. ಬೆಲೆ, ೨ ಆಣೆ.

V ಪತ್ರಿಕೆಗಳು

೧. **Karnatak Historical Review :**— ಸಂಪುಟ ೧, ಸಂಚಿಕೆ ೧. ಧಾರವಾಡದ ಕರ್ಣಾಟಕ ಹಿಸ್ಟಾರಿಕಲ್ ರಿಸರ್ಚ್ ಸೊಸೈಟಿಯವರಿಂದ ಪ್ರಕಟವಾಗುವ ಸಚಿತ್ರ ಷಾಣ್ಮಾಸಿಕ ಪತ್ರಿಕೆ. ಸಂಪಾದಕರು, ಮ|| ಡಿ. ಪಿ. ಕರಮರಕರ್, ಎಂ.ಎ., ಎಲ್‌ಎಲ್.ಬಿ. 'ಇದರಲ್ಲಿ ಮ|| ಗಳಾದ ಗೋವಿಂದಪೈ, ಹೀರಾಸ್, ಆಲೂರ, ಕರಮರಕರ್ ಮುಂತಾದ ವಿದ್ವಾಂಸರ ಪ್ರೌಢಲೇಖನಗಳಿವೆ. ರಾ. ೮. ೫೦. ವಾರ್ಷಿಕ ಚಂದಾ?

೨. ಶ್ರೀ ಹಾನಗಲ್ ಕುಮಾರಸ್ವಾಮಿಗಳವರ ಸ್ಮಾರಕಚಂದ್ರಿಕೆ:— ಪ್ರಕಾಶಕರು, ಮ|| ವಿ. ಬಿ. ಪುರಾಣಿಕ, ಲೋಕಮತ ಕಾರ್ಯಾಲಯ, ಹುಬ್ಬಳ್ಳಿ. "ಲೋಕಮತ" ಪತ್ರಿಕೆಯ ಕಾಣಿಕೆ. ಇದರಲ್ಲಿ ಹಾನಗಲ್ ಶ್ರೀ ಕುಮಾರಸ್ವಾಮಿಗಳ ಜೀವನಚರಿತ್ರೆಯೇ ಮೊದಲಾದ, ವೀರಶೈವಮತ ಜನ ಸಮಾಜ ವಾಙ್ಮಯಾದಿ ವಿಚಾರಕವಾದ ೧೯ ಲೇಖನಗಳು ಇವೆ. ಕ್ರೌನ್ ೮. ೧೨೨. ಬೆಲೆ, ೧ ರೂಪಾಯಿ.

೩. ಮಕ್ಕಳ ಪುಸ್ತಕ ಯುಗಾದಿ ಸಂಚಿಕೆ, ೧೯೩೧:— ಸಂಪಾದಕರು ಮ|| ಸಿ. ಅಶ್ವತ್ಥನಾರಾಯಣರಾವ್, ಬಿ.ಎ. ನಾನಾ ಬಣ್ಣದ

ಆರ್ಟ್ ಕಾಗದದ ಮೇಲೆ, ನಾನಾವರ್ಣದ ಶಾಯಿಯಲ್ಲಿ, ಚಿತ್ರಭರಿತವಾಗಿ ಮುದ್ರಿಸಲ್ಪಟ್ಟಿದೆ. ಚಿಕ್ಕ ಹುಡುಗರು ಓದಿ, ನೋಡಿ, ಸಂತೋಷಪಡಬಹುದಾದ ಪುಸ್ತಕ. ಪ್ರಕಾಶಕರು, ಕೃಷ್ಣಾ ಕಂಪೆನಿ, ಬಳೇಪೇಟೆ, ಬೆಂಗಳೂರು ನಗರ. ಕ್ರೌನ್ ೮. ೧೦೦. ಬೆಲೆ ?

೪. **ವಿಶ್ವಕರ್ಣಾಟಕ** ಯುಗಾದಿಯ ಸಂಚಿಕೆ ೧೯೩೧ :— ಇದರಲ್ಲಿ ವಿಜ್ಞಾನ, ರಾಜನೀತಿ, ಸಾಹಿತ್ಯ ಎಂಬ ಮೂರು ಭಾಗಗಳಿವೆ. ರಾವ್ ಬಹದ್ದೂರ್ ವೆಂಕಟೇಶಾಚಾರ್ಯರು, ಮ|| ಕೆ. ವಿ. ಪುಟ್ಟಪ್ಪನವರು ಮುಂತಾದ ಪ್ರಸಿದ್ಧ ಹಿರಿಯ ಕಿರಿಯ ವಿದ್ವಾಂಸರು ತಮ್ಮ ತಮ್ಮ ಕ್ಷೇತ್ರದಿಂದ ವಿಷಯಗಳನ್ನು ತೆಗೆದುಕೊಂಡು ಲೇಖನಗಳನ್ನು ಬರೆದಿದ್ದಾರೆ. ಸಾಹಿತ್ಯಭಾಗದಲ್ಲಿ ಭಾರತೀಯ ವಿವಿಧಭಾಷಾ ಸಾಹಿತ್ಯದ ಮೇಲಣ ಎಂಟು ಲೇಖನಗಳು ಇವೆ. ಇವುಗಳನ್ನು ಓದುವುದರಿಂದ ಕನ್ನಡ ಸಾಹಿತ್ಯದ ಸ್ಥಾನನಿರ್ದೇಶಕ್ಕೆ ಸಹಾಯವಾಗುತ್ತದೆ. ಹಲವು ಹಾಫ್‌ಟೋನ್ ಚಿತ್ರಗಳೂ, ರೇಖಾಚಿತ್ರಗಳೂ ಇವೆ. ಬೆಲೆ?

೫. **ಪ್ರಜಾಮತ :—** ಸಂಪುಟ ೧, ಸಂಚಿಕೆ ೧. ರಾಷ್ಟ್ರೀಯ ವಾರಪತ್ರಿಕೆ. ಮ|| ಬಿ. ಎನ್. ಗುಪ್ತರ ಸಂಪಾದಕತ್ವದಲ್ಲಿ, ಮದರಾಸಿನಲ್ಲಿ ಪ್ರಕಟವಾಗುತ್ತದೆ. ಹಲವು ಚಿತ್ರಗಳಿವೆ. ಕಾಗದ ಮುದ್ರಣ ವಿಷಯಗಳು ಚೆನ್ನಾಗಿವೆ. ಪುಟಗಳು ೧೬. ವಾರ್ಷಿಕ ಚಂದಾ, ರೂ. ೩-೮-೦. ಬಿಡಿಸಂಚಿಕೆ ೧ ಆಣೆ.

VI ವರದಿಗಳು

೧. ಧಾರವಾಡದ ಶ್ರೀಶಾಂತೇಶ ವಾಚನಾಲಯದ ೧೧ನೇ ವರ್ಷದ ವರದಿ. ಡೆ. ಅ. ೮.

೨. ಮೈಸೂರು ವಿಶ್ವಕರ್ಮ ಸಮಾಜದ ವರದಿ. ಇದುವರೆಗಿನ ಸಂಕ್ಷಿಪ್ತ ಇತಿಹಾಸ. ಜೂನ್ ೧೯೩೧. ಡೆ. ಅ. ೪೫. ಬೆಲೆ, ೪ ಆಣೆ.

೩. ಸಿರಹಟ್ಟಿಯ ಲೋಕಮಾನ್ಯ ಮುಫತ ವಾಚನಾಲಯದ ಸುವರ್ಣ ಮಹೋತ್ಸವದ ವರದಿ. ಕೌರ್‍ಯ ಅ. ೨೬.

೪. ಗದಗದಲ್ಲಿ ನಡೆದ ೧೯೩೦ನೇ ಇಸವಿಯ ಬಸವಜಯಂತಿಯ ವರದಿ. ಪ್ರಕಾಶಕರು, ವೀರಶೈವ ತರುಣಸಂಘ, ಗದಗ.

೫. ಕಾತಿಯ ಶ್ರೀ. ಜಯದೇವ ಫ್ರೀ ಬೋರ್ಡಿಂಗಿನ ೧೯೩೦ನೇ ಇಸವಿಯ ವರದಿ. ಡೆ. ಅ. ೨೪.

ವಸ್ತುಕೋಶ

ಈ ಸಂಚಿಕೆಯಿಂದ ಪ್ರಬುದ್ಧ ಕರ್ಣಾಟಕದ ಹದಿಮೂರನೆಯ ಸಂಪುಟವು ಪ್ರಾರಂಭವಾಗುತ್ತದೆ. ಇದನ್ನು ಈಗ ಹನ್ನೆರಡು ವರ್ಷಗಳಿಂದಲೂ ಪೋಷಿಸಿಕೊಂಡು ಬರುತ್ತಿರುವ ಕನ್ನಡಿಗ ಮಹಾಜನಕ್ಕೆ ಕರ್ಣಾಟಕ ಸಂಘವು ಈ ಮೂಲಕ ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತಿದೆ.

ವಂದನೆ-ಪ್ರಾರ್ಥನೆ

ದೇಶದಲ್ಲಿ ಸರ್ವತ್ರ ಉಂಟಾಗಿರುವ ಆರ್ಥಿಕ ಗ್ಲಾನಿಯು ಕರ್ಣಾಟಕಸಂಘಕ್ಕೂ ಪ್ರವೇಶಿಸಿ ಪ್ರಬುದ್ಧ ಕರ್ಣಾಟಕವನ್ನು ಮುಟ್ಟಿದೆ. ಸಂಘವೂ ಪತ್ರಿಕೆಯೂ ನಡೆಯುತ್ತಿರುವುದು ಆದರ ಪೋಷಕರಿಂದ; ಅವರಲ್ಲನೇಕರು ಸಾಮಾನ್ಯಚಂದಾವನ್ನೂ ಕೊಡಲಾರದವರಾಗಿ ವ್ಯಥೆಪಟ್ಟುಕೊಂಡು ಪತ್ರಗಳನ್ನು ಬರೆಯುತ್ತಿದ್ದಾರೆ. ಆದ್ದರಿಂದ ಕನ್ನಡದ ಅಭಿಮಾನಿಗಳು, ಸಂಸ್ಕೃತಿ ವಿದ್ಯೆ ಜ್ಞಾನಗಳಲ್ಲಿ ಪೂಜ್ಯತೆಯಿರುವ ವಿದ್ವನ್ಮಹನೀಯರು, ಸೆಂಟ್ರಲ್ ಕಾಲೇಜಿನಲ್ಲಿ ಪ್ರಬುದ್ಧ ಕರ್ಣಾಟಕವನ್ನು ನೆಟ್ಟು ನಡೆಸಿಕೊಂಡು ಬಂದು ನೋಡಿ ನಲಿಯುತ್ತಿರುವ ದೇಶಭಾಷಾವತ್ಸಲರು ಉದಾರವಾದ ಆಶ್ರಯವೀಯಬೇಕೆಂದು ಪ್ರಾರ್ಥಿಸುತ್ತೇವೆ.

ಚಿತ್ರ ಪರಿಚಯ

ಈ ಚಿತ್ರವನ್ನು ಬರೆದ ಮ॥ ರಾ॥ ಎಂ. ವಿ. ಸೀತಾರಾಮಯ್ಯನವರು ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಜೂನಿಯರ್ ಎಂ.ಎ. ತರಗತಿಯಲ್ಲಿ ಓದುತ್ತಿದ್ದಾರೆ. ಇನ್ನೂ ವಿದ್ಯಾರ್ಥಿದೆಶೆಯಲ್ಲಿದ್ದರೂ ಇವರು ಚಿತ್ರಕಲೆಯನ್ನು ಮಾತ್ರವೇ ಅಲ್ಲ, ಕಾವ್ಯಕಲೆಯನ್ನೂ ಸದ್ದಿಲ್ಲದೆ ಉಪಾಸನೆ ಮಾಡುತ್ತಿದ್ದಾರೆ. ಇವರ ಕವನಗಳಲ್ಲಿ ಕೆಲವು ಈಗಾಗಲೆ ಪ್ರಕಟವಾಗಿವೆ; ಕಾವ್ಯಕಲೆಗಿಂತಲೂ ಮುಂಚೆಯೇ ಇವ

ರಿಗೆ ಒಲಿದುಬಂದ ಚಿತ್ರಕಲೆಯ ಸೇವಾಫಲವು ಪ್ರಕಾಶಹೊಂದು ವುದಕ್ಕೆ ಇದೇ ಮೊದಲು.

ಈ ಚಿತ್ರವು ಸ್ವಕಲ್ಪಿತವೂ ಹೌದು, ಅನುಕರಣವೂ ಹೌದು. ಇವರ ಮಿತ್ರಮಂಡಲಿಯವರು ಮ॥ ರಾ॥ ಕೆ. ವಿ. ಪುಟ್ಟಪ್ಪನವರ "ಜಲಗಾರ" ಎಂಬ ನಾಟಕವನ್ನು ಒಂದು ಸಲ

ಕುರುಡ ಭಿಕ್ಷುಕ

ಅಭಿನಯಿಸಿದ್ದರು. ಅದರಲ್ಲಿ ಬರತಕ್ಕ ಕುರುಡ ಭಿಕ್ಷುಕನ ದರ್ಶನವೇ ಈ ಚಿತ್ರಕ್ಕೆ ಅಂಕುರ. ನಾಟಕದ ಮರುದಿನ, ಈಗಿನ ರೂಢಿಯಂತೆ, ನಟವರ್ಗದ ಛಾಯಾ ಚಿತ್ರವನ್ನು ತೆಗೆಯಿಸಿದರು. ಆ ಛಾಯಾಚಿತ್ರದಲ್ಲಿ ಕಂಡುಬಂದ ಭಿಕ್ಷುಕನ ರೂಪವೇ ಈ ಚಿತ್ರಕ್ಕೆ ಆಧಾರ. ಆದರೆ ಅಲ್ಲಿಯ ರೂಪಕ್ಕೂ ಇಲ್ಲಿಯುದಕ್ಕೂ ಭಾವವ್ಯತ್ಯಾಸವು ಬಹಳವಾಗಿದೆ. ಭಿಕ್ಷುಕನು ನಾಟಕದಲ್ಲಿ ಕುರುಡನಾಗಿದ್ದರೂ ಛಾಯಾಚಿತ್ರದಲ್ಲಿ ಕಣ್ಣುಬಿಟ್ಟು ಕೊಂಡೇ ಕುಳಿತಿದ್ದಾನೆ. ಅವನ ಮುಖದಲ್ಲಿ ದೈನ್ಯಭಾವದ ಲೇಶವೂ ಇಲ್ಲ; ಅದು ಯಾವ ಭಾವವೂ ತೋರದ ಬರಿಯ ಮುಖ. ಇಲ್ಲಿಯ ಚಿತ್ರದ ಸ್ವಾರಸ್ಯವೆಲ್ಲ ಭಿಕ್ಷುಕನ ಕಾಣದ ಕಣ್ಣುಗಳಲ್ಲಿ, ದೀನವದನ ದಲ್ಲಿ, ಅಡಗಿದೆ. ಅವನ ಮುಖದಲ್ಲಿ ತೋರುತ್ತಿರುವುದು ಜುಗುಪ್ಸೆ ಯಲ್ಲ, ನಿರಾಶೆಯಲ್ಲ, ದೈವಚಿತ್ತಕ್ಕೆ ತಲೆಬಾಗುವ ಗಾಢಸಹನೆ (Resignation); ಬೀದಿಯಲ್ಲಿ ಹೋಗಬಹುದಾದವರಿಗೆ ಕೂಡ ಅವನು ಮೊರೆಯಿಡುತ್ತಿಲ್ಲ; ಅಲ್ಲಿಗೆ ಬಂದಾಗ ಅವರಾಗಿಯೇ ಅವನ ಸ್ಥಿತಿಗೆ ಮನಗರಗಿ ಅವನ ಡಬ್ಬಕ್ಕೆ ಒಂದು ಕಾಸನ್ನು ಹಾಕಿದರುಂಟು.

ಚಿತ್ರವು ಎಷ್ಟು ಸಹಜವಾಗಿದೆ ಎಂಬುದನ್ನು ವಿವರಿಸಬೇಕಾಗಿಲ್ಲ. ಒಂದೇ ಒಂದು ಅಂಶವನ್ನು ಸೂಚಿಸಬಹುದಾದರೆ, — ಭಿಕ್ಷುಕನ ಮಾಸಿದ ಬನೀನೂ ಹಳೆಯ ಟೋಪಿಯೂ ಎಲ್ಲೆಲ್ಲಿ ಹರಿದಿರಬೇಕೋ ಅಲ್ಲಲ್ಲೇ ಹರಿದುಹೋಗಿವೆ. ಚಿತ್ರದಲ್ಲೆಲ್ಲಾ ನಯಗೆಲಸವು ಬಹಳ ಕುಶಲತೆಯಿಂದ ನಡೆದಿದೆ; ಆದರೆ ಆ ಸೂಕ್ಷ್ಮಸೌಂದರ್ಯವೆಲ್ಲವೂ ಅಚ್ಚಿನಲ್ಲಿ ಉಳಿಯುವುದು ಅಸಾಧ್ಯ. ಮುಖ್ಯವಾಗಿ, ಮೂಲಚಿತ್ರದ

ವರ್ಣವಿನ್ಯಾಸವು—ಚಿತ್ರಕಾರನ ಕಲ್ಪನೆಗೂ ಕೌಶಲಕ್ಕೂ ಸಾಕ್ಷಿಯಾದ ವರ್ಣವಿನ್ಯಾಸವು—ಅಚ್ಚಿನ ಚಿತ್ರದಲ್ಲಿ ಪೂರ್ಣವಾಗಿ ಬಿಟ್ಟುಹೋಗಿದೆ. ಅದರಿಂದ ಚಿತ್ರಕಾರನ ಶಕ್ತಿ ವ್ಯಕ್ತವಾಗುವುದಕ್ಕೆ ಅರ್ಧ ಅವಕಾಶವೇ ತಪ್ಪಿಹೋಗಿದ್ದರೂ ಮೂಲಚಿತ್ರದ ಸೌಂದರ್ಯವನ್ನು ಊಹಿಸಿಕೊಳ್ಳುವುದಕ್ಕೆ ಉಳಿದಿರುವ ಅಂಶಗಳೇ ಸಾಕು.

—ತೀ. ನಂ. ಶ್ರೀ.

ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕವಿದ್ವತ್ಸಭೆಯಲ್ಲಿ ಈ ಸಾರಿ ಡಾ|| ಫಾರ್ಸ್ಟರ್ ಅವರು ಮಾಡಿದ ಭಾಷಣದ ಸಾರಾಂಶ:—

ಮಹತ್ವವು ಅಂತತಃ ಹುಟ್ಟಿಬರತಕ್ಕದ್ದು, ಹೊರಗಿನಿಂದ ಯಾರೂ ಹೊರಿಸಿಕೊಡಬಲ್ಲುದಲ್ಲ. ಮೈಕೇಲ್ ಫ್ಯಾರಡೆ, ಜೆ. ಎನ್. ತಾತಾ, ಇವರೇ ಇದಕ್ಕೆ ಉದಾಹರಣೆ. ಇವರು ಜಾತಿ ದೇಶ ಕಾಲಾದಿಗಳಲ್ಲಿ ಬೇರೆಯಾದರೂ ತತ್ತ್ವೋದ್ದೇಶಗಳಲ್ಲಿ ಒಂದೇ. ಅವರು ತಮ್ಮ ಉಚ್ಛ್ರಾಯದ ಪ್ರಥಮ ಸೋಪಾನಕ್ಕೆ ಏರಿದ್ದು ಪ್ರಾಮಾಣಿಕತೆ ಕಾರ್ಯಶೀಲತೆ ಆತ್ಮಾವಲಂಬನೆ ಈ ಪ್ರಾಚೀನಗುಣಗಳ ಅನುಸರಣದಿಂದ. ಜಯಶೀಲರಾದಾಗ ಅವರು ಒಂದುಕಡೆ, ತಮ್ಮ ಸಾಧನಸಂಪತ್ತಿಗಳನ್ನು ಸಮಗ್ರಗೊಳಿಸಿಕೊಳ್ಳುತ್ತ ಮತ್ತೊಂದುಕಡೆ ತಮ್ಮ ದೇಶೀಯರ ಸ್ಥಿತಿಗತಿಗಳನ್ನು ಉತ್ತಮಗೊಳಿಸುತ್ತ ಬಂದರು. ಅವರಿಗೆ ತಮ್ಮ ಲಕ್ಷ್ಯದಲ್ಲಿ ಏಕಾಗ್ರತೆಯೂ ಮಿಕ್ಕೆಡೆಯಲ್ಲಿ ವಿಶಾಲದೃಷ್ಟಿಯೂ ಇತ್ತು. ಹೀಗೆ ಅವರು ಸ್ಥಿರವಾದ ಜಯಪರಂಪರೆಯನ್ನು ಪಡೆದರು. ಆದರೆ ಅವರಲ್ಲಿ ಸ್ವಪ್ರತಿಷ್ಠೆ ಅಹಂಕಾರವೆಂಬಿವು ಇರಲಿಲ್ಲ.

ಇಂಥ ಮಹತ್ವವು ಎಲ್ಲರ ಪಾಲಿಗೂ ಬರುವುದಿಲ್ಲ. ಆದರೆ ಯಾರಲ್ಲಿ ಯಾವ ಶಕ್ತಿ ಅಡಗಿಕೊಂಡಿದೆಯೋ ಯಾರು ಬಲ್ಲರು! ಆದ್ದರಿಂದ ಪ್ರತಿಯೊಬ್ಬನಿಗೂ ತನ್ನತನ್ನ ಶಕ್ತಿಯನ್ನು ಪೂರ್ಣಪ್ರಮಾಣದಲ್ಲಿ ವಿಕಾಸಪಡಿಸಿಕೊಳ್ಳುವುದು ಜೀವನದ ಪ್ರಧಾನೋದ್ದೇಶವಾಗಿರಬೇಕು; ಇದರಿಂದ ಧನಕನಕ ದೇಹಾರೋಗ್ಯ ಹಿತವೃತ್ತಿ ರೂಪವಾದ ಸುಖವು ಲಭಿಸುವುದು.

ಈ ನಿರುದ್ಯೋಗಕಾಲದಲ್ಲಿ ಜೀವಿಕೆ ಸಿಕ್ಕುವುದು ಕಷ್ಟ; ಸಿಕ್ಕಿ, ಅದನ್ನು ಅವಲಂಬಿಸಿ, ಮೊದಲನೆಯ ಮೆಟ್ಟಲ ಮೇಲೆ ಕಾಲಿಟ್ಟಾಗ ಅಲ್ಲಿ ನಿಲ್ಲುವುದು ಇನ್ನೂ ಕಷ್ಟ; ಅಲ್ಲಿ ಬಲುಜಾರಿಕೆ. ಆಗ ನಾವು ಮತ್ತೊಬ್ಬರೊಡನೆ ಒಡವೆರೆದು ನಡೆಯಬೇಕಾಗುತ್ತದೆ. ಅವರು ನಮ್ಮಲ್ಲಿ ಹಿತವಾಗಿರಬೇಕಾದರೆ ನಾವು ಅವರಲ್ಲಿ ಹಿತವಾಗಿದ್ದು ಅವರನ್ನು ಹೊಂದಿಕೊಂಡು ನಡೆಯಬೇಕು.

ಈಗಿನ ಕಾಲಕ್ಕೆ ಮುಖ್ಯವಾಗಿ ಬೇಕಾದದ್ದು ತಾಳ್ಮೆ ಮತ್ತು ಹೊಂದಿಕೆ. ಇವುಗಳ ಸಹಾಯದಿಂದ ನಾವು ಪರಗುಣಗಳನ್ನು ಗ್ರಹಿಸುವವಾದರೆ ಪ್ರಯೋಜನವುಂಟು; ಆದರಿಂದ ನಮ್ಮ ಗುಣಗಳೂ ವೃದ್ಧಿ ಹೊಂದುತ್ತವೆ. ಖಂಡನೆಯಿಂದ ಸುಮ್ಮನೆ ಮನಸ್ಸಿಗೆ ಕಿರಿಕಿರಿ, ನಿರುತ್ಸಾಹ, ನಿರಾಶೆ, ಅಷ್ಟೆ; ಪ್ರಯೋಜನವೇನೂ ಇಲ್ಲ.

ಈಗಿನ ಕಾಲದಲ್ಲಿ "ಎಲ್ಲರಿಗೂ ಸಮಾನವಾದ ಅವಕಾಶ ದೊರಕಬೇಕು" ಎಂದು ಜನರು ಹೇಳುತ್ತಿದ್ದಾರೆ. ಇದು ಒಂದು ಪಕ್ಷ ಸಾಧ್ಯವಾಗಿ, ಎಲ್ಲರಿಗೂ ಒಂದೇ ವಿಧವಾದ ಪೋಷಣ ಶಿಕ್ಷಣ ಸಂಪಾದನಗಳನ್ನು ಒದಗಿಸಿಕೊಟ್ಟೆವೆಂದು ತಿಳಿಯೋಣ; ಅವರಿಗೆ ದೇಹಾರೋಗ್ಯ, ಆತ್ಮವಿಕಾಸದಲ್ಲಿ ಅಭಿರುಚಿ, ಸುಖಸಾಮರ್ಥ್ಯಾದಿಗಳನ್ನು ಒದಗಿಸಿ ಕೊಡುವುದಕ್ಕಾಗುತ್ತದೆಯೋ? ಮೊದಲು ನಮನಮಗೆ ದೇವರುಕೊಟ್ಟಿರುವ ಶರೀರ ಬುದ್ಧ್ಯಾದಿಗಳನ್ನು ಉತ್ತಮರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು. ಆಮೇಲೆ, ಅದೃಷ್ಟ ಚೆನ್ನಾಗಿದ್ದು ಫಲ ಬಂದರೆ, ಅಗತ್ಯವಾಗಿ ಪರೋಪಕಾರಮಾಡೋಣ. ಆದರೆ ಈ ಚಿತ್ರ ವಿಚಿತ್ರ ಸೃಷ್ಟಿಯಾದ ಮನುಷ್ಯಜಾತಿಯೆಲ್ಲವೂ ಒಂದೇ ಎಂಬ ಭಾವ ಬೇಡ; ಯಂತ್ರದಿಂದ ತಯಾರಾದ ಫೋರ್ಡ್ ಮೋಟಾರು ಕಾರುಗಳೂ ಒಂದರಂತೆ ಒಂದು ಇರುವುದಿಲ್ಲ!

ಭವಿಷ್ಯತ್ ಪ್ರಪಂಚಕ್ಕೆ ಲಾಭವುಂಟಾಗಬೇಕಾದರೆ, ವೈಜ್ಞಾನಿಕ ಚಿತ್ತವೃತ್ತಿ ಅಥವಾ ಶಾಸ್ತ್ರೀಯ ಮನೋಧರ್ಮವು ಹರಡುವುದರಿಂದ. ಇದು ನಮ್ಮಲ್ಲಿ ಸ್ವಾಭಾವಿಕವಾಗಿ ಸೇರಿಹೋದರೆ, ತಥ್ಯ

ಯಾವುದು ಮಿಥ್ಯೆ ಯಾವುದು, ಪ್ರಮೆ ಯಾವುದು ಭ್ರಮೆ ಯಾವುದು ಎಂಬುದು ಗೊತ್ತಾಗಿ ಜೀವನವು ಅನಂತವಾಗಿ ಪ್ರಕಾಶಗೊಳ್ಳುತ್ತ ಹೋಗುತ್ತದೆ.

ಈಗ, ಪ್ರಪಂಚದಲ್ಲಿ ಅನೇಕ ಸುಖಸಾಧನಗಳು ತುಂಬಿಕೊಂಡು ಬಿಟ್ಟಿವೆ. ಇವುಗಳನ್ನು ಪಡೆಯುವುದೇನು ತಪ್ಪಲ್ಲ; ಆದರೆ ಅವು ಬೇಕಾದರೆ ಐಶ್ವರ್ಯ ಬೇಕು; ದೇಹಾರೋಗ್ಯ ಬುದ್ಧಿವ್ಯವಸಾಯ ಗಳೂ ದುಡ್ಡಿಲ್ಲದೆ ಲಭಿಸುವಂತಿಲ್ಲ. ಈ ಐಶ್ವರ್ಯವನ್ನು ತೆಗಳುವವರೂ ಬಡತನವನ್ನು ಹೊಗಳುವವರೂ ಇದ್ದಾರೆ. ಆದರೆ ಬಡತನದ ಬುಡ ದಲ್ಲಿ ಅನೇಕ ವೇಳೆ ಇರುವುದು ವೈರಾಗ್ಯವಲ್ಲ– ಆಲಸ್ಯ, ಅತಿವ್ಯಯ. ನ್ಯಾಯವಾದ ಮಾರ್ಗದಲ್ಲಿ ಹಣಸಂಪಾದನೆ ಮಾಡುವಷ್ಟೂ ಮಾಡ ಬೇಕು; ಅದನ್ನು ಕೂಡಿಡಲೂ ಬೇಕು—ಧನಸಂಗ್ರಹ ಸಂಚಯ ಗಳು ದೋಷವಲ್ಲ. ಧನವಿಲ್ಲದಿದ್ದರೆ ದಾನವೆಲ್ಲಿ ಬಂತು? ಟಾಟಾ ಅವರಂಥ ದಾತರೆಲ್ಲಿ ಬಂದರು?

ದಯೆ, ಮನಮಾತುಗಳಲ್ಲಿ ಋಜುತ್ವ, ವಿನಯ, ಕಾರ್ಯತತ್ಪ ರತೆ, ಮಿತಿ, ಇವುಗಳು ಇದ್ದು ಇವುಗಳ ಜೊತೆಗೆ ಅದೃಷ್ಟವಶದಿಂದ ಆರೋಗ್ಯವೂ ಲಭಿಸಿದರೆ ಪೂರ್ಣಸುಖವು ಬಂದಂತಾಗುವುದು.

ಬೊಂಬಾಯಿ ವಿಶ್ವವಿದ್ಯಾನಿಲಯದ ವಾರ್ಷಿಕ ವಿದ್ವತ್ಸಭೆಯಲ್ಲಿ ವೈಸ್ ಛಾನ್ಸೆಲರು ಮಾಡಿದ ಭಾಷಣದ ಸಾರಾಂಶ:—ತತ್ವಾನ್ವೇ ಷಣ ಮತ್ತು ಪ್ರಸಾರಣಗಳೇ ವಿಶ್ವವಿದ್ಯಾಲಯದ ಮುಖ್ಯ ಧ್ಯೇಯ. ಕೇವಲ ಲೌಕಿಕ ಮತ್ತು ವ್ಯಾವಹಾರಿಕ ಫಲಾಭಿಸಂಧಿಯೇ ಗುರಿ ಯಾಗಿ ಉಳ್ಳ ಶಿಕ್ಷಣಕ್ಕಿಂತ ಉದಾತ್ತಜ್ಞಾನ ಸಂಪಾದನೆಯೇ ಗುರಿಯಾಗಿ ಉಳ್ಳ, ಉದಾರ ಶಿಕ್ಷಣವು ಹೆಚ್ಚು ಲಾಭಕರವಾ ದದ್ದು. ಈಗಿನ ವಿಶ್ವವಿದ್ಯಾಲಯಗಳಲ್ಲಿ ಬುದ್ಧಿವಿಕಾಸಕ್ಕೇ ಪ್ರಾ ಧಾನ್ಯ; ವ್ಯಾವಹಾರಿಕ ಶಿಕ್ಷಣವಿರುವೆಡೆಯಲ್ಲಿಯೂ ಅದಕ್ಕೆ ವಿದ್ಯಾ ಬುದ್ಧಿ ಸಂಪಾದಿತವಾದ ಸಮಸ್ತ ಸಾಮಗ್ರಿ ಸಂಪತ್ತುಗಳನ್ನೂ ಉಪ

ಯೋಗಿಸಿಕೊಳ್ಳುತ್ತಾರೆ. ತತ್ವಾನ್ವೇಷಣ ಪ್ರಸಾರಣಗಳಿಗೆ ಎಲ್ಲಾ ಜನಾಂಗಗಳ ಪರಸ್ಪರ ಸಹಕಾರವು ಆವಶ್ಯಕ. ಆದ್ದರಿಂದ ಪ್ರತಿಯೊಂದು ಜನಾಂಗವೂ ಜಗತ್ತಿನ ಜ್ಞಾನಸಂಸ್ಕೃತಿಗಳಿಗೆ— ಚರಿತ್ರೆ, ಸಾಹಿತ್ಯ, ದರ್ಶನ ಮುಂತಾದವುಗಳಿಗೆ—ತಾನು ಸಲ್ಲಿಸಬೇಕಾದ ಕಾಣಿಕೆಯೇನು ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಇದು ವಿದ್ಯೆಯ ಅಂತರರಾಷ್ಟ್ರೀಯ ಫಲವಾಯಿತು. ಅದಕ್ಕೆ ರಾಷ್ಟ್ರೀಯ ಫಲವೂ ಇದೆ. ಅದೇನೆಂದರೆ, ತಮ್ಮ ತಮ್ಮ ಜನಾಂಗದ ವಿಶೇಷ ಲಕ್ಷಣಗಳನ್ನು ಒತ್ತಿ ಮಿಕ್ಕ ಪ್ರಪಂಚದೊಡನೆ ಇರತಕ್ಕ ಭೇದವನ್ನು ತೋರಿಸುವುದಲ್ಲ— ತಮ್ಮ ದೇಶದಲ್ಲಿ, ತಮ್ಮ ಮುಂದೆ, ತಮ್ಮ ಸುತ್ತ ಇರುವ ಸಾಮಗ್ರಿಗಳನ್ನು ಜನರ ಉಪಯೋಗಕ್ಕೆ ಒದಗಿಸಿಕೊಳ್ಳುವ ಉತ್ತಮಮಾರ್ಗವಾವುದು ಎಂದು ಯೋಚಿಸಿ ಅದನ್ನು ಅನುಸರಿಸುವುದು.

ಡಾಕಾ ವಿಶ್ವವಿದ್ಯಾನಿಲಯದ ವಾರ್ಷಿಕವಿದ್ವತ್ಸಭೆಯಲ್ಲಿ ಛಾನ್ಸೆಲರೂ ವೈಸ್‌ಛಾನ್ಸೆಲರೂ ಮಾಡಿದ ಭಾಷಣಗಳ ಸಾರಾಂಶ:—

ವಿಶ್ವವಿದ್ಯಾನಿಲಯದ ಪ್ರೌಢ ಶಿಕ್ಷಣದಿಂದ ಆರಂಭ ಸಾಮರ್ಥ್ಯ ವಿಮರ್ಶನಸಾಮರ್ಥ್ಯ ಪ್ರತಿಭಾಶಕ್ತಿಗಳು ಉದ್ಬುದ್ಧವಾಗಿ ಬೆಳೆಯುತ್ತವೆ. ಯಾವ ಕಾರ್ಯಕ್ಷೇತ್ರದಲ್ಲಿಯೇ ಆಗಲಿ ಜಯಸಂಪಾದನೆಗೆ ಈ ಗುಣಗಳು ಅತ್ಯಾವಶ್ಯಕ.

ವಿಶ್ವವಿದ್ಯಾನಿಲಯದಲ್ಲಿ ಮಾನಸಿಕ ಶಿಕ್ಷಣವೂ, ಜೀವನದ ಸಮಸ್ಯೆಗಳ ಪರಿಚಯವೂ ಉಂಟಾಗುತ್ತವೆ. ಆ ಮಾನಸಿಕ ಶಿಕ್ಷಣದಿಂದ ಬಂದ ವಿವೇಚನ ವಿಮರ್ಶನ ಕಲ್ಪನಶಕ್ತಿಗಳನ್ನು ಲೋಕಾನುಭವದಿಂದ ಬಲಪಡಿಸಿಕೊಂಡು ಅವುಗಳನ್ನು ಈ ಜೀವನ ಸಮಸ್ಯೆಗಳಿಗೆ ಉಪಯೋಗಿಸಿ ಪ್ರಯೋಜನ ಪಡೆಯಬೇಕು. ಈಗಿನ ಲೋಕವು ಅಶಾಂತ; ಅದರ ಅನುಭವವು ಅಸುಖ. ಆದ್ದರಿಂದ ಜೀವನ ಸಮಸ್ಯಾಪೂರಣವನ್ನು ಕೈಕೊಂಡಾಗ, ಇಲ್ಲಿ ಕಲಿತ ಜೀವನತತ್ತ್ವಾದರ್ಶಗಳು–ಲೋಕಸೇವೆಯಿಂದಲೇ ಸುಖ, ಅಪಜಯವಾದರೆ ಆತ್ಮವಿಶ್ವಾಸವನ್ನು

ಬಿಡಬಾರದು, ಜಯವಾದರೆ ದ್ವೇಷ ಮಾತ್ಸರ್ಯಾದಿಗಳಿಗೆ ಎಡೆಗೊಡಬಾರದು, ಮುಂತಾದವುಗಳು — ಶಾಂತಿ ಸುಖಗಳನ್ನು ತರಬೇಕು. ಈಗ ಎಲ್ಲೆಲ್ಲಿಯೂ ಪರಸ್ಪರ ಅಪನಂಬಿಕೆ ಅವಿಶ್ವಾಸಗಳು ಸಾಂಕ್ರಾಮಿಕವಾಗಿ ಹಬ್ಬಿಬಿಟ್ಟಿವೆ. ಇವುಗಳನ್ನು ಬಿಟ್ಟು ಸಹಕರಿಸಿದ ಹೊರತು ತೊಡರಾದ ಆಧುನಿಕ ಸಮಸ್ಯೆಗಳನ್ನು ಬಿಡಿಸುವುದು ಅಸಾಧ್ಯ. ಉತ್ಸಾಹಪೂರ್ಣರೂ ಉಚ್ಚಧ್ಯೇಯವುಳ್ಳವರೂ ಆದ ಯುವಕರು ಇದಕ್ಕೆ ಮನಸ್ಸು ಕೊಡಬೇಕು.

ಅಗಸ್ತ್ಯರು

ಅಗಸ್ತ್ಯರು ದಕ್ಷಿಣದೇಶಕ್ಕೆ ಬಂದು ತಮಿಳು ಸಾಹಿತ್ಯಕ್ಕೆ ಮೂಲಪುರುಷರಾದರೆಂದು ಹೇಳುತ್ತಾರೆಯಷ್ಟೆ. ಇದು ಬರಿಯ ಕಥೆಯೆಂದೂ, ಅವರ ಹೆಸರಿನಲ್ಲಿರುವ ವೈದ್ಯ ವ್ಯಾಕರಣ ಮುಂತಾದ 'ಸಂಗಂ' ಸಾಹಿತ್ಯವೆಲ್ಲಾ ಅರ್ವಾಚೀನವೆಂದೂ, ರಾಮಾಯಣದಲ್ಲಿ ಬರುವ ಅಗಸ್ತ್ಯ ವೃತ್ತಾಂತವು ಪ್ರಕ್ಷಿಪ್ತವೆಂದೂ ಎನ್. ಎನ್. ಶಿವರಾಜ ಪಿಳ್ಳೆಯವರು ತಮ್ಮ "ತಮಿಳುನಾಡಿನಲ್ಲಿ ಅಗಸ್ತ್ಯರು" (Agasthya in Tamil Lands) ಎಂಬ ಪುಸ್ತಕದಲ್ಲಿ ಪ್ರತಿಪಾದಿಸಿದ್ದಾರೆ.

ನಾಗರು

ಮ|| ಕೆ. ಆರ್. ಸುಬ್ರಹ್ಮಣ್ಯಂ, ಎಂ.ಎ. ಎಂಬವರು "ತಮಿಳುನಾಡಿನಲ್ಲಿ ಶೈವಮತದ ಉತ್ಪತ್ತಿ ಮತ್ತು ಚರಿತ್ರೆ" (Origin of Saivism and its History in the Tamil Land) ಎಂಬ ಗ್ರಂಥವನ್ನು ಬರೆದಿದ್ದಾರೆ. ಅದರಲ್ಲಿ "ನಾಗರ" ವಿಚಾರ ಬರುತ್ತದೆ. ಈಗ 'ನಾಗರು' ಎಂದರೆ ಸಾಮಾನ್ಯವಾಗಿ ಹಾವು ಎಂದೇ ಅರ್ಥವಾಗುತ್ತಿದೆ. ಆದರೆ 'ನಾಗಾನಂದ' ಮುಂತಾದ ಕಾವ್ಯಗಳನ್ನು ಓದಿದವರಿಗೆ ನಾಗರು ಕೇವಲ ಹಾವುಗಳಲ್ಲವೆಂಬುದು ಗೊತ್ತಾಗುತ್ತದೆ. ರಾಮಾಯಣದ ಕಪಿಗಳು ಹೇಗೆ ಒಂದು ಬಗೆಯ ಜನರೆಂದು ಕೆಲವರು ಅಭಿಪ್ರಾಯಪಡುತ್ತಾರೋ ಹಾಗೇ ನಾಗರೂ ಒಂದು ಬಗೆಯ

ಜನರಾಗಿದ್ದರೆಂದು ಹಲವರು ಅಭಿಪ್ರಾಯಪಡುತ್ತಾರೆ. ಇವರ ಉತ್ಪತ್ತಿಯು ವೈದಿಕಕಾಲದಲ್ಲಿದ್ದಿರಬಹುದು. ವೇದದಲ್ಲಿ ಇವರು ಅಹಿಗಳೆಂದೂ, ಸಾಹಿತ್ಯದಲ್ಲಿ ನಾಗರೆಂದೂ ಕರೆಯಲ್ಪಟ್ಟಿದ್ದಾರೆ. ಇವರ ಆವಾಸಸ್ಥಾನ 'ಪಾತಾಳ'. ಈ 'ಪಾತಾಳವು' ದಕ್ಷಿಣದೇಶದ ತುದಿ ಎಂದು ಹೇಳುವರು.

ನಾಗರು 'ಶಿವ'ನ ಆಭರಣ. ಶಿವನು ದಕ್ಷಿಣದೇಶದ 'ದ್ರಾವಿಡ' ದೇವರೆಂದು ಊಹೆ. ಆದರೆ ವೇದದಲ್ಲಿ ಶಿವ-ರುದ್ರನ ವರ್ಣನೆ ಇದೆ. ಅಂತು, ಮೊದಲು ಆಲಂಕಾರಿಕವಾಗಿ ಆಭರಣವೆಂದು ಉಕ್ತರಾಗಿದ್ದ ನಾಗರು ಆಮೇಲೆ ಅಕ್ಷರಶಃ ಹಾವಿನ ರೂಪದಲ್ಲಿ ಒಡವೆಯಾಗಿ ಪರಿಣತರಾದಂತಿದೆ. ಛಂದಶ್ಶಾಸ್ತ್ರಕರ್ತನಾದ ಪಿಂಗಳನು ಒಬ್ಬ 'ನಾಗ'. ಈ ನಾಗರ ಸಂಬಂಧವು ಈಗಲೂ 'ನಾಯರ್' (ಜನರು) ನಾಗಪುರ, ನಾಗಪಟ್ಟಣ, ನಾಗವರ್ಮ(?) ಮುಂತಾದವುಗಳಲ್ಲಿ ಕಂಡುಬರುತ್ತದೆ.

ಪಂಚಮಹಾಶಬ್ದ

"ಪಂಚಮಹಾಶಬ್ದ"ಗಳೆಂದರೆ ಸಾಮಾನ್ಯವಾಗಿ 'ಪಂಚಮಹಾವಾದ್ಯ'ಗಳೆಂದರ್ಥ. ಈ ಪಂಚಮಹಾವಾದ್ಯಗಳು ಒಂದೊಂದು ಕಡೆ ಒಂದೊಂದು ಬಗೆಯವಾಗಿವೆ. (Corp. Insc. Indicarum, Vol. III. p. 296, et seq.) ಆದರೆ ಈ ಪದಕ್ಕೆ 'ಮಹಾಪ್ರತೀಹಾರ' ಮುಂತಾದ ಪಂಚಕರ್ಮಸ್ಥಾನಗಳೆಂದೂ ಅರ್ಥವಿರುವಂತಿದೆ.* (ರಾಜತರಂಗಿಣಿ, ತರಂಗ ೪, ಶ್ಲೋಕ ೧೪೦ ಇತ್ಯಾದಿ.)

---

* B· J. R. A. S., August, 1931.

THE DEVARAJA BAHADUR CHARITY FUNDS
LITERARY SECTION

1. Applications are invited before the 15th January 1932, from authors ho desire to submit their books and manuscripts for patronage from the evaraja Bahadur Charity Funds— Literary Section. Authors should submit eir works along with their applications.

2. A *Kannada* :—The works submitted for patronage may be original orks in *Kannada*, translation from other languages into *Kannada* or Critical itions of standard *Kannada* works.

B. Sanskrit :—In the case of Sanskrit, they may be critical editions standard works *or* an essay in Sanskrit Prose on any one of the following bjects :—

i. The Gods of the Rig Veda and the Gods of Modern Hinduism.

ii. How are the Dharma Sastras to be applied to life in Modern Conditions?

iii. The Attitude of Shastras towards conversion and reconversion into Hinduism.

N. B.—The idea is to create a Modern Literature in easy Sanskrit Prose dealing with the many field of Sanskrit learning in the spirit of research and freedom of discussion and bringing to bear upon the problems of the day the Ancient Wisdom of India.

The order of preference in making the award will be as follows :—

(i) Original works, (ii) Translation, (iii) Critical editions of standard works.

The works may be either manuscripts or printed books. In the case of e latter, the date of publication should not be earlier than the 1st Jan. 1931.

The applications should be accompanied by a Memorandum stating how r the work is original, or in the case of a translation, the original source d indicating the special claims of the work for the prize.

The manuscripts should be written legibly and only on one side of the per. Manuscripts when once received, will not be accepted a second time.

3. The competition is open to all in the case of *Kannada* works, but all be confined to authors or editors in the Mysore State in the case of nskrit works.

4. The awards shall be made on the judgment of a Committee appointed the Director of Public Instruction.

5. There will ordinarily be two prizes, one of Rs. 500 and the other of . 200 to be awarded to the two best competitors. But the Director of blic Instruction may, according to the special circumstances of each year, thdraw or suitably modify the value of either one or both of the prizes in e absence of works coming up to the mark.

6. The award may be in the shape of an absolute grant to the author in e case of a printed book and in the case of manuscripts, a contribution wards the printing of the work subject to the author guaranteeing its publi-tion within a year, or his agreeing to hand over the copyright of the anuscripts to Government.

7. In every case, the decision of the Director of Public Instruction shall final.

8. Copies of books submitted in response to this advertisement will not returned, but manuscripts so submitted will be returned to the applicants ter June 1932.

N. S. SUBBA RAO,
Director of Public Instruction.

ಕನ್ನಡ ಸಣ್ಣಕಥೆಗಳ ಸ್ಪರ್ಧೆ

(ನಂದಳಿಕೆ ಲಕ್ಷ್ಮೀನಾರಣಪ್ಪನವರ ಜ್ಞಾಪಕಾರ್ಥವಾಗಿ ಏರ್ಪಟ್ಟದ್ದು)

ನಿ ಯ ಮ ಗ ಳು

(೧) ಮೆಟ್ರಿಕ್ ಅಥವಾ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ವಿಶ್ವವಿದ್ಯಾಲಯದ ಯಾವುದಾದರೊಂದು ಪರೀಕ್ಷೆಗೆ ಓದುತ್ತಿರುವ ಕರ್ಣಾಟಕ ವಿದ್ಯಾರ್ಥಿಗಳಾರಾದರೂ ಈ ಸ್ಪರ್ಧೆಗೆ ಕಥೆಗಳನ್ನು ಕಳುಹಬಹುದು.

(೨) ಸ್ಪರ್ಧೆಗೆ ಬರುವ ಕಥೆಗಳಲ್ಲಿ ಶ್ರೇಷ್ಠವಾದುದನ್ನು ಬರೆದವರಿಗೆ "ಮುದ್ದಣ ಪದಕ" ಎಂಬ ಸ್ವರ್ಣಪದಕವು ಬಹುಮಾನವಾಗಿ ಕೊಡಲ್ಪಡುವುದು. ಸ್ವರ್ಣಪದಕವು ದೊರೆಯದ ಕಥೆಗಳಲ್ಲಿ ಶ್ರೇಷ್ಠವಾದುವೆಂದು ಪರಿಗಣಿತವಾದವುಗಳಿಗೆ ದ್ರವ್ಯರೂಪವಾದ ಅಥವಾ ಪುಸ್ತಕರೂಪವಾದ ಬಹುಮಾನವನ್ನು ಸಂಘವು ಕೊಡಬಹುದು.

(೩) ಕಥೆಯು ಸ್ವಕಲ್ಪಿತವಾದದ್ದಾಗಿಯೂ ಇದುವರೆಗೂ ಪ್ರಕಟವಾಗದ್ದಾಗಿಯೂ ಇರಬೇಕು.

(೪) ಒಂದಕ್ಕಿತಲೂ ಹೆಚ್ಚು ಕಥೆಗಳನ್ನು ಒಬ್ಬರೇ ಸ್ಪರ್ಧೆಗೆ ಕಳುಹಲಾಗದು.

(೫) ಕಥೆಯನ್ನು ಕಾಗದದ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರದಲ್ಲಿ ಬರೆಯಬೇಕು.

(೬) ಬಹುಮಾನವನ್ನು ಪಡೆದ ಕಥೆಯನ್ನು "ಪ್ರಬುದ್ಧ ಕರ್ಣಾಟಕ"ದಲ್ಲಿ ಪ್ರಕಟಿಸುವ ಹಕ್ಕು ಸಂಘಕ್ಕೆ ಇರುತ್ತದೆ.

(೭) ಲೇಖಕರು ತಮ್ಮ ಹೆಸರು, ವಿಳಾಸ, ತಾವು ಓದುವ ಪಾಠಶಾಲೆ, ತರಗತಿ, ಇವುಗಳನ್ನು ಪ್ರತ್ಯೇಕ ಕಾಗದದಲ್ಲಿ ಬರೆದು ಕಳುಹಿಸಬೇಕು.

(೮) ಸ್ಪರ್ಧೆಗೆ ಬಂದ ಕಥೆಗಳನ್ನು ಹಿಂದಕ್ಕೆ ಕಳುಹಲಾಗುವುದಿಲ್ಲ.

(೯) ಸ್ಪರ್ಧೆಗೆ ಸೇರುವವರು ತಮ್ಮ ಕಥೆಯನ್ನು ಪ್ರವೇಶ ಧನವಾದ ಎಂಟು ಆಣೆಗಳೊಡನೆ ೧೯೩೧ನೆಯ ಅಕ್ಟೋಬರು ತಿಂಗಳು ೩೧ನೆಯ ತಾರೀಖಿನೊಳಗೆ ತಲುಪುವಂತೆ ರಿಜಿಸ್ಟರ್ಡ್ ಪೋಸ್ಟು ಮೂಲಕ ಉಪಾಧ್ಯಕ್ಷರ ಹೆಸರಿಗೆ ಕಳುಹಿಸಬೇಕು.

(೧೦) ಯಾವ ಕಥೆಗೂ ಪದಕ ಪಡೆಯುವಷ್ಟು ಯೋಗ್ಯತೆ ಇಲ್ಲವೆಂದು ಪರೀಕ್ಷಕರು ಅಭಿಪ್ರಾಯಪಟ್ಟರೆ, ಪದಕಕ್ಕೆ ಬದಲಾಗಿ ಒಂದು ಅಥವಾ ಹೆಚ್ಚು ಬಹುಮಾನಗಳನ್ನು ಪುಸ್ತಕರೂಪವಾಗಿಯೇ ಕೊಡಬಹುದು.

ಸ್ಪರ್ಧೆಯ ಫಲಿತಾಂಶವು "ಪ್ರಬುದ್ಧ ಕರ್ಣಾಟಕ"ದ ಕಾಮನ ಸಂಚಿಕೆಯಲ್ಲಿ ಪ್ರಕಟಿತವಾಗುವುದು.

ಕರ್ಣಾಟಕ ಸಂಘ — **ಕಾರ‍್ಯದರ್ಶಿ**
ಸೆಂಟ್ರಲ್ ಕಾಲೇಜು, ಬೆಂಗಳೂರು — ಕರ್ಣಾಟಕ ಸಂಘ

Printed at the B. B. D. Power Press, Bangalore City.